
ಕಲ್ಯಾಣ ಕಿರಣ

ಸಂಪುಟ : ೧೪
ಸಂಚಿಕೆ : ೧
ಮೇ, ೧೯೮೫
ಬಸವ ಶಕೆ : ೮೪೬
ಬೆಲೆ : ೨-೦೦





ಬಸವ ಜಯಂತಿ ಸಂಚಿಕೆ ಕುರಿತು
ಒಂದೆರಡು ಮಾತು

ಈ ವರುಷ ಹಲವಾರು ಜಯಂತಿಗಳು ಒಂದೇ ತಿಂಗಳಿನಲ್ಲಿ ಒದಗಿ ಬಂದವು. ಮಾರ್ಚ ಸಂಚಿಕೆಯನ್ನು ಪೂಜ್ಯ ಮಾತಾಜಿಯವರನ್ನು ಕುರಿತ ಲೇಖನ, ಕವನ – ಉಳ್ಳ ಸಂಚಿಕೆಯನ್ನಾಗಿ ಮಾಡಿ, ಏಪ್ರಿಲ್ ಸಂಚಿಕೆಯನ್ನು ಬಸವ ಜಯಂತಿಯ ಸಂಚಿಕೆಯನ್ನಾಗಿ ರೂಪಿಸುವ ವಿಚಾರವಿತ್ತು. ಬೀದರನಲ್ಲಿ ನಡೆದ ವಿಶೇಷ ಕಾರ್ಯಕ್ರಮಗಳ ಒತ್ತಡದಲ್ಲಿ ಪೂಜ್ಯ ಮಾತೆಯವರ ಕಡೆಯಿಂದ ಸಕಾಲದಲ್ಲಿ ಅವರ ಬರಹಗಳು ಬರದ ಕಾರಣ, ಮಾರ್ಚ–ಏಪ್ರಿಲ್ ಎರಡೂ ತಿಂಗಳ ಸಂಚಿಕೆಯನ್ನು ಸಂಯುಕ್ತವಾಗಿ ತರಲಾಯಿತು. ಹೀಗಾಗಿ ಮಾರ್ಚ ಸಂಚಿಕೆಗಾಗಿ ಸಿದ್ಧವಾದ ಹೊದ್ದಿಕೆಯಲ್ಲಿ ಎಲ್ಲ ಪುಟಗಳನ್ನು ಸಂಯೋಜಿಸಿ ಕಳಿಸಲಾಯಿತು.

ಆದ್ದರಿಂದ ಬಸವ ಜಯಂತಿ ಏಪ್ರಿಲ್‌ದಲ್ಲಿಯೇ ಆಗಿ ಹೋಗಿದ್ದರೂ ಮೇ ಸಂಚಿಕೆಯ ಮುಖಪುಟಕ್ಕೆ ವಿಶ್ವಗುರು ಬಸವಣ್ಣನವರ ಭಾವಚಿತ್ರ ಮತ್ತು ಒಳಗೆ ಅವರನ್ನು ಕುರಿತ ಕವನ ಲೇಖನ ಕೊಡಲಾಗಿದೆ. ನಮಗೆ ಎಂದೆಂದೂ ಬಸವ ಜಯಂತಿಯೇ ಆದ ಕಾರಣ, ಈ ಲೋಪವನ್ನು ಕ್ಷಮಿಸುವರೆಂದು ನಂಬುವೆ. ಬಸವ ಸಂಚಿಕೆ ಮೇದಲ್ಲಿ ಹೊರತರುವುದಕ್ಕಾಗಿ ಕ್ಷಮೆ ಕೋರುವೆ.

—ಶಿವರಾಜ ಪಾಟೀಲ,
ಕಾರ್ಯನಿರ್ವಾಹಕ ಸಂಪಾದಕ.

ಕಲ್ಯಾಣ ಕಿರಣ

ಸಂಪುಟ : ೧೪ ಸಂಚಿಕೆ : ೧ ಬಸವ ಸಕೆ : ೮೪೬ ಮೇ, ೧೯೮೫

ಬಸವ ಚರಣಕೆ ನುಡಿ ನೈವೇದ್ಯ


ಬಹುಮುಖದ ಪ್ರತಿಭೆಯಿಂ ಬಹುಮುಖದ ನಿಲುಮೆಯಿಂ
ಬಯಲ ಬ್ರಹ್ಮನಾಗಿ ಬೆಳೆದ ಓ ಬಸವ ಭಾಸ್ಕರ
ಹರಿವ ನದಿಗೆ ಮೈಯೆಲ್ಲ ಕಾಲು
ಉರಿವ ಬೆಂಕಿಗೆ ಮೈಯೆಲ್ಲ ನಾಲಿಗೆ
ಸುಳಿವ ಗಾಳಿಗೆ ಮೈಯೆಲ್ಲ ಕೈ
ಎಂಬಂತೆ ನಿನ್ನ ವ್ಯಕ್ತಿತ್ವಕ್ಕೆ ಹಲಹನ್ನೊಂದು ಮುಖ
ನಮ್ಮ ಹೃದಯದ ಕಣ್ಣು ಅಗಲಗೊಂಡಷ್ಟೂ
ನಿನ್ನ ವ್ಯಕ್ತಿತ್ವ ದರ್ಶನ ದಿವ್ಯ, ಭವ್ಯ !
ನಮ್ಮ ಬುದ್ಧಿಯ ಪಾತ್ರೆ ತಾನು ಹಿರಿದಾದಷ್ಟೂ
ನಿನ್ನ ಅಮೃತ ಸಂದೇಶ ಗಂಗೆ ತುಂಬಿ ತುಳುಕುವುದಷ್ಟು !
ತಾ ಮಾಡಿದ ಕಂದ ತನ್ನ ತೊಡೆಯನೇರಿದ
ಎಂದು ಎತ್ತಿಕೊಳ್ಳಲ್ಪಟ್ಟೆ ಆ ಪರಮಾತ್ಮನಿಂದ !
ತಾ ನಿರ್ಮಿಸಿದ ಕೂಸು ತನ್ನ ಹೃದಯ ಬೆಳಗಿತು
ಎಂದು ಕರ್ತ ಒಲಿಯುವ ತೆರದಿ ಬೆಳೆದು ನಿಂತೆ !
ತಾ ಸೃಷ್ಟಿಸಿದ ಶಿಶು ತನ್ನ ತಲೆಯನೇರಿತು
ಎಂದು ದೇವ ತಲೆದೂಗುವೊಲು ಮೇಲೇರಿ ಬಿಟ್ಟೆ !
ಕರ್ತನು ಕಟೆದಿಟ್ಟ ಬಹು ದಿವ್ಯ ಶಿಲ್ಪ ನೀನಾದೆ
ಮನುಕುಲವು ತಾನಿತ್ತ ಭವ್ಯ ಕಾಣಿಕೆಯಾಗಿ ನಿಂದೆ.
ದೇವನೊಲಿಮೆಯ ಪಡೆದು ಘನನು ನೀನಾದೆಯೋ ಮೇಣ್
ನಿನ್ನ ನಿಲುವನು ಬೆರಗಿನಿಂ ನೋಡಿ ಕರ್ತ ತಾನೊಲಿದನೋ ?
(ನಾನರಿಯೆನೀವರೆಗೆ)
ಅತ್ಯತಿಷ್ಟ ದಶಾಂಗುಲ ನೀನು ನಮ್ಮ ಮತಿ ಮಾಪನಕ್ಕೆ
ಮೂಕ ವಿಸ್ಮಿತಳಾಗಿ ನಮನಗೈಯುವೆ ತಂದೆ ನಿನ್ನ ಕೃತಿಗೆ !

—ಜಗದ್ಗುರು ಮಾತೆ ಮಹಾದೇವಿ

ಕಲ್ಯಾಣ ಕಿರಣ

ಸಂಪುಟ ೧೪ ಸಂಚಿಕೆ : ೧ ಬಸವಶಕೆ: ೮೪೬

ಕಿರಣಗನ್ನಡಿ



ಧನ ಮತ್ತು ವೈರಾಗ್ಯ ಕುರಿತು

ಬಸವಣ್ಣನವರ ಮತ್ತು ಅರವಿಂದರ ವಿಚಾರಧಾರೆ

ಧಾರ್ಮಿಕ ಪಥದಲ್ಲಿ ನಾವು ನಡೆಯುತ್ತಿರುವಾಗ, ಕಾರ್ಯ ಮಾಡುತ್ತಿರುವಾಗ ಕೆಲವೊಂದು ಜನ, ವಿವಿಧ ದೃಷ್ಟಿಕೋನದವರು ವಿವಿಧ ರೀತಿಯಲ್ಲಿ ಮಾತನಾಡುತ್ತಾರೆ. ಯಾವುದವನ್ನೇ ಆದರೂ ಸಾಕಷ್ಟು ಆಲೋಚಿಸಿ, ದೃಢವಾದ ಕೆಲವು ನಂಬಿಕೆಗಳ ಆಧಾರದ ಮೇಲೆ ನಮ್ಮ ಆಚಾರ–ವಿಚಾರಗಳನ್ನು ರೂಪಿಸಿಕೊಂಡಿದ್ದರೂ ಕೆಲವೊಮ್ಮೆ ಮನಸ್ಸು ಕೊಂಚ ಹೊಯ್ದಾಡುವುದು ಸ್ವಾಭಾವಿಕ (ಹೊಯ್ದಾಡುವ ಸ್ಥಿತಿಯನ್ನು ಸಾಮಾನ್ಯವಾಗಿ ನಾವು ದಾಟಿರುವುದು ಸಹಜವೇ !) ಅಂಥ ಕೆಲವು ಪ್ರಸಂಗಗಳಲ್ಲಿ ನಮ್ಮ ಸಾಧನೆ, ಧ್ಯೇಯ, ಧೋರಣೆ, ಪ್ರವೃತ್ತಿ, ಆದರ್ಶ ಸರಿಯೇ ಎಂಬ ಪುನರ್ ಆಲೋಚನೆಗೆ ತೊಡಗಬಹುದೆಂದು ಭಾವಿಸೋಣ. ಅಥವಾ ಹಿಡಿದ ಮಾರ್ಗ ಸರಿಯೇ ? ಎಂದು ಖಚಿತಪಡಿಸಿಕ್ಕೊಲು ಯತ್ನಿಸಬಹುದು.

ಒಂದು ಹೊಸ ದಾರಿಯಲ್ಲಿ ನಮ್ಮ ವಾಹನಗಳು ಸಾಗುತ್ತಿರುವಾಗ. ಸರಿದಾರಿಯಲ್ಲಿ ಹೋಗುತ್ತಿರುವೆವೆ ಎಂಬ ಸಂದೇಹ ಉಂಟಾದಾಗ ಖಚಿತ ಪಡಿಸಿಕೊಳ್ಳಲು ದಾರಿಯ ಬದಿಯಲ್ಲಿ ಇರುವ ಓರ್ವ ಪಥಿಕನನ್ನೋ ಕೇಳುತ್ತೇವೆ. ಕೆಲವೊಮ್ಮೆ ಪೂರ್ಣಜ್ಞಾನವಿಲ್ಲದ ಅವರು ತಪ್ಪು ತಪ್ಪಾಗಿಯೂ ಹೇಳಬಹುದು. ಆಗ ಮೈಲಿಗಲ್ಲುಗಳನ್ನು ಅರಸುತ್ತೇವೆ. ಅಂಥದೊಂದು ಮೈಲಿಗಲ್ಲು ಕಂಡಾಗ, ನಮ್ಮ ದಾರಿ ಸರಿಯೆಂದು ಖಚಿತಪಡಿಸಿದಾಗ ನೆಮ್ಮದಿ ತಾಳುತ್ತೇವೆ. ಈ ಎಲ್ಲ ನನ್ನ ವಿವರಣೆಯನ್ನು ಅಕ್ಕಮಹಾದೇವಿ ಒಂದೇ ಒಂದು ವಚನದಲ್ಲಿ ತುಂಬಾ ಚೆನ್ನಾಗಿ ಹೇಳುತ್ತಾಳೆ :

ಹೆದರದಿರು ಮನವೆ ಬೆದರದಿರು ತನುವೆ
ನಿಜವನರಿದು ನಿಶ್ಚಿಂತವಾಗಿರೆಲೆ ಮನವೆ
ಫಲವಾದ ಮರನ ಇಡುವರೊಂದು ಕೋಟಿ
ಎಲವೆದ ಮರನ ಇಡುವರೊಬ್ಬರ ಕಾಣೆ.
ಭಕ್ತಿಯುಳ್ಳವರ ಬೈವರೊಂದು ಕೋಟಿ
ಚನ್ನಮಲ್ಲಿಕಾರ್ಜುನಯ್ಯಾ, ಭಕ್ತಿಯಿಲ್ಲದವರ ಬೈವರೊಬ್ಬರ ಕಾಣೆ,
ನಿಮ್ಮ ಶರಣರ ನುಡಿಯೆ ಎನಗೆ ಗತಿ, ಮತಿ, ಸೋಪಾನ!

ಕೆಲವು ಸಂದಿಗ್ಧ ಚಣಗಳಲ್ಲಿ ಶರಣರ, ಮಹಾತ್ಮರ ನುಡಿಗಳೇ ನಿಜಗತಿ (ಆಶ್ರಯ,) ಮತಿ (ಬುದ್ಧಿಗೆ ಬೆಳಕು ತೋರುವವು.) ಸೋಪಾನ (ಮೇಲೇರುವ ಮೆಟ್ಟಿಲು),

ಒಂದು ದಿನ ಬಿಜಾಪುರದಲ್ಲಿ ಪ್ರವಚನ ನಡೆಯುತ್ತಿರುವಾಗ ಡಾ॥ ಚನ್ನೇಗೌಡ ಎಂಬುವವರು ಅರವಿಂದಾಶ್ರಮದ ಒಂದು ಪ್ರಕಟಣೆ, "ಶ್ರೀ ಮಾತೆ" ಎಂಬ ಶ್ರೀ ಅರವಿಂದರು ಬರೆದ ಒಂದು ಪುಸ್ತಕ The Mother ದ ಕನ್ನಡಾನುವಾದ ತಂದುಕೊಟ್ಟರು. ಸಮಯ ಸಿಕ್ಕಾಗ ಮನಸ್ಸು ಹಾಯಿಸಿದಾಗ, ತುಂಬಾ ಹರ್ಷವೆನಿಸಿತು. ನಮ್ಮ ಅಂತರಂಗದ ಅನಿಸಿಕೆ ನಂಬಿಕೆಗಳಿಗೆ ಅಲ್ಲಿ ಮೂರ್ತರೂಪ ಸಿಕ್ಕಂತೆನಿಸಿತು. ಅರವಿಂದರ ಕೆಲವು ಮಾತುಗಳು ಬಸವಣ್ಣನವರ ವಚನಗಳಿಗೆ ಬರೆದ ವ್ಯಾಖ್ಯಾನವೇನೋ ಎನ್ನಿಸಿತು. ಇಲ್ಲಿ ಅಂಥದೊಂದು ವಿಚಾರ, ಅಧ್ಯಾಯ ೪ ರಲ್ಲಿ ಬರುವ ಕೆಲವು ಮಾತುಗಳನ್ನು ಪ್ರಸ್ತಾಪಿಸುತ್ತೇನೆ. "ಧನವು ವಿಶ್ವಚಾಲಕ ಶಕ್ತಿಯ ಒಂದು ಪ್ರತ್ಯಕ್ಷ ಸಂಕೇತ ಈ ಶಕ್ತಿಯ ಭೂಲೋಕದಲ್ಲಿ ವ್ಯಕ್ತವಾಗಿ, ಅನ್ನಮಯ ಪ್ರಾಣಮಯ ಕ್ಷೇತ್ರಗಳಲ್ಲಿ ಅದರ ಕಾರ್ಯ ಜರುಗುವುದು ಬಾಹ್ಯ ಜೀವನದ ಪರಿಪೂರ್ಣತೆಗೆ ಧನ ಬಲವು ಅಪರಿಹಾರ್ಯವಾಗಿದೆ ಇದರ ಉತ್ಪತ್ತಿ, ಮತ್ತು ಯಥಾರ್ಥ ಪ್ರಯೋಜನ, ಇವುಗಳ ದೃಷ್ಟಿಯಿಂದ ಈ ಶಕ್ತಿಯು ಈಶ್ವರನದೇ. ಆದರೆ, ಈಶ್ವರನ ಇನ್ನುಳಿದ ಶಕ್ತಿಗಳಂತೆ ಇದೂ ಇಲ್ಲಿ ಒಬ್ಬರಿಲ್ಲೊಬ್ಬರ ಕೈಗೆ ಸಿಲುಕಿಕೊಂಡಿದೆ". (ಪುಟ ೨೧)

ಸಂಪತ್ತು ಐಹಿಕ ಬದುಕಿಗೆ ಅನಿವಾರ್ಯ. ಅನ್ನಮಯ ಕೋಶದ ರಕ್ಷಣೆಯಾಗಲೀ ಪ್ರಾಣಮಯ ಕೋಶದ ರಕ್ಷಣೆಯಾಗಲೀ ಆಗುವುದು ಈ ಧನದಿಂದಲೇ ಐಹಿಕ ಬದುಕು, ಸಾಮಾಜಿಕ ಸಮೃದ್ಧಿ ಈ ಎಲ್ಲವೂ ಧನದಿಂದಲೇ ಸಾಧ್ಯ. ಕೇವಲ ಬದುಕಷ್ಟೇ ಅಲ್ಲ, ಧರ್ಮ ಪ್ರಸಾರ, ಮಾನವೀಯ ಸೇವೆ, ಜ್ಞಾನ ಪ್ರಚಾರ ಎಲ್ಲವೂ ಧನದಿಂದಲೇ ಸಾಧ್ಯ. ಈ ಅನಿವಾರ್ಯವಾದ ಒಂದು ಉಪಕರಣವನ್ನು, ಸಾಧನವನ್ನು ಜರಿದಾಗಲೀ, ತೊರೆದಾಗಲೀ ಬದುಕುವುದು ಸಾಧ್ಯವೇ ಇಲ್ಲ. ಆದ್ದರಿಂದ ಇದನ್ನು ಸಾಧನಾಂಗವಾಗಿ, ಈಶ್ವರ ಶಕ್ತಿಯನ್ನಾಗಿ ಮಾಡಿಕೊಂಡು ಬದುಕುವುದೊಂದೇ ಆದರ್ಶ ಮಾರ್ಗ.

ಈ ಉದಾತ್ತೀಕರಣ (Sublimation) ಸಿದ್ಧಾಂತವನ್ನು ಬಸವಣ್ಣನವರು ಮತ್ತು ಅರವಿಂದರು ಪ್ರತಿಪಾದಿಸುವಲ್ಲಿ ಸಮಷ್ಟಿ ದೃಷ್ಟಿಯ ಹಿತಚಿಂತನೆ ಉಭಯತರಲ್ಲಿ ತುಂಬಿ ತುಳುಕುತ್ತಿರುವುದು. ಇಷ್ಟೇ ಅಲ್ಲ ಅವರು ಎಷ್ಟು ಪ್ರಾಯೋಗಿಕ ತತ್ತ್ವಜ್ಞಾನಿಗಳು (Pra-

ctical Philosophers) ಎಂಬುದು ಮನವರಿಕೆಯಾಗುವುದು. ಧನಾನ್ವೇಷಕರೂ ಧನ ಸಂಚಯರತರೂ ಧನದ ಒಡೆಯರಾಗಿರದೆ, ಧನದ ಒಡೆತನಕ್ಕೆ ಒಳಪಟ್ಟಿರುವುದೇ ಬಹಳ. (ಪುಟ ೨೨)

ಈ ಮಾತು ಬಲು ಮಾರ್ಮಿಕ. ಮನುಷ್ಯ ಸಮಾಜವು ಸಮಾಜದ ಹಿತಕ್ಕೆಂದು ಹಣವನ್ನು ಸೃಷ್ಟಿ ಮಾಡಿತು. ಆದರೆ ಇಂದು ಅದರ ಕೈವಶವಾಗಿ ಒದ್ದಾಡುತ್ತಿದೆ, ತಾವು ಅದರ ಒಡೆಯರಾಗಿ, ತಮ್ಮ ಅಧೀನದಲ್ಲಿ ಅದನ್ನು ಇರಿಸಿಕೊಳ್ಳುವ ಬದಲಿಗೆ ಅದನ್ನೇ ಒಡೆಯನನ್ನಾಗಿ ಮಾಡಿ ತಾವು ಅದರ ದಾಸರಾಗಿದ್ದಾರೆ. ಅದನ್ನು ಬಸವಣ್ಣನವರು ಹೀಗೆ ಹೇಳುತ್ತಾರೆ.

೧. ಟೀವಕ ಟಿಂಬಕನನ್ನಾಡಿಸುತ್ತಿದ್ದಿತಯ್ಯಾ ನಿನ್ನ ಮಾಯೆ ಕೂಡಲ ಸಂಗಮದೇವಯ್ಯಾ ಹೊನ್ನು; ಹೆಣ್ಣು; ಮಣ್ಣು ತೋರಿ! (ಬ. ಷ. ವ. ೧೮)

೨. ಕಾಂಚನವೆಂಬ ನಾಯನಚ್ಚಿ ನಿಮ್ಮ ನಾನು ಮರೆದೆನಯ್ಯಾ ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆಯಿಲ್ಲ (ಬ. ಷ. ವ. ೩೧೩)

೩. ತನು ಲೋಭ ಮನಲೋಭ ಧನಲೋಭ ಮುಂದುಗೆಡಿಸಿ ಕಾಡಿಹವೆನ್ನ.
(ಬ. ಷ. ವ. ೩೧೫)

ಸೂತ್ರದ ಬೊಂಬೆಯವ ಸೂತ್ರದ ನೆರವಿನಿಂದ ಬೊಂಬೆಯನ್ನು ಕುಣಿಸುವಂತೆ, ಕೋತಿಯಾಟದವನು ಕೋಲಿನ ನೆರವಿನಿಂದ ಕೋತಿಯನ್ನು ಕುಣಿಸುವಂತೆ, ಮಾಯೆಯ ಹೆಣ್ಣು, ಹೊನ್ನು, ಮಣ್ಣುಗಳ ನೆರವಿನಿಂದ ಜೀವಿಯನ್ನು ಕುಣಿಸುತ್ತದೆ. ಹೀಗಾಗಿ ಮಾನವ ಜೀವಿ ಕಾಂಚನಕ್ಕೆ ಸಾಕಷ್ಟು ವೇಳೆಯನ್ನು ಕೊಡುವನು, ಲಿಂಗಕ್ಕೆ ವೇಳೆಯನ್ನು ಕೊಡನು. ತನು. ಲೊಭ, ಮನಲೋಭ, ಧನಲೊಭಗಳು ಆದರ್ಶದ ಮಾರ್ಗದಲ್ಲಿ ಆತಂಕಗಳಾಗುವವು ಹೀಗಾಗಿ ಧನಾಕಾಂಕ್ಷಕರು ದಾಸರಾಗಿಬಿಡುವರು. ಇಷ್ಟು ಮಾತ್ರವಲ್ಲ ಈ ಧನವು ಮನುಷ್ಯನನ್ನು ಪತನಿಸು (Corrupt)ವುದು, ವಾಮಮಾರ್ಗಗಳಾಗಿ ಪ್ರೇರೇಪಿಸುವುದು.

ಧನದಲ್ಲಿ ಶುಚಿ ಪ್ರಾಣದಲ್ಲಿ ನಿರ್ಭಯ
ಇದಾವಂಗಳವಡುವುದಯ್ಯಾ ?
ನಿಧಾನ ತಪ್ಪಿ ಬಂದರೆ ಒಲ್ಲೆನೆಂಬುವರಿಲ್ಲ.
ಪ್ರಮಾದ ವಶಾತ್ ಬಂದರೆ ಹುಸಿಯೆನೆಂಬುವರಿಲ್ಲ.
ನಿರಾಶೆ, ನಿರ್ಭಯ ಕೂಡಲ ಸಂಗಮದೇವಾ
ನಿಮ್ಮ ಶರಣಂಗಲ್ಲದಿಲ್ಲ

ಧನ ಗಳಿಕೆಯ ವಿಧಾನದಲ್ಲಿ ಶುಚಿತ್ವವನ್ನು ಗಳಿಸಿಕೊಳ್ಳುವದು ತುಂಬಾ ಕಷ್ಟ ಸಾಧ್ಯ ! ಈ ಕಾರಣದಿಂದಲೇ ಅರವಿಂದರು ಹೇಳುವಂತೆ:" ಧನವು ದೀರ್ಘಕಾಲ ಅಸುರವಶವಾಗಿ, ಅವನ ವಿಕೃತ ದುರ್ವಿನಿಯೋಗದ ಮೂಲಕ, ಇದಕ್ಕೊಂದು ಬಗೆಯ ದೋಷಿತ ಮುದ್ರೆ ಬಿದ್ದಿದೆ. ಧನದ ಈ ವಿಕೃತ ಪ್ರಭಾವದಿಂದ ಪಾರಾಗುವವರು ತೀರ ವಿರಳ.'' ಎನ್ನುವದು ಪರಮಸತ್ಯ.

ಇಂತಹ ವಿಚಿತ್ರವಾದ 'ಧನ'ದ ಸ್ವರೂಪ ಕಂಡು ಸಾಧಕರು, ಯೋಗಿಗಳು, ವಿರಾಗಿಗಳು ಬೆದರಿ ಬಿಟ್ಟರು. "ಈ ಕಾರಣಕ್ಕಾಗಿಯೇ ಎಲ್ಲ ಅಧ್ಯಾತ್ಮ ಪಥಗಳೂ ಸಂಪೂರ್ಣ ಆತ್ಮ ಸಂಯಮ, ಅನಾಸಕ್ತಿಗಳನ್ನು, ಎಲ್ಲ ಬಗೆಯ ವೈಯಕ್ತಿಕ ಅಹಂಕಾರ ಯುಕ್ತ ವಿತ್ತವಾಸನೆಯಿಂದ ಮುಕ್ತರಾಗುವುದನ್ನು ಮತ್ತೆ ಮತ್ತೆ ಬೋಧಿಸುತ್ತವೆ. ಕೆಲ ಸಾಧನಾಪಥಗಳಂತೂ ಧನ–ವಿಭವಗಳನ್ನು ಬಹಿಷ್ಕರಿಸಿ, ಬಾಳ ಬಡತನ ಬರಡುತನಗಳೇ ಅಧ್ಯಾತ್ಮಿಕ ಅವಸ್ಥೆಯೆಂದು ಸಾರುತ್ತವೆ. ಆದರೆ ಇದು ತಪ್ಪು. ಇದರಿಂದ ಧನ ಬಲವು ದಾನವ ಶಕ್ತಿಗಳ ಹಸ್ತಗತವಾಗುವದು."

ಶರಣರೂ ಅಂಥ ನಿರಾಕರಣ ಸಿದ್ಧಾಂತವನ್ನು ಅಲ್ಲಗಳೆದಿದ್ದಾರೆ. ಅಂಥದ್ದು ಅಭಾವ ವೈರಾಗ್ಯ ಎಂದು ಅಂದಿದ್ದಾರೆ. ಇದು ತಾಮಸಿಕ, ಅಜ್ಞಾನ–ಆಲಸ್ಯಗಳಿಂದ ಕಾಡಿದ ಜಡತನ ಎನ್ನುತ್ತಾರೆ:

ಕಾಯಕಾರದ ಮೈಸೊಂಬತನದಿಂದ
ಒಡಲ ಕಾಳ ಗಳಿಸಲಾರದೆ ಹಸಿದಿಪ್ಪರಯ್ಯ
ಮೀಯಲು ಎಣ್ಣೆಯ ಗಳಿಸಲಾರದೆ
ಮಂಡೆ ಬೋಳಾಗಿಪ್ಪರಯ್ಯ
ಉಡಲು ವಸ್ತ್ರವ ಗಳಿಸಲಾರದೆ
ಕೆಚ್ಚುಟವ ಕಟ್ಟಿಕೊಂಡಿಪ್ಪುರಯ್ಯಾ.
ದಿಟದಿಂದ ಬಿಡಿಸಲರಿಯದೆ ಶಠೆಯನವಧರಿಸಿ
ಕೊಂಡಿಪ್ಪವರ ಮೆಚ್ಚುವನೇ, ಸಕಳೇಶ್ವರದೇವ ?

ಅಜ್ಞಾನ ಆಲಸ್ಯಗಳಿಂದ ಕೂಡಿದ ತಾಮಸಿಕ ಜಡತನವನ್ನು ವೈರಾಗ್ಯವೆಂದು-ಶರಣರು ಕರೆಯರು. ಆದಕ್ಕಾಗಿ ಮನುಷ್ಯನು ಚಟುವಟಿಕೆಯಿಂದ ಕಾಡಿದ ಕ್ರಿಯಾಶೀಲ ವ್ಯಕ್ತಿಯಾಗಬೇಕು ಎನ್ನುವರು. ಹಣವನ್ನು ವ್ಯಕ್ತಿ ಗಳಿಸಬೇಕು. ಅದನ್ನು ತನ್ನ ಉಪಜೀವನಕ್ಕೆ ! ವಿನಿಯೋಗಿಸುವ ಮತ್ತು ದೈವೀಕಾರ್ಯಕ್ಕೆ ಸಲ್ಲಿಸುವಂತಹ ಉದ್ದೇಶದಿಂದ ಗಳಿಸಬೇಕು. ಅದನ್ನು ಬಸವಣ್ಣನವರು ಬಹು ಮಾರ್ಮಿಕವಾಗಿ ಹೇಳುವರು:

ನಾನು ಆರಂಭವ ಮಾಡುವೆನಯ್ಯಾ ಗುರುಪೂಜೆಗೆಂದು
ನಾನು ಬೆಹಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು
ನಾನು ಪರಸೇವೆಯ ಮಾಡುವೆನಯ್ಯಾ ಜಂಗಮದಾಸೋಹಕ್ಕೆಂದು,
ನಾನಾವ ಕರ್ಮಂಗಳ ಮಾಡಿದಡೆಯೂ
ಆ ಕರ್ಮಫಲ ಭೋಗವ ನೀ ಕೊಡುವೆ ಎಂಬುದ ನಾನು ಬಲ್ಲೆನು.
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದು ಕ್ರೀಯ ಮಾಡೆನು,
ನಿಮ್ಮ ಸೊಮ್ಮಿಂಗೆ ಸವೆಸುವೆನು, ನಿಮ್ಮಾಣೆ
ಕೂಡಲ ಸಂಗಮದೇವಾ.
(ಬ. ಷ. ವ 708)

ಹೀಗೆ ವ್ಯಕ್ತಿಯು ಒಕ್ಕಲುತನವನ್ನೇ ಮಾಡಲಿ, ವ್ಯವಹಾರವನ್ನೇ ಮಾಡಲಿ. ಪರಸೇವೆಯನ್ನೇ ಮಾಡಲಿ, ಅದರ ಗಳಿಕೆಯು ತನ್ನ ಉಪಜೀವನಕ್ಕೆ ಮತ್ತು ಸಮಾಜದ ಸೇವೆಗೆ, ದೈವೀ ಪರಿವರ್ತನೆಗೆ ಸಹಾಕಾರಿಯಗುವುದಾದರೆ ಆ ಕಾಯಕ, ಆ ಗಳಿಕೆ ಯಾವುದೇ ರೀತಿ ಬಾಧಕವಲ್ಲ, ಆತಂಕಕಾರಿಯಾಗದು. ಮಾತ್ರವಲ್ಲ ಅದು ದೈವೀ ಜೀವನಕ್ಕೆ ಸಹಕಾರಿ. ಬಸವಣ್ಣನವರ ಈ ವಚನದ ಭಾವಾರ್ಥವನ್ನೇ ಹೇಳುವಂತಿದೆ ಅರವಿಂದರ ಈ ನುಡಿಗಳು : ಧನ ಸ್ವಾಮಿಯಾದ ಈಶ್ವರನಿಗೋಸ್ಕರ ಧನವನ್ನು ಪುನಃ ಜಯಿಸಿ, ಈಶ್ವರಾರ್ಪಣ ಬುದ್ಧಿಯಿಂದ ದಿವ್ಯ ಜೀವನಕ್ಕಾಗಿ ಅದನ್ನು ಬಳಸಬೇಕು. ಇದೇ ಸಾಧಕನಿಗೆ ಅತಿ ಮಾನಸ ಪಥವಾಗಿದೆ.
ಧನ- ಸಂಪತ್ತು ಮುಂತಾದ ಐಹಿಕ ಉಪಕರಣ, ಸಾಧನಗಳನ್ನು ನಿರಾಕರಿಸಿದರೂ ಆಗದು, ಉಪೇಕ್ಷಿಸಿದರೂ ಆಗದು. ಅವುಗಳಿಂದ ಕಳಂಕಿತನಾಗದೆ ಅವನ್ನು ಬಳಸಬೇಕು. ಅವುಗಳು ಮಾಯೆಯೆಂದು ಬಾಧಕವೆಂದು ಭ್ರಮಿತನಾಗಿ ಆಲೋಚಿಸಬಾರದು.

ಹೆಣ್ಣು ಮಾಯೆಯೆಂಬುರು ಹೆಣ್ಣುಮಾಯೆಯಲ್ಲ
ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ
ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ
ಮನದ ಮುಂದಣ ಆಶೆಯೇ ಮಾಯೆಕಾಣಾ
ಗುಹೇಶ್ವರಾ !

"ಹೆಣ್ಣು, ಹೊನ್ನು, ಮಣ್ಣು ಮಾಯೆಯಲ್ಲ, ತನ್ನಾಂತರಂಗದಲ್ಲಿರುವ ಆಸೆಯೇ ಮಾಯೆ ಎಂಬುದು ಶರಣರ ನಿಲುವು, ಅವನ್ನು ಸಹಜ ಸ್ಥಿತಿ''ಯಿಂದ ಗಳಿಸಬೇಕು, ಸ್ವೀಕರಿಸಬೇಕು, ಬಳಸ ಬೇಕು, ವಿನಿಯೋಗಿಸಬೇಕು. ಬೇಕು ಬೇಡ ಎಂಬ ಭಾವವನ್ನು ಗೆಲ್ಲಬೇಕು

''ಒಲ್ಲೆನೆಂಬುದು ವೈರಾಗ್ಯ ಒಲಿವೆಂಸೆಬುದು ಕಾಯು ಯಾವ ಪದಾರ್ಥವಾದೊಡೇನು ಬಂದುದನ್ನೂ ಶಿವಾರ್ಪಿತ ಭಾವದಿಂದಸ್ವೀಕರಿಸಬೇಕು. ಇದು ಬಸವಣ್ಣನವರ ಗುಣ ವಿಚಾರಧಾರೆ. ಅದಕ್ಕೆ ಹೋಲುವಂತಿದೆ ಅರವಿಂದರ ಈ ವಾಣಿ ; "ಧನ ಶಕ್ತಿಯಿಂದ ಮತ್ತು ಅದು ತರುವ ಉಪಾಯ ಉಪಕರಣಗಳಿಂದ, ವಿರಾಗಿಯಂತೆ ಮೈ ಮುದುಡಿ ಮೊಗದಿರುಗಿಸಲೂ ಕೂಡದು ; ಅವುಗಳಿಗಾಗಿ ರಾಜಸಿಕ ಆಸಕ್ತಿಯನ್ನು ಪೋಷಿಸಲೂ ಕೂಡದು ;ಅಥವಾ ಭೋಗ ತುಷ್ಟಿಯ ತೊತ್ತಾಗಿ, ಲೋಲುಪತೆಯ ತುತ್ತಾಗಲೂ ಕೂಡದು. ಧನ ವೆಂದರೆ, ಮಾತೃ ಸೇವೆಗೆ ಮಾತ್ರ ಬಳಸಲು ಪುನಃ ಜಯಿಸಿ ತರಬೇಕಾದ ಬಲವೆಂದೇ ಭಾವಿಸು".

ಹೀಗೆ ವ್ಯಕ್ತಿಯ ಗಳಿಕೆ, ಅದರ ಬಳಕೆ ವೈಯುಕ್ತಿಕಕ್ಕಾಗಿ ದೇಹಪೋಷಣೆಗಾಗಿ. ಅಲ್ಲ, ದೈವೀ ಸಂಕಲ್ಪ ಪೂರೈಕೆಗಾಗಿ, ದೈವೀಕಾರ್ಯಕ್ಕಾಗಿ. ಅದನ್ನು ಬಸವಣ್ಣನವರ ಭಾಷೆಯಲ್ಲಿ ಕೇಳೋಣ:

ಹೊತ್ತಾರೆ ಎದ್ದು ಕಣ್ಣ ಹೊಸೆಯುತ್ತ
ಎನ್ನ ಒಡಲಿಂಗೆ, ಎನ್ನ ಒಡವೆಗೆ, ಎನ್ನ ಮಡದಿ-ಮಕ್ಕಳಿಗೆಂದಾ
ಕುದಿದೆನಾದಡೆ ಎನ್ನ ಮನಕ್ಕೆ ಮನವೆ ಸಾಕ್ಷಿ !........
ಹೊಲೆ ಹೊಲೆಯೆರ ಮನೆಯ ಹೊಕ್ಕಾದಡೆಯೂ,
ಸಲೆ ಕೈಕೂಲಿಯ ಮಾಡಿಯಾಡಡೆಯೂ,

ನಿಮ್ಮ ನಿಲವಿಂಗೆ ಕುದಿವನ್ನದೆ,
ಎನ್ನ ಒಡಲವಸರಕ್ಕೆ ಕುದಿದೆನಾದಡೆ
ತಲೆದಂಡ ! ಕೂಡಲ ಸಂಗಮದೇವಾ.

ದೇವನ ಅಡಿಗೆ ಸಮರ್ಪಿತನಾಗಿ, ದೈವೀ ಸಂಕಲ್ಪಕ್ಕೆ ಉಪಕರಣವಾದ ಸಂತನು ಒಡಲಿನ ಅವಸರಕ್ಕೆ ಕುದಿಯನು ; ಒಡೆಯನ (ಕರ್ತನ) ಅವಸರಕ್ಕೆ ಕುದಿಯುವನು.

ಸಮಸ್ತ ಧನಸಂಪತ್ತೂ ಭಗವಂತನದು. ಧನವನ್ನು ಇಟ್ಟುಕೊಂಡವರು ಅದರ ಪಾರುಪತ್ಯಗಾರರಲ್ಲದೆ ಅದರ ಒಡೆಯರಲ್ಲ ಇಂದದು ಅವರ ಬಳಿಗಿದ್ದರೆ, ನಾಳೆ ಇನ್ನಾರ ಬಳಿಗೋ ಇರಬಹುದು. ತಮ್ಮ ಹತ್ತಿರ ಇದ್ದಷ್ಟು ದಿನ ಆ ಧನದ ಪಾರುಪತ್ಯಗಾರಿಕೆಯನ್ನು ಯಾವ ಭಾವದಿಂದ, ಯಾವ ಬುದ್ಧಿಯಿಂದ, ಯಾವ ಉದ್ದೇಶಕ್ಕಾಗಿ ಹೇಗೆ ಅವರು ನಿರ್ವಹಿಸುವರು ಎಂಬುದರ ಮೇಲೆ ಎಲ್ಲ ಅವಲಂಬಿಸಿದೆ. (ಶ್ರೀಮಾತಾ–ಪುಟ 24)

ಗುಬ್ಬಿಯು ಬೇರೆಯವರ ಮನೆಯನ್ನು ತನ್ನದೇ ಮನೆಯೆಂದು ಕೊಂಡು ನಂಬಿ ಗೂಡು ಕಟ್ಟುವಂತೆ ಈ ಜೀವಿಯು ಜಗತ್ತು ಪರಮಾತ್ಮನದು ಸಂಪತ್ತು ಅವನದು ಎಂಬುದನ್ನರಿಯದೆ ತನ್ನ ಇರವು ಶಾಶ್ವತವೆಂದು ನಂಬುವನು. ಹಾಗೆ ತಿಳಿಯದೆ ತಾನು ಕೇವಲ ವಿಶ್ವಸ್ತ ಉಸ್ತುವಾರಿ ಮಾಡುವವ, ನಿಜವಾದ ಮಾಲಿಕ ದೇವರು ಎಂದು ನಂಬುವನೇ ಅವನು ಬಾಧೆಗೆ ಒಳಗಾಗಲಾರ. ತನ್ನದೆನ್ನುವದನ್ನು ತಾನು ಇಟ್ಟುಕೊಳ್ಳದೆ ತನ್ನ ಗಳಿಕೆಯನ್ನು ಮಾತ್ರವಲ್ಲದೆ, ತನ್ನನ್ನೇ ಸಂಪೂರ್ಣವಾಗಿ ಸಮರ್ಪಿಸುವನು. ಹೀಗಾಗಿ ಅವನಿಗೆ ಬೇಡಲಿಕ್ಕೆ ಸಂಕೋಚವಾಗದು, ಬೇಡುವುದು ಅಪರಾಧವೂ ಅಲ್ಲ.

ಸೋಮಾರಿತನದಿಂದ ಬೇಡುವುದು ಹೀನ ಅಪರಾಧ; ಲೋಕಹಿತಕ್ಕಾಗಿ ಬೇಡುವುದು ಸಲ್ಲಕ್ಷಣ. ತನ್ನ ಹೆಂಡತಿ–ಮಕ್ಕಳ ಸಂರಕ್ಷಣೆಗಾಗಿ ಬೇಡುವ ಯಾಚಕ ವೃತ್ತಿ ಕ್ಷುಲ್ಲಕತನ; ತಾನು ತನ್ನದು ಎಂಬ ವ್ಯಾಪವಿಲ್ಲದೆ, ಸ್ವಾರ್ಥವಿಲ್ಲದೆ ಸಮಾಜದ ಹಿತಕ್ಕಾಗಿ ಬೇಡುವುದು ಸದ್ಗುಣ. ಆ ರೀತಿ ಬೇಡಲಿಕ್ಕೆ ಸಂಕೋಚಪಟ್ಟರೆ ಅದು ಅಹಂಭಾವದ ಪ್ರತೀಕ. ಇಂಥ ತ್ಯಾಗಿ ಯಾಚಕನಲ್ಲ. ಅದನ್ನು ಬಸವಣ್ಣನವರ ಮಾತಿನಲ್ಲಿ ಕೇಳಿರಿ.

ತಿರುಕರೆನ್ನದಿರಿ ಭೋ ಎನ್ನ ತಂದೆಗಳನು
ತಿರುಕರೆನ್ನದಿರಿ ಭೋ ಎನ್ನ ಬಂಧುಗಳನು
ತಿರುಕರೆನ್ನದಿರಿ ಭೋ ಎನ್ನ ದೇವರಸು
ತಿರುಕರೆನ್ನದಿರಿ ಭೋ ಎನ್ನ ಒಡೆಯರನು
ದೇಹಿ ಎಂದಡೆ ನಾಸ್ತಿ ಎಂಬುವರ ಬೇಹು
ನೋಡಬಂದ ಕಾಣಾ, ಕೂಡಲ ಸಂಗಮದೇವ (ಬ.ಷ.ವ. ೧೧೫೨)

ಜಂಗಮರು, ಧರ್ಮಪ್ರಚಾರಕರು, ತ್ಯಾಗಿಗಳು ತಿರುಕರಲ್ಲ. ಏನೂ ಇಲ್ಲದ್ದಕ್ಕಾಗಿ, ಬೇಡಲು ಬಂದವರಲ್ಲ. ಇದ್ದುದೆಲ್ಲವನ್ನೂ ತ್ಯಾಗಮಾಡಿ ಸಮಾಜಶ್ರೀಯ ಅಭಿವೃದ್ಧಿಗಾಗಿ ಬೇಡಲು

ಬಂದವರು. ಅವರು ತಿರುಕರಲ್ಲ, ಒಡೆಯರು. ಲೌಕಿಕರ, ಧರ್ಮಾನುಯಾಯಿಗಳ ಸಂಪತ್ತಿನ ಮೇಲೆ ಒಡೆತನದ ಹಕ್ಕು ಇದ್ದವರು. "ದೇಹಿ ಎಂದು ಬೇಡಿದಾಗ, ನಾಸ್ತಿ ಎಂದು ನುಡಿಯುವ" ಜನರನ್ನು ಪರೀಕ್ಷಿಸಬಂದವರು. ಒಂದು ರೀತಿಯಲ್ಲಿ ಶಿವನ ಬೇಹುಗಾರರು. ಆದಾಯಕರವನ್ನು ಒಪ್ಪಿಸುವುದು ಹೇಗೆ ವ್ಯವಹಾರಸ್ಥನ ಕರ್ತವ್ಯವೋ ಹಾಗೆ ದೈವೀಕಾರ್ಯಕ್ಕಾಗಿ ದಾಸೋಹಕ್ಕೆ ಸಲ್ಲಿಸುವುದು ಭಕ್ತನ ಕರ್ತವ್ಯ. ಆದಾಯಕರವನ್ನು ತಪ್ಪಿಸುವವರನ್ನು ಪರೀಕ್ಷಿಸಲು ಬರುವ ಬೇಹುಗಾರಿಕೆ ದಳದಂತೆ, ಈ ಧರ್ಮಪ್ರಚಾರಕ ಜಂಗಮ ತಂಡ ಭಕ್ತರನ್ನು ಪರೀಕ್ಷಿಸಲು ಬಂದ ಅಧ್ಯಾತ್ಮಿಕ ಬೇಹುಗಾರರ ತಂಡ.

ಶ್ರೀ ಅರವಿಂದರು ಇಂಥ ತ್ಯಾಗಿಗಳಿಗೆ ಎಷ್ಟು ಚೆನ್ನಾಗಿ ಮಾರ್ಗದರ್ಶನ ಮಾಡುವರು ನೋಡಿರಿ :

"ಐಶ್ವರ್ಯವಂತರೆಂದು ಯಾರಿಗೂ ತಲೆಬಾಗಬೇಡ. ಅವರ ಆಡಂಬರ, ಅಧಿಕಾರ ದರ್ಪಗಳಿಗೆ ಮನಸೋಲ ಬೇಡ.'' ಅದನ್ನೇ ಬಸವಣ್ಣನವರು ಹೀಗೆ ಹೇಳುತ್ತಾರೆ : ''ಧೃತಿಗೆಟ್ಟು ಅನ್ಯರ ಬೇಡದಂತೆ, ಮತಿಗೆಟ್ಟು ಅನ್ಯರ ಹೊಗಳದಂತೆ.'' "ಆ ನಿಮ್ಮ ಹಾರೆನು, ಮಾನವರ ಬೇಡೆನು.''

ಊರಮುಂದೆ ಹಾಲಿನ ಹಳ್ಳ ಹರಿಯುತ್ತಿರಲು
ಓರೆಯಾವಿನ ಬೆನ್ನಲ್ಲಿ ಹರಿಯಲೇಕೆ ?
ಲಜ್ಜೆಗೆಡಲೇಕೆ ನಾಣುಗೆಡಲೇಕೆ
ನಮಗೆ ನಮ್ಮ ಕೂಡಲ ಸಂಗಯ್ಯನುಳ್ಳನ್ನಕ್ಕ
ಬಿಜ್ಜಳನ ಭಂಡಾರವೆನಗೇಕಯ್ಯಾ ?

ದೇವನನ್ನು ಅಚಲವಾಗಿ ನಂಬಿದಾಗ, ಸಮರ್ಪಿತವಾದ ಭಕ್ತನ ಆಗು-ಹೋಗು, ಅವಶ್ಯಕತೆಗಳನ್ನು ದೇವನೇ ನೋಡಿಕೊಳ್ಳುವಾಗ ಭಕ್ತನು ಆ "ಮಹಾದಾತ"ನನ್ನು ನಂಬಿ ಬಾಳುವನು' ಕಾರ್ಯ ಮಾಡುವನು. ಯೋಜನೆ ಹಾಕಿಕೊಳ್ಳುವನೇ ವಿನಾ ಲೋಕದ ಮನುಜರಾದ ರಾಜರು, ಸಿರಿವಂತರನ್ನು ಆಶ್ರಯಿಸಿ ಅಲ್ಲ. ನಿಜ ಜ್ಞಾನಿ ಎಂದೂ ಸ್ವಾಭಿಮಾನವನ್ನು ತೊರೆದು, ಆದರ್ಶಗಳನ್ನು ಬಲಿಗೊಟ್ಟು ಜನರನ್ನು ಆಶ್ರಯಿಸನು. "ಧನದೋಷದಿಂದ ವಿಮುಕ್ತನಾಗಿ, ಆದರೆ ಧನವೆನ್ನುತ್ತಲೇ ವೈರಾಗ್ಯದಿಂದ ನೀನು ಹಿಂದೆಗೆಯದಿದ್ದರೆ ಮಾತ್ರ ಭಗವತ್ ಸೇವೆಗೆ ಧನವನ್ನೂ ಜಯಿಸಿ ತರುವ ಬಲ ವಿಶೇಷವು ನಿನ್ನಲ್ಲಿ ಉಂಟಾಗುತ್ತದೆ.'' (ಪುಟ ೨೬) ಅರವಿಂದರ ಈ ಉಪದೇಶ ಬಹಳ ಪ್ರಾಯೋಗಿಕವಿದೆ. ಹಣ, ಸಂಪತ್ತನ್ನು ಹುಲಿಯೋ ಕರಡಿಯೋ ಒಂದು ಭಯಂಕರ ಭೂತವೋ, ಮಾಯೆಯೋ ಎಂಬಂತೆ ಕೆಲವು ಸಾಧಕರು–ಸನ್ಯಾಸಿಗಳು ಭಯಪಡುವರು. ಅಷ್ಟು ಭಯಪಡುವ ಕಾರಣವಿಲ್ಲ. ಆದರ ಬರವಿನಿಂದ ತನ್ನ ವ್ಯಕ್ತಿತ್ವ ಪತನವಾಗದಂತೆ, ಆದರ್ಶ ತೂರಿ ಹೋಗದಂತೆ ತಾನು ಜಾಗೃತನಾಗಿದ್ದರೆ ಸಾಕು. ಆಗಾಗ ಮಾತ್ರ ಧನವನ್ನು ಜಯಿಸಿ ತರುವ ಆತ್ಮ ಬಲವು ಉಂಟಾಗುತ್ತದೆ; ಇಲ್ಲವಾದರೆ ಕೇವಲ ಅಂಜಿಕೆ-ಹೊಯ್ದಾಟಗಳೇ ಉಳಿಯುತ್ತವೆ.

"ಅತಿಮಾನಸ ಸೃಷ್ಟಿಯಲ್ಲಿ ಧನಬಲವನ್ನು ಭಾಗವತ ಶಕ್ತಿಗೆ ಪುನಃ ದೊರಕಿಸಿ ಕೊಡ ಬೇಕಾಗಿದೆ. ಆ ಆದ್ಯಮಾತೆಯು ತನ್ನ ಸೃಷ್ಟಿ–ದೃಷ್ಟಿಯ ಪ್ರೇರಣೆಯಲ್ಲಿ ನಿರ್ದೇಶಿಸುವ ರೀತಿಯಲ್ಲಿಯೇ ಅದನ್ನು ಬಳಸಬೇಕಾಗಿದೆ. ಅಂದರೆ ಒಂದು ನವೋನವ ದಿವ್ಯ ಪ್ರಾಣದ, ದಿವ್ಯ ದೇಹದ ಜೀವನ ವಿಧಾನ ಸಲುವಾಗಿಯೇ ಇವುಗಳ ಸತ್ಯ ಸುಂದರ ಸುಸಮಂಜಸ ಸಂಘಟನೆ ಹಾಗೂ ವ್ಯವಸ್ಥಾಪನೆಯ ಸಲುವಾಗಿಯೇ ಈ ಧನದ ವಿನಿಯೋಗವಾಗಬೇಕಾಗಿದೆ.' ಹೀಗೆ ಮಾನವನ ಅತಿಮುಖ್ಯ ಗಳಿಕೆಯಾದ ಧನವು ಒಂದು ವಿಧಾಯಕ ಶಕ್ತಿಯಾಗಿ ಸಮಾಜ ನಿರ್ಮಾಣಕ್ಕೆ ದೊರಕಬೇಕಾಗಿದೆ. ಈ ದೃಷ್ಟಿಯಿಂದಲೇ ಕಾಯಕ ಮತ್ತು ದಾಸೋಹ ಎಂಬೆರಡು ತತ್ತ್ವಗಳನ್ನು ಬಸವಣ್ಣನವರು ತಮ್ಮ ಅರ್ಥಶಾಸ್ತ್ರ ಸಂಹಿತೆಯ ಮೂಲಸೂತ್ರ ಗಳನ್ನಾಗಿ ಕೊಟ್ಟದ್ದು.

ತನ್ನ ಗಳಿಕೆಯನ್ನು ಸಮಾಜ ನಿರ್ಮಾಣ, ಧರ್ಮ ಜಾಗೃತಿ, ಮಾನವೀಯ ಸೇವೆಗೆ ಬಳಸಬೇಕಾದುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯ. ಈ ದಿಶೆಯಲ್ಲಿ ತ್ಯಾಗಿಯು, ಧರ್ಮ ಬೋಧಕನೂ, ವಿರಾಗಿಯೂ ಆದವನು ಮಧ್ಯವರ್ತಿಯಾಗಿ, ಸಮರ್ಪಿತ ಆತ್ಮನಾಗಿ ಧನವನ್ನು ಸ್ವೀಕರಿಸಿ ವಿನಿಯೋಗಿಸಬೇಕು. ಹಾಗೆ ಮಾಡುವಾಗ ಅವನಲ್ಲಿ ಅಹಂಕಾರ ಅಡ್ಡಬಾರದು. –ಬೇಡುವಾಗ. ಮತ್ತು ಸ್ವಾರ್ಥ ಅಡ್ಡಬರಬಾರದು. ಅದನ್ನು ಸಮಾಜದಿಂದ ಪಡೆದು ಸಮಾಜಕ್ಕೆ ನೀಡುವಾಗ. ಈ ಕಾರ್ಯಕ್ಕೆ ಪರಮಾತ್ಮನೇ ತನ್ನನ್ನು ಆರಿಸಿಕೊಂಡಿದ್ದಾನೆಂದು ಹೀಗೆ ತಿಳಿಯಬೇಕು.


ಮಾಡುವಾತ ನಾನಲ್ಲಯ್ಯ, ನೀಡುವಾತ ನಾನಲ್ಲಯ್ಯ,
ಬೇಡುವಾತ ನಾನಲ್ಲಯ್ಯಾ, ನಿಮ್ಮ ಕಾರುಣ್ಯವಲ್ಲದೆ.
ಎಲೆ ದೇವಾ, ಮನೆಯ ತೊತ್ತಲಸಿದಡೆ
ಒಡತಿ ಮಾಡಿಕೊಂಬಂತೆ,
ನಿನಗೆ ನೀ ಮಾಡಿಕೊ ಕೂಡಲ ಸಂಗಮದೇವಾ.

(ಬ.ಷ.ವ. ೮೩೧)

—ಜಗದ್ಗುರು ಮಾತೆ ಮಹಾದೇವಿ

ಆತ –	ನೀವು ಇಷ್ಟೊಂದು ಸೊಟ್ಟಗೆ ಇದ್ದು ಇಂಥಾ ದಪ್ಪಗಾದ ಹೆಂಡತಿಯನ್ನು ಯಾಕೆ ಮದುವೆಯಾದಿರಿ ?
ಅವನು –	ಸಂಸಾರದ ಅನೇಕ ಕಷ್ಟಗಳಲ್ಲಿ 'ಸಂಗಾತಿ' ಸಲೀಸಾಗಿ ಎತ್ತಿ ಕೊಂಡು ಹೋಗಬಲ್ಲಳೆಂದು.

(ಶಿ. ಪಾ. ಮ.)



ನಿಜ ಜಂಗಮ

ಗುಣವ ನೋಡದೆ ಹೊಗಳುವ ಜಂಗಮವು ಬ್ರಹ್ಮನ ಸಂತತಿ.
ಕಾಡಿ ಬೇಡುವ ಜಂಗಮವು ನಾರಾಯಣನ ಸಂತತಿ.
ವ್ಯಾಪಾರಿಕ ಜಂಗಮವು ಈಶ್ವರನ ಸಂತತಿ.
ಹೊಗಳದೆ, ಕಾಡದೆ, ಬೇಡದೆ, ಬಲಾತ್ಕಾರದಿಂದುಣ್ಣದೆ, ವ್ಯವಹರಿಸದೆ ಭಕ್ತಿ
ಮುಖದಿಂದುಂಬ ಜಂಗಮವ ನೋಡಿ
ಎನ್ನ ಮನ ನೀವೆಂದು ನಂಬಿತ್ತಯ್ಯಾ, ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ.

—ಸಿದ್ಧರಾಮೇಶ್ವರ, 554

ಅನೇಕ ಪುರಾಣಕಾರರು, ಕೀರ್ತನಕಾರರು, ಸಾಧುಗಳು ಊರಿಂದೂರಿಗೆ ಸಂಚರಿಸುತ್ತ ಶ್ರೀಮಂತ ಭಕ್ತರ ಔದಾರ್ಯದಿಂದ ತಮ್ಮ ಉದರ ನಿರ್ವಹಣೆ ಮಾಡುವರು. ಆಗ ಎಷ್ಟೋ ಬಾರಿ ತತ್ತ್ವನಿಷ್ಠರಾಗಿ ನಡೆಯುವುದಕ್ಕಿಂತ, ಹೊಗಳು ಭಟ್ಟಂಗಿಗಳಾಗಿ ಸಿರಿವಂತರನ್ನು ಓಲೈಸುತ್ತಾರೆ, ಅಂತಹವರನ್ನು ಕುರಿತು ಸಿದ್ಧರಾಮೇಶ್ವರರು ಇಲ್ಲಿ ವಿಶ್ಲೇಷಿಸುತ್ತಾರೆ.

ಗುಣಕ್ಕೆ ಮಾತ್ಸರ್ಯವಿರತಕ್ಕದ್ದಲ್ಲ. ಗುಣ ಪ್ರತಿಭೆ ಯಾರಲ್ಲಿಯೇ ಇರಲಿ ಅದನ್ನು ಗ್ರಹಿಸಿ, ಗೌರವಿಸಬೇಕು. ಹಾಗೆ ಗೌರವಿಸದಿದ್ದರೂ ಅದು ಮಾತ್ಸರ ವೆನಿಸವುದು, ಅದೊಂದು ದೊಡ್ಡ ಕೆಟ್ಟ ಗುಣವಾಗುವುದು. ಆದರೆ ವ್ಯಕ್ತಿಯಲ್ಲಿ ಅಂಥ ಸದ್ಗುಣವಿಲ್ಲದಿದ್ದಾಗ ಕೇವಲ ಹೊಟ್ಟೆ ಪಾಡಿಗಾಗಿ ಅಥವಾ ಅವನು ಕೊಡುವ ಹಣ, ಸ್ಥಾನ ಮಾನಕ್ಕಾಗಿ ಹೊಗಳುವದು ಅತಿ ಕ್ಷುಲ್ಲಕತನ. ಅಂಥವರನ್ನು ಬ್ರಹ್ಮನ ಸಂತತಿ ಎಂದು ಸಿದ್ಧರಾಮೇಶ್ವರರು ಹೇಳುವರು. ಕಾರಣವೇನೋ ತಿಳಿಯದು. ಜ್ಯೋತಿರ್ಲಿಂಗ ದರ್ಶನಕ್ಕಾಗಿ ಬ್ರಹ್ಮನು ಊರ್ಧ್ವ ದಿಕ್ಕಿನಲ್ಲಿ ಹೊರಟನು. ತಾನು ಆದಿ–ಅಂತ್ಯಗಳನ್ನು ನೋಡಲು ಸಾಧ್ಯವಾಗದಿದ್ದರೂ, ನೋಡಿದುದಾಗ ಸುಳ್ಳು ಹೇಳಿದನು. ತತ್ಫಲವಾಗಿ ಶಾಪಕ್ಕೊಳಗಾಗಿ ಪೂಜೆಯಿಂದ ಬಹಿಷ್ಕರಿಸಲ್ಪಟ್ಟನೆಂಬುದು

ಸುಪ್ರಸಿದ್ಧ ಕಥೆ. ಅದೇ ರೀತಿ ಕೆಲವರು, ಶ್ರೀಮಂತರನ್ನು, ಅಧಿಕಾರಿಗಳನ್ನು 'ಅಂಥವರು, ಇಂಥವರು, ಉದಾರಿಗಳು, ಬಡವರ ಬಂಧು ಎಂದೆಲ್ಲ ಹೊಗಳುವವರು. ಇದೆಲ್ಲ ಒಂದು ಬಗೆಯ ಸುಳ್ಳು! ಅದನ್ನು ಕೇಳುತ್ತ ಶಿವ ಪ್ರಜ್ಞೆಯ ಜನಸಾಮಾನ್ಯರು ಮುಸಿ ಮುಸಿ ನಗುವರು. ಇಂಥ ಹೊಗಳು ಭಟ್ಟಂಗಿಗಳನ್ನೇ ಬ್ರಹ್ಮನ ಸಂತತಿ ಎಂದು ವಿಶೇಷವಾಗಿ ಸಿದ್ಧರಾಮೇಶ್ವರರು ಕರೆದರು. ಇದರ ಅಂತರಾರ್ಥ ಅವರು ಅಪ್ಪಟ ಸುಳ್ಳುಗಾರರೆಂಬುದೇ ಇರಬಹುದು.

ಇನ್ನೊಂದು ಬಗೆಯ ಜಂಗಮರು–ಅವರು ಹೊಗಳಿ ಕಾರ್ಯಸಾಧಿಸಲು ಸಮರ್ಥರಾಗದೆ, ಕಾಡಿ ಬೇಡಲು ತೊಡಗುವರು. ಭಕ್ತರ ಮನೆಯಲ್ಲಿ ಕುಳಿತು ಹಟ ಹಿಡಿಯುವರು. ಭಿಕ್ಷೆ ನೀಡದಿದ್ದರೆ ಹೋಗುವದಿಲ್ಲವೆಂದು ಹೇಳುವರು. ಇವರು ನಾರಾಯಣನ ಸಂತತಿ ಏಕೆಂದರೆ, ನಾರಾಯಣನು ತನ್ನ ಹಲವು ಅವತಾರಗಳಲ್ಲಿ ಬೇಡಿ, ಕಾಡಿ ಭಿಕ್ಷೆ ಪಡೆದುದನ್ನು ಕಾಣುತ್ತೇವೆ. ವಾಮನ ಮೂರ್ತಿಯಾಗಿ ಬಲಿ ಚಕ್ರವರ್ತಿಯನ್ನು ಬೇಡಿದ, ಕಾಡಿದ. ಕರ್ಣನ ಕವಚ ಕರ್ಣಕುಂಡಗಳಿಗಾಗಿಯೂ ಬೇಡಿದ. ತೊಟ್ಟ ಬಾಣತೊಡುವುದಿಲ್ಲ ವೆಂದರೆ ಮಾತು ತೆಗೆದುಕೊಂಡ. ಧಾನ ಕೊಟ್ಟವನಿಗೆ ಹಾನಿಯಾಗುವುದೆಂದು ತಿಳಿದು ಕಾಡಿ-ಬೆಡುವುದು. ಅವನ ಗುಣ.

ಇನ್ನು ಈಶ್ವರನ ಸಂತತಿ-ವ್ಯಾಪಾರಿಕ ಜಂಗಮವು. ಅದು ಹೇಗೆಂದರೆ, ಬೇಡರ ಕಣ್ಣಪ್ಪ ಕಣ್ಣು ಕೊಟ್ಟು ಕೈಲಾಸವನ್ನು ಪಡೆದುಕೊಂಡ, ಸಿರಿಯಾಳ ಮಗನನ್ನು ಅಡಿಗೆ ಮಾಡಿ ನೀಡಿ, ಪರಮ ಪದವಿಯನ್ನು ಪಡೆದುಕೊಂಡ, ದಾಸಿಮಯ್ಯ ವಸ್ತ್ರವನ್ನು ನೀಡಿ ಸಿರಿವಂತಿಕೆಯನ್ನು ಪಡೆದುಕೊಂಡ. ಹೀಗೆ ಸಕಾಮ ಭಕ್ತಿ ಶೈವ ಮಾರ್ಗದ್ದಾಗಿರುತ್ತದೆ. ಕೊಡುವ ಕೊಳ್ಳುವ ವ್ಯವಹಾರದಂತೆ ಸಕಾಮ ಭಕ್ತಿಯ ಮಾರ್ಗವಾಗಿರುತ್ತದೆ. ಆದರೆ ನಿಜ ಜಂಗಮನ ಪರಿ ಹಾಗಲ್ಲ. ಅನವಶ್ಯಕವಾಗಿ, ಅವಿವೇಕ ಸಹಿತವಾಗಿ ಅವನು ಯಾರನು ಹೊಗಳನು. ಗುಣಗಾಹಿಯಾಗಿ, ಲಾಭದಾಸೆಯಿಲ್ಲದೆ ಹೊಗಳುವನು. ಅವನು ಯಾರನ್ನು ಕಾಡನು, ಬೆದರಿಸನು. ಧರ್ಮಕ್ಕೆ ಸತ್ಕಾರ್ಯಕ್ಕೆ ಸಲ್ಲಿಸುವುದು ಪರಮ ಕರ್ತವ್ಯವೆಂಬ ಕರ್ತವ್ಯ ಭಾವನೆಯನ್ನು ಜಾಗೃತಗೊಳಿಸುವನು. ಸಂದುದನ್ನು ಶಿವ ಪ್ರಸಾದವೆಂದು ಸ್ವೀಕರಿಸುವನ್ನು ಸಲ್ಲದಿದ್ದರೆ ಆ ಧನಕ್ಕೆ ಸತ್ಕಾರ್ಯಕ್ಕೆ ಸಲ್ಲುವ ಋಣವಿಲ್ಲ ಎಂದು ಕೊಳ್ಳುವನು.

ಅದೇ ರೀತಿ ನಿರ್ವಿಕಾರಿಯೂ ತ್ಯಾಗಿಯೂ ಆದ ಜಂಗಮನು ಸ್ವಾಭಿಮಾನ ಬಿಟ್ಟು ಯಾರನ್ನು ಬೇಡನು. ಬಂದುದರಲ್ಲಿಯೇ ಪರಮತೃಪ್ತಿಯನ್ನು ಹೊಂದುವನು. ಅದೇ ರೀತಿ ಯಾರನ್ನೂ ಬಲಾತ್ಕರಿಸಿ, ಅಥವಾ ಯಾರದಾದರೂ ಬಲವನ್ನು ಉಪಯೋಗಿಸಿ ವಸೂಲಿ ಮಾಡನು, ದಾನವು ಸ್ವಯಂ ಪ್ರೇರಣೆಯ ಕೃತಿಯಾದಾಗ ಅದು ಪುಣ್ಯಾರ್ಜನೆಗೆ ಸಹಾಯಕ ವಾಗುವದು. ಆದ್ದರಿಂದ ಅಲ್ಲಿ ಬಲಾತ್ಕರ ಸಲ್ಲ.

ಅದೇ ರೀತಿ ಭಕ್ತಿಯು ವ್ಯವಹಾರವೂ ಅಲ್ಲ. ಒಂದರಷ್ಟು ಕೊಟ್ಟು ಹತ್ತರಷ್ಟು ಪಡೆವ ವ್ಯವಹಾರವಲ್ಲ. ಆದ್ದರಿಂದ ಜಂಗಮನು, ಸಂಚರಿಸುವ ತ್ಯಾಗಿಯು, ನಿಸ್ವಾರ್ಥಿಯು,

ಅವನು ಧರ್ಮಜ್ಞಾನ ನೀಡಿ ಭಕ್ತರ ಹೃದಯ ಕಮಲಗಳನ್ನು ಅರಳಿಸುವನು. ಅಲ್ಲಿ ಸದ್ಗುಣವು ವಿಕಸಿಸುವಂತೆ ಮಾಡುವನು. "ತೊಟ್ಟು ಬಿಡದನ್ನಕ್ಕ ಮತ್ತೆ ಆ ಬುಡದ ಆಸೆ ಹಣ್ಣಿಗಿರಬೇಕು'' ಎಂದು ಆಯ್ದಕ್ಕಿ ಲಕ್ಕಮ ಹೇಳುವಂತೆ ಮರ್ತ್ಯಲೋಕದಲ್ಲಿ ಜೀವಸಿದಿ ತೊಟ್ಟಿಗೆ ಈ ಜೀವದ ಹಣ್ಣು ಅಂಟಿಕೊಂಡಿರುವತನಕ ಆ ಜೀವಿಯು ಸಮಾಜ ರಾಷ್ಟ್ರಗಳ ಹಿತಚಿಂತನೆ ಮಾಡಬೇಕು' ಎಂಬ ಕರ್ತವ್ಯ ಪ್ರಜ್ಞೆ ಮೂಡಿಸುವಳು.

ತನ್ನ ನಿಸ್ವಾರ್ಥದ ಬದುಕಿನಿಂದ ತಾನು ಲೋಕ ಹಿತಕ್ಕಾಗಿ ಕಂಕಣಧಾರಿಯಾಗಿ ನಿಂತ ವ್ಯಕ್ತಿ ಎಂಬುದನ್ನು ಸಾದರ ಪಡಿಸುವನು. ಆಗ ಭಕ್ತಿ ಮುಖದಿಂದ ಬಂದ ಸಂಪತ್ತನ್ನು ನಿರ್ಲಿಪ್ತಭಾವದಿಂದ ಸ್ವೀಕರಿಸಿ, ದೈವೀಕಾರ್ಯಕ್ಕೆ ವಿನಿಯೋಗಿಸುವನು. ಇಂತಹ ಜಂಗಮುವನು ಸಿದ್ಧರಾಮೇಶ್ವರರು ತುಂಬು ಹೃದಯದಿಂದ ಕೊಂಡಾಡುವರು.

— ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು

ಬಸವ ಸ್ಮರಣೆ

ಬಸವ ನಿನ್ನಯ ಸ್ಮರಣೆ।
ಅನುದಿನವೂ ಮಾಡಲಿರುವೆ ॥ ಪ ॥

ಬಸವ ಸ್ಮರಣೆಯಿಂದ ಬದುಕು ಸಾರ್ಥಕವು।
ಬಸವ ಸ್ಮರಣೆಯಿಂದ ಮನಕೆ ಸಂತಸವು ॥ ೧ ॥

ಬಸವ ತತ್ವದ ಪಥದಿ ನಾನೆಂದು ನಡೆಯುವೆನು।
ಆ ಪಥದಿ ನಡೆದರೆ ಜೀವನವೆ ಪಾವನವು ॥ ೨ ॥

ಬಸವ ಎನ್ನುವ ಪದವು ಶಿವನ ಸಂಕೇತ।
ಬಸವ ನಿನ್ನಯ ರೂಪ ಲಿಂಗದ ಪ್ರತಿರೂಪ ॥ ೩ ॥

ಬಸವ ತತ್ವದ ಜ್ಯೋತಿ ಜಗವನ್ನೇ ಬೆಳಗಲಿ।
ಬಸವ ದೇವನ ಕೀರ್ತಿ ಜಗಕೆಲ್ಲ ಹರಡಲಿ ॥ ೪ ॥

ಬಸವ ವಚನದ ಸಾರ ವಿಶ್ವಪ್ರಗತಿಗೆ ನಾಂದಿ।
ಹಾಡಿ ಹರಸಲಿ ಜಗವು ಶಿವಕಂದನ ॥ ೫ ॥

—ಕಮಲಾಕ್ಷಿ. ಎಮ್. ಹಿರೇಮಠ B. A.

ಸಮಸ್ಯೆ ಸಮಾಧಾನ!

ಶ್ಯಾಮಲಿಂಗ ಜವಳಗಿ, ಬೀದರ.

● ಮಾರ್ಚಿ-ಏಪ್ರಿಲ್ ಸಂಚಿಕೆ ಕಲ್ಯಾಣ ಕಿರಣ ಕಾಯ್ದಿಡಬೇಕಾದ ಒಂದು ಮಹತ್ವದ ವೈಚಾರಿಕ ಸಂಚಿಕೆ. ಓದಿ ನಮಗೆ ಆನಂದವಾಯಿತು. ಆದರೆ ಅಪ್ಪ ಬಸವಣ್ಣನವರ ಫೋಟೋ ಮುಖಪುಟದ ಮೇಲೆ ಫೋಟೊ ಬರದೆ ಇದ್ದುದು ನಿರಾಶೆ-ನೋವನ್ನುಂಟು ಮಾಡಿತು.

— ನಿಜ, ನಿಮ್ಮಂತೆಯೇ ನಮಗೂ ನೋವು ನಿರಾಶೆಯಾಯಿತು! ಏಕೆಂದರೆ ಮಾರ್ಚಿ ನಮ್ಮ ಹುಟ್ಟು ಹಬ್ಬವಾದ ಕಾರಣ ನಮ್ಮ ಫೋಟೋ ಹಾಕಬೇಕೆಂದು ಕಾರ್ಯ ನಿರ್ವಾಹಕ ಸಂಪಾದಕರು ಆಲೋಚಿಸಿ ಅದನ್ನು ಮುದ್ರಿಸಿದ್ದರು. ಏಪ್ರಿಲ್ ಬಸವ ಜಯಂತಿಯಾದ ಕಾರಣ ಬಸವಣ್ಣನವರ ಫೋಟೋ ಏಪ್ರಿಲ್ ಸಂಚಿಕೆಗೆ ಹಾಕಬೇಕೆಂದು ನಾವು ಆಲೋಚಿಸಿದ್ದೇವು. ಆದರೆ ಬೀದರಿನಲ್ಲಿದ್ದ ನಾನು ಬೀದರ ಕಾರ್ಯಕ್ರಮದ ಒತ್ತಡದ ಮಧ್ಯ ಮಾತ್ರ ಹರಕೆ ಮುಂತಾದ ಲೇಖನಗಳನ್ನು ಬೆಂಗಳೂರಿಗೆ ಕಳಿಸಲು ತಡವಾದ ಕಾರಣ ಅದು ಅನಿರೀಕ್ಷಿತವಾಗಿ ಸಂಯುಕ್ತ ಸಂಚಿಕೆಯಾಗಿ (ಮಾರ್ಚಿ-ಏಪ್ರಿಲ್) ಪ್ರಕಟವಾಯಿತು. ಅದಕ್ಕಾಗಿಯೇ ಏಪ್ರಿಲ್ ಸಂಚಿಕೆಗೆ ಬರಬೇಕಾಗಿದ್ದ ಬಸವಣ್ಣನವರ ಫೋಟೋ ಮೇ ಸಂಚಿಕೆಗೆ ಹಾಕಲಾಗಿದೆ.

ಹೆಸರು ಬೇಡ, ಊರು ಬೇಡ.

● ಮಾರ್ಚ್-ಏಪ್ರಿಲ್ ಸಂಚಿಕೆಯಲ್ಲಿ ಕೆಲವು ಸ್ವಾಮಿಗಳು ಹೇಗೆ ವ್ಯಕ್ತಿ ಪ್ರಚಾರದಲ್ಲಿ ತಲ್ಲೀನರಾಗಿರುತ್ತಾರೆ ಎಂಬ ಬಗ್ಗೆ ತಾವು ತುಂಬಾ ಚೆನ್ನಾಗಿ ಬರೆದಿದ್ದೀರಿ. ಆದರೆ ಅವರುಗಳು ಯಾರ ಹೆಸರನ್ನೂ ಬರೆದಿಲ್ಲ. ಏಕೆ? ಬರೆಯಲು ಧೈರ್ಯವಿಲ್ಲವೆ?

— ಧೈರ್ಯದ ಪ್ರಶ್ನೆಯಿಲ್ಲ, ಯಾರದ್ದೂ ವೈಯಕ್ತಿಕ ಅವಹೇಳನ ಮಾಡುವ ವಿಚಾರವಿಲ್ಲ ನಮಗೆ. ಒಂದು ಜನರಲ್ ವಿಷಯ ತೆಗೆದುಕೊಂಡು ಬರೆದಾಗ, ಯಾರಾರಿಗೆ ಯಾವ ವಿಷಯ ಸಂಬಧಿಸಿದೆಯೋ ಅವರು ಅದನ್ನು ಅರ್ಥಮಾಡಿಕೊಳ್ಳುವರು. ಅಥವಾ ಅವರಿಗೆ ಸಂಬಂಧಿಸಿದವರು ಅದನ್ನು ಅರ್ಥಮಾಡಿಕೊಳ್ಳುವರು. ಹಾಗೆ ಅರ್ಥ ಮಾಡಿಕೊಂಡು, ಮುಂದಾದರೂ ಅಂತಹ ತಪ್ಪು ಮಾಡದಿದ್ದರೆ ಸಾಕು ಎಂಬುದು ಬರವಣಿಗೆಯ ಉದ್ದೇಶವೇ ವಿನಾ, ಯಾರ ಹೆಸರನ್ನಾದರೂ ಎತ್ತಿಹಿಡಿದು, ಅವಹೇಳನ ಮಾಡುವುದಲ್ಲ,

ಚಂದ್ರಕಾಂತ ಬಿರಾದಾರ, ಗುಲಬರ್ಗಾ.

● ಹೋಮ-ಹವನಾದಿಗಳನ್ನು ಕುರಿತು ಬರೆಯುವಾಗ ಬೀದರಿನ ಪೂಜ್ಯ ಶಿವಕುಮಾರ ಸ್ವಾಮಿಗಳ ಹೆಸರು ಸೂಚಿಸಿದ್ದೀರಲ್ಲ. ಹಾಗಾದರೆ ಅದು ನಿಂದೆಯಲ್ಲವೆ?

— ನಿಂದೆಯಲ್ಲ; ಎರಡು ಭಿನ್ನವಾದ ವಿಚಾರವಾದದವರು ಎದುರು ಬದುರು ಕುಳಿತು ಮಾಡಿದ ಸಂವಾದ. ನಮ್ಮ ದೇಶದಲ್ಲಿ ಮಾತ್ರವಲ್ಲ ಬೇರೆ ದೇಶಗಳಲ್ಲಿ ಕೂಡ ಬೇರೆ ಬೇರೆ ವಿಚಾರಗಳ ತತ್ತ್ವಜ್ಞಾನಿಗಳು ಕುಳಿತು ಚರ್ಚಿಸುತ್ತಿದ್ದರು. ಉದಾಹರಣೆಗೆ ಜ್ಞಾನ ವರ್ಗಿಗಳಾದ ಶಂಕರಾಚಾರ್ಯರು, ಕರ್ಮಕಾಂಡಿಯಾದ ಮಂಡನಮಿಶ್ರ ಉಭಯತರೂ ಚರ್ಚಿಸಿದರು. ಹೋಮ-ಹವನಾದಿಗಳ ಪ್ರತಿ ಪಾದಕರಾದ ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳು, ಅವರ ವಿರೋಧಿಗಳಾದ ನಾವು ಕುಳಿತು ಉಭಯತರೂ ಚರ್ಚಿಸಿದ ವಿಷಯ ಮಂಡನೆಯ ವಿವರ ಮಾತ್ರ ನಾವು ಕೊಟ್ಟಿರುವುದು.

ಕೃಷ್ಣಕಾಂತ ಜೋಶಿ, ಬೀದರ.

● "ಅನ್ಯರಿಗೆ ಅಸಹ್ಯ ಪಡಬೇಡ; ಇತರ ಹಳಿಯಲು ಬೇಡ" ಎಂದು ಭೋಧಿಸಿದ ಬಸವಣ್ಣನವರು ಏಕೆ ಕರ್ಮಮಾರ್ಗವನ್ನು ಕ್ಷುದ್ರ ದೇವತಾರಾಧನೆ ಮುಂತಾದುವನ್ನು ಕಂಡು ಅಸಹ್ಯ ಪಟ್ಟರು, ಹಳಿದರು.

— ವೈಯಕ್ತಿಕ ನೀತಿ, ಸಾರ್ವತ್ರಿಕ ತತ್ತ್ವ ಈ ಎರಡರ ನಡುವಣ ಅಂತರವನ್ನು ಸ್ಪಷ್ಟವಾಗಿ ತಿಳಿಯದ ಜನರ ಸಂಖ್ಯೆಯೇ ಹಿಂದೂ ಸಮಾಜದ ಅವನತಿಗೆ ಪ್ರಮುಖ ಕಾರಣ. ರೋಗಿಗಳನ್ನು ಕಂಡು, ಪಾಪಿಗಳನ್ನು ಕಂಡು ಅಸಹ್ಯ ಪಡದೆ ಮಾತೃಕ ಮಾನವೀಯತೆಗಳಿಂದ ಕಾಣುವುದು ಮಾನವ ಧರ್ಮ. ವೈದ್ಯನು ರೋಗಿಯನ್ನು ಕಂಡು ಅಸಹ್ಯ ಪಡಬಾರದು; ಯಾರಿಗಾದರೂ ಕಾಯಿಲೆ ಕಸಾಯಿಲೆ ಆದಾಗ ಅಸಹ್ಯ ಪಡಬಾರದು; ಪಟ್ಟರೆ ಉಪಚರಿಸಲು ಸಾಧ್ಯವಾಗದು. ಆದರೆ ಆ ವ್ಯಕ್ತಿಯಲ್ಲಿ ಅಜ್ಞಾನ ಮೂಢನಂಬಿಕೆ ಇದ್ದರೆ, ಅವನು ಜಾತಿ ಭೇಧ ಮಾಡುತ್ತಿದ್ದರೆ ಆಗ ಅದನ್ನು ಕಂಡು ಅಸಹ್ಯಪಟ್ಟು ಅವನನ್ನು ತಿದ್ದಬೇಕು. ವೈಯಕ್ತಿಕವಾಗಿ ವ್ಯಕ್ತಿಗಳನ್ನು ನಿಂದಿಸಿ, ಹಳಿದು ಕುಚೋದ್ಯ ಮಾತಾಡಬಾರದು. ಅವನು ಹಿಡಿದ ದಾರಿಯಿಂದ ಅನ್ಯರಿಗೆ ತೊಂದರೆ ಸಮಾಜಕ್ಕೆ ಹಾನಿಯಾಗುತ್ತಿದ್ದರೆ, ಆ ಮಾರ್ಗದ ಲೋಪದೋಷ ತಿಳಿಸಿ ವ್ಯಕ್ತಿಯನ್ನು ಸರಿದಾರಿಗೆ ಹಚ್ಚಬೇಕು. ಅದು ಹಳಿಯುವಿಕೆಯಲ್ಲ, ಮಾರ್ಗದರ್ಶನ, ಸಮಾಜದ ಶುದ್ಧೀಕರಣ. ಅದನ್ನೇ ಎಲ್ಲ ಪ್ರವಾದಿಗಳೂ ಮಾಡಿದ್ದು!

ಸಿ. ಕೆ. ಶೆಟ್ಟರ, ಹುಬ್ಬಳ್ಳಿ.

● ನಿಮ್ಮ ಲೇಖನಗಳ ಮುಖಾಂತರ ಕೆಲವರು ಮಾಡುವ ತಪ್ಪುಗಳನ್ನು ತೋರಿಸಿದಾಗ, ಅವರು ನಿಮ್ಮ ವಿರೋಧಿಗಳಾಗುವರು; ಅಥವಾ ಅವರ ಭಕ್ತರಾದರೂ ನಿಮ್ಮ ವಿರೋಧಿಗಳಾಗಬಹುದು. ಇದರಿಂದ ನಿಮಗೆ ಹಾನಿಯಾಗದೆ?

— ಸದಾ ಅಂತರಾವಲೋಕನ (self-analysis) ಮಾಡಿಕೊಳುವ ಪ್ರಾಮಾಣಿಕ ಬುದ್ಧಿಜೀವಿಗಳು ನಾವು ಒಳ್ಳೆಯ ಉದ್ದೇಶದಿಂದ ತಪ್ಪನ್ನು ಎತ್ತಿ ತೋರಿಸಿದಾಗ, ಅವರು

ಎಚ್ಚತ್ತುಕೊಳ್ಳುವರು, ತಿದ್ದಿಕೊಳ್ಳುವರು. ಹಾಗೆ ನೋಡಿದಾಗ ನಾವೊಂದು ಉಪಕಾರವನ್ನೇ ಮಾಡಿದ್ದೇವೆಂದು ಕೃತಜ್ಞತೆ ತಾಳುವರು. ಆ ಅಂತರಾವಲೋಕನ ಮಾಡಿಕೊಳ್ಳುವ ಶಕ್ತಿಯಿಲ್ಲದವರು ದ್ವೇಷ ಭಾವನೆ ತಾಳುವರು. ಭಕ್ತವೃಂದವೂ ಅಷ್ಟೇ. ಪ್ರಾಮಾಣಿಕ ಬುದ್ಧಿ ಜೀವಿಗಳ ಅನುಯಾಯಿತ್ವ ಅವರಿಗಿದ್ದರೆ, ಗುರು–ಭಕ್ತ ಉಭಯತರೂ ತಿದ್ದಿಕೊಳ್ಳುವರು. ತಾತ್ತ್ವಿಕಅರ್ಥಪೂರ್ಣ ಭಕ್ತಿಯ ಬದಲು ಆವೇಶದ ಮೂಢ ಭಕ್ತಿಯಿರುವವರಾದರೆ, ಅವರು ಸಿಟ್ಟಿಗೇಳಬಹುದು. ಗುಹೇಶ್ವರನ ಶರಣ, ಅಲ್ಲಮಪ್ರಭುಗಳು ಶ್ರೀ ಸಿದ್ಧರಾಮ ಶಿವಯೋಗಿಗಳನ್ನು ಕಂಡು ಕೆಲವು ವಿಡಂಬನೆಯ ಮಾತನಾಡಿದಾಗ ಸಿದ್ಧರಾಮೇಶ್ವರರ ಶಿಷ್ಯರು ಪ್ರಭುದೇವರ ಮೇಲೇರಿ ಹೋದರು; ಮೊದಲು ಸಿದ್ಧರಾಮರೂ ಅಷ್ಟೇ! ನಂತರ ಉಭಯತರಲ್ಲಿ ಚರ್ಚೆ–ಸಂವಾದ ನಡೆದು ಪ್ರಭುದೇವರ ವಿಚಾರವು ಸಮ್ಮತವಾದ ಮೇಲೆ ಸಿದ್ಧರಾಮೇಶ್ವರರು ಹೀಗೆ ನುಡಿದರು:

> ಕೆರೆ ತೊರೆ ದೇಗುಲಂಗಳ ಕಡೆಯಿಂದ ನಿಮ್ಮ ಕಂಡೆ
> ಎಡಹುವ ಕಲ್ಲತೆಗೆವ ಮರೆಯಲ್ಲಿ ನಿಧಾನವ ಕಂಡಂತೆ
> ಎನ್ನ ಮರೆವೆಯ ತಮದ ಅದ್ರಿಗೆ ದಿನಮಣಿ ಜನಿಸಿದಂತೆ
> ಕಪಿಲ ಸಿದ್ಧಮಲ್ಲಿಕಾರ್ಜುನ ಲಿಂಗವೆಂಬ ಭ್ರಾಂತು ಸ್ವಯವಾಯಿತ್ತು,
> ಪ್ರಭುದೇವರ ಕಾರುಣ್ಯದಿಂದ,

ಇದರಲ್ಲಿ ಪ್ರಭುದೇವರ ಬಗ್ಗೆ ಎಂಥಾ ಕೃತಜ್ಞತೆ ವ್ಯಕ್ತವಾಗಿದೆ ನೋಡಿರಿ. ಪ್ರಭುದೇವರ ಈ ನಿಷ್ಠುರ ನಿಲುವಿನಿಂದಾಗಿ, ಪ್ರಾಮಾಣಿಕ ಪ್ರಯತ್ನದಿಂದಾಗಿ ನಮಗೊಬ್ಬ ಮಹಾ ಶಿವಯೋಗಿ ಸಿದ್ಧರಾಮೇಶ್ವರರು ಸಿಕ್ಕರು; ಅವರು ಬಸವ ಧರ್ಮದ ಪಂಚಬ್ರಹ್ಮರಲ್ಲಿ ಒಬ್ಬರಾದರು. ಗಣಾಚಾರಿಯ ಕೆಲಸ ನಮ್ಮದು; ತಾನಳಿಯದೆ ಸುವಾಸನೆ ಕೊಡುವ ಕಸ್ತೂರಿಯಂತೆ ಭೃತ್ಯಾಚಾರಿಯಾದರೇ ತನ್ನನ್ನು ತಾನು ಸುಟ್ಟುಕೊಂಡು ಸುವಾಸನೆ ಕೊಡುವ ಊದಿನ ಕಡ್ಡಿಯಂತೆ ಗಣಾಚಾರಿ. ಕೆಲವರಿಂದ ದ್ವೇಷಿಸಲ್ಪಟ್ಟರೂ, ತತ್ತ್ವನಿಷ್ಠನಾಗಿ ಸಮಾಜದ ಹಿತವನ್ನು ಬಯಸುವವನೇ ಗಣಾಚಾರಿ!

> ವರ್ಷವೆಲ್ಲವುಂಡು ಒಂದು ದಿನ ಬೆಳ್ಳನೆಯ
> ಹಾಳೆಯ ಮೇಲೆ ಕಕ್ಕರಿಗೆ ಕಾರಿ ಕೊಳ್ಳುವದು
> ಇದು ಪರೀಕ್ಷೆ. ನಮ್ಮ ನಾಡಿನ ಪ್ರಜೆಯನ್ನು
> ನಿರ್ಮಿಸುವ ಮಹಾಸಮೀಕ್ಷೆ   ಶಿ. ಪಾ. ಮ.

ಬಸವಾವತಾರದ
ಪೌರಾಣಿಕ ಮತ್ತು ಬಾಲಿಶ ಕಲ್ಪನೆಗಳು

—ಶಿವರಾಜ ಪಾಟೀಲ ಮಹಾಂತಪೂರ.

ಬಸವಣ್ಣನವರು ಅವತಾರಿ ಪುರುಷರೆಂಬ ಮಾತು ಸರ್ವ ಸಮ್ಮತ. ಸಾಮಾನ್ಯ ಮಾನವರಿಗೆ ಸಾಧಿಸಲಾಗದ ಅಸಮಾನ್ಯ ಕೆಲಸಗಳನ್ನು ಸಾಧಿಸುವುದರಿಂದ, ವಿಚಾರದಲ್ಲಿ ಆಚಾರದಲ್ಲಿ, ಹೃದಯವಂತಿಕೆಯಲ್ಲಿ ಆದರ್ಶರಾಗಿರುವುದರಿಂದ ಇವರನ್ನು ಅವತಾರಿಕರೆಂದು ಕರೆಯುವುದು. ಅವತಾರಿಯೆಂದರೆ ನಮ್ಮನ್ನುದ್ಧರಿಸಲು ನಮ್ಮ ಮಧ್ಯದಲ್ಲಿಯೇ ನಮ್ಮವರಿಂದ, ಸಮಾಜದಿಂದಲೇ ಸಿದ್ಧವಾಗುವ ವ್ಯಕ್ತಿ. ಮನುಷ್ಯರಲ್ಲಿಯೇ ಇದ್ದುಕೊಂಡು, ಮನುಷ್ಯರಂತೆಯೇ ಇದ್ದು ಸಾಮಾನ್ಯ ಮನುಷ್ಯರಿಗೆ ಆದರ್ಶನಾಗಿ, ದಾರಿದೀಪವಾಗಿ ನಿಲ್ಲುವ ವ್ಯಕ್ತಿಯೇ ಮಹಾತ್ಮ! ಕಾರಣಿಕ!! ಅವತಾರಿ!!! ಎಂದು ಕರೆಯಬಹುದಾಗಿದೆ. ಹಾಗೆಯೇ ಬಸವಣ್ಣನವರು ಅವತಾರಿಗಳು, ನಮ್ಮ ಹಾಗೆಯೇ ಹುಟ್ಟಿ, ನಮ್ಮ ಹಾಗೇ ಬೆಳೆದು ನಮಗೆ ಭಿನ್ನವಾಗಿ ನಿಂತ ವ್ಯಕ್ತಿ. ಅದಕ್ಕೆ ಅವನನ್ನು ಕಾರಣಿಕ, ಅವತಾರಿ ಎನ್ನುತ್ತೇವೆ.

ಲೋಕದಲ್ಲಿ ಅನ್ಯಾಯ, ಅಧರ್ಮ, ಅತ್ಯಾಚಾರ ಮಾಡುವ ಮಾನವರು ಹುಟ್ಟಿದ ಬಳಿಕ, ಅದನ್ನು ತಡೆಹಿಡಿಯುವ ಮಹಾಮಾನವ ಶಕ್ತಿಯೊಂದು ಉದಿಸಲೇಬೇಕು. ಅಂಥ ಶಕ್ತಿಗೆ, ಮಹಾವ್ಯಕ್ತಿಗೆ, ಸಾತ್ವಿಕತೆಗೆ, ಶಿವ–ದೇವರು ಎಂದು ಕರೆದರು. ಅಂಥ ಶಕ್ತಿ ಪಡೆದ ಮಹಾ ಮಾನವನಿಗೆ ಕಾರಣಿಕ ಅಥವಾ ಅವತಾರಿ ಎಂದು ಕರೆದರು. ಹಾಗೆ ದೇವರು ಅವತಾರ ತೆಗೆದುಕೊಳ್ಳುವುದೆಂದರೆ, ಒಬ್ಬ ಮಹಾ ಮಾನವನ ಸೃಷ್ಟಿಯಾಗುವುದು. 'ಅವರನ್ನೇ ದೇವರೆಂದು ಭಾವಿಸುವುದು' ಎಂಬ ಕಲ್ಪನೆ ಭಗವದ್ಗೀತೆಯದಾಗಿದೆ. ಅಂತೇ ಬಸವಣ್ಣನವರೂ ಈ ರೀತಿ ಕಾರಣಿಕರಾಗಿದ್ದಾರೆ, ಅವತಾರಿಗಳಾಗಿದ್ದಾರೆ. ಹರಿಹರ, ಭೀಮಕವಿ, ಸಿಂಗಿರಾಜ ಮುಂತಾದವರು ತಮ್ಮದೇ ಆದ ಕಲ್ಪನೆ ಮಂಡಿಸಿದ್ದಾರೆ. ಬಸವಾವತಾರ ಕುರಿತು ಬರೆದ ಕವಿಗಳ ಕೆಲವು ಕಲ್ಪನೆಗಳನ್ನು ಈಗ ನೋಡುವಾ.

"ಕೈಲಾಸದಲ್ಲಿ ಶಿವನ ಒಡ್ಡೋಲಗ, ಆ ಒಡ್ಡೋಲಗದಲ್ಲಿ ಸರ್ವರೂ ಪಾಲ್ಗೊಂಡಿದ್ದರು. ಅದರಲ್ಲಿ ವೃಷಭಮುಖನೆಂಬ ಒಬ್ಬ ಗಣೇಶ್ವರ (ಬಸವೇಶ್ವರನೆಂದಾಗುವವನು ಇವನೆ) ಇವನಿಗೆ ಶಿವನು 'ಸರ್ವ ಶರಣ ತತಿಗೆ' ಪ್ರಸಾದ ವಿತರಣೆ ಮಾಡೆಂದನು. ಹಾಗೆ ಮಾಡುವಾಗ ಎಲ್ಲರನ್ನು ಕೊಟ್ಟು, ಸ್ಕಂದದೇವ (ಷಣ್ಮುಖ) ನನ್ನು ಮಾತ್ರ ಮರೆತನು. ಷಣ್ಮುಖನು ತನಗೆ ಪ್ರಸಾದ ಸಿಕ್ಕಲಿಲ್ಲವೆಂದು ಎಚ್ಚರಿಕೆ ಕೊಟ್ಟಾಗಲೂ ವೃಷಭಮುಖನು

ಶಿವನೆದುರಿಗೆ ತಾನು ಪ್ರಸಾದವನ್ನು ಕೊಟ್ಟುದಾಗಿಯೇ ಸಾಧಿಸಲು ಯತ್ನಿಸಿದನು. ಈ ಒಂದು ತಪ್ಪಿಗಾಗಿ, ಗಣ ಸಮಕ್ಷಮದಲ್ಲಿ ಹುಸಿ ನುಡಿದ ದೋಷಕ್ಕಾಗಿ ಆತನಿಗೆ ಭೂಲೋಕದಲ್ಲಿ ಒಂದು ಜನ್ಮವೆತ್ತಬೇಕಾಗುವುದು. ಈ ಅಪ್ಪಣೆಯಿಂದ ವೃಷಭಮುಖನು ಜರ್ರೆಂದು ಜರಿದನು. ಮರ್ತ್ಯ ಜನ್ಮವ ನೆನೆದು ನಡುಗಿದನು. ಕ್ಷಮಿಸಬೇಕೆಂದು ಮೊರೆಯಿಡುವನು."

ಈ ತರಹದಲ್ಲಿದೆ ಹರಿಹರನ ಕಲ್ಪನೆ. ಇದನ್ನು ಓದಿದಾಗ, ಬಸವಣ್ಣನ ತತ್ತ್ವ, ಜೀವನ ಅರಿತುಕೊಂಡವನಿಗೆ ನಿಜವಾಗಿ ನಗುಬರುತ್ತದೆ. ನಗುವಿನೊಂದಿಗೆ ವಿಷಾದ ಪ್ರಾಪ್ತಿಯಾಗುತ್ತದೆ. ತಪ್ಪು ಮಾಡಿದ ಫಲವಾಗಿ ಮಾನವ ಜನ್ಮಕ್ಕೆ ಹೋಗು ಎಂಬ ಕಲ್ಪನೆಯೇ ತಪ್ಪು. ಮಾನವ ಜನ್ಮಕ್ಕೆ ಬರುವುದು ಪಾಪ-ಪುಣ್ಯಗಳ ಫಲದಿಂದ, ತಪ್ಪು ಮಾಡಿದ್ದರಿಂದ ಅಲ್ಲ. ಇಷ್ಟು ಮಾತ್ರವಲ್ಲ, ಮಾನವ ಜನ್ಮ ಬರುವುದೇ ಪುಣ್ಯದ ಫಲದಿಂದ. ಎಂಭತ್ತು ನಾಲ್ಕು ಲಕ್ಷ ಜೀವರಾಶಿಯೊಳಗೆ ಶ್ರೇಷ್ಠವಾದುದು ಮಾನವ ಜನ್ಮ. ಏನೆಲ್ಲ ಸಾಧಿಸುವದು ಈ ಜನ್ಮದಿಂದಲೇ ಮಾತ್ರ ! ಇಂಥ ಪವಿತ್ರವಾದ ಮಾನವ ಜನ್ಮ ಪಡೆದುಕೋ ಎಂದರೆ ಎದೆ ನಡುಗಿತು ಎಂದು ಹರಿಹರ ಹೇಳಿರುವನು. ಇದು ಅವನದೇಯಾದ ಭಾವನೆಯಾಗಿದೆಯಷ್ಟೆ.

'ಶರಣರ ಮನೆಯ ಬಾಗಿಲು ಕಾಯ್ವ ಪದವಿ ಬೇಕು' 'ಮಾವಿನಕಾಯೊಳಗೆ ಎಕ್ಕೆಕಾಯಿಯಾಗಿ ಬಾಳಬೇಕು' 'ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಬೇಕು' 'ದೀನದಲಿತರನ್ನು ಕಂಡು ಕರುಳು ಕರಗಿ ಅಪ್ಪ, ಬೊಪ್ಪ ಎಂದು ಕರೆದ ಬಸವಣ್ಣ" ಮಾನವನಾಗಿ ಹುಟ್ಟಿ ಮಾನವ ಸೇವೆ ಮಾಡಲು ಅವನ ಎದೆ ಯಾಕೆ ನಡುಗಬೇಕು ? ಇಂಥ ದೀನ ದಲಿತರ ಸೇವೆ ಮಾಡಲೋಸುಗ ಒಂದಲ್ಲ ಹತ್ತು ಜನ್ಮಗಳು ಕೊಟ್ಟರೂ ಬಸವಣ್ಣ ಬೇಡವೆನ್ನುವವನಲ್ಲ. 'ಮಹಾತ್ಮಾ ಗಾಂಧೀಜಿಯವರು ದೇವರಲ್ಲಿ ಮೊರೆಯಿಡುತ್ತ ಇನ್ನೊಂದು ಜನ್ಮ ನನಗೆ ಕರುಣಿಸುವುದಾದರೆ ಹರಿಜನರ ಮನೆಯಲ್ಲಿ ಹುಟ್ಟಿಸು' ಎಂದರಂತೆ. ಬಸವಣ್ಣನವರಾದರೂ ದೇವರಿಗೆ ಮೊರೆಯಿಡುತ್ತ 'ಈ ಜನ್ಮದಲ್ಲಿ ಮಹಾ ಬ್ರಾಹ್ಮಣನ ಮನೆಯಲ್ಲಿ ಜನ್ಮ ನೀಡಿದೆ, ಇನ್ನೊಂದು ಜನ್ಮ ಕೊಡುವುದಾದರೆ ಅಸ್ಪೃಶ್ಯನ ಮನೆಯಲ್ಲಿ ಕೊಡು' ಎಂದು ಕೇಳುತ್ತಿದ್ದರೋ ಏನೋ ? ಇಂಥ ಪ್ರಗತಿಪರ ವೈಚಾರಿಕವಾದ ಜೀವನ ನಡೆಸಿ ಐತಿಹಾಸಿಕ ವ್ಯಕ್ತಿಯಾಗಿ, ಗಾಂಧಿಯಂತೆ, ಗಾಂಧಿಗಿಂತಲೂ ಪ್ರಗತಿಪರ ವಿಚಾರಿಯಾಗಿ ಎಂಟುನೂರು ವರ್ಷ ಮೊದಲಿಗೇ ಆಗಿ ಹೋದ ಬಸವಣ್ಣನವರಿಗೆ ಪೌರಾಣಿಕ ರೂಪ ಕೊಟ್ಟು ನಿಜವಾದ ಸತ್ಯವನ್ನೇ ಮರೆಸಿದ ಪಾಪವು (!) ಹರಿಹರ ಮಹಾಕವಿಗೆ ಸಲ್ಲುತ್ತದೆ. ಬಸವಣ್ಣನವರು ಬಾಳಿದ ಒಂದು ಶತಮಾನದ ಅಂತರದಲ್ಲೇ ಇಂಥ ಹರಿಹರ ಈ ಕೆಲಸ ಮಾಡಿದ್ದರಿಂದ ಬಸವಣ್ಣನವರ ಜೀವನದ ಸತ್ಯ ಸಂಗತಿಗಳೇ ಮರೆಯಾಗಿವೆ. ಈಗ ಬಸವಣ್ಣನವರನ್ನು ದೇವರಾಗಿ ಕಾಣುವುದಕ್ಕಿಂತ, ಒಬ್ಬ ಆದರ್ಶ ವ್ಯಕ್ತಿಯನ್ನಾಗಿ ಕಾಣಬೇಕಾಗಿದೆ. ನಮ್ಮಂತೆ ಹುಟ್ಟಿ, ಬೆಳೆದು, ನಮ್ಮ ಗುರುವಾಗುವ ಸಾಧನೆ ಹೇಗೆ ಮಾಡಿದ, ಆ ದಾರಿ ಯಾವುದು ? ಎಂಬುದು ವಾಸ್ತವ ದೃಷ್ಟಿಕೋನದಿಂದ ತಿಳಿಯಬೇಕಾಗಿದೆ.

"ಶಿವನು ಬೇರೆಯಲ್ಲ, ಬಸವ ಬೇರೆಯಲ್ಲ, ಇಬ್ಬರೂ ಅದ್ವಯರು, ಬೆರೆತು ಬೇರೆ ಇಲ್ಲದಂತೆ ಇದ್ದಾರೆ. ಈತ ಕಲಿಯುಗದ ಎರಡನೇಯ ಮುಕ್ಕಣ್ಣ. ಶಿವನೇ ಭೂಲೋಕಕ್ಕೆ

ಬಸವನಾಗಿ ಬಂದಿರುವಾಗ, ಅವನನ್ನು ನರನೆಂದು ಕರೆಯಬಹುದೆ ? ಶಿವನಿಗೂ-ಬಸವನಿಗೂ ಬೇಧವಿರುವುದಾದರೆ ಪುರಹರ ನಿರವಯದಿಂದ್ದಿರುವನು, ಬಸವ ಸಾವಯವದಿಂದ ಚಲಿಸುವನು. ಆದ್ದರಿಂದ ಬಸವ (ಸಶಿವ)".

ಎಂದು ಭೀಮಕವಿಯು ಹೇಳಿದ್ದಾನೆ. ಹರಿಹರನ ಕಲ್ಪನೆಯಲ್ಲಿ ತಪ್ಪು ಮಾಡಿದ್ದರ ಫಲವಾಗಿ "ಖೈದಿ"ಯಾಗಿ, ಶಿಕ್ಷೆಯನ್ನು ಭೋಗಿಸಲು ಭೂಲೋಕಕ್ಕೆ ಬಂದರೆ, ತೆಲುಗು ಪುರಾಣ ಕರ್ತೃವಾದ ಸೋಮನಾಥ ಮತ್ತು ಭೀಮಕವಿಯ ದೃಷ್ಟಿಯಲ್ಲಿ, ಅವನು ಮನುಷ್ಯನಾಗಿ ಕಂಡಿಲ್ಲ. ಸಾಕ್ಷಾತ್ ಶಿವನೆಂದು ಪರಿಗಣಿಸಿ ಬರೆದಿರುವನು. ಮಾನವನನ್ನು ಅತಿಮಾನುಷ ಶಕ್ತಿಗೆ ಹೋಲಿಕೆ ಮಾಡಿರುವುದು ಒಳ್ಳೆಯದಾದರೂ ಸತ್ಯವನ್ನು ಮರೆಮಾಚಿ ಈ ಕಲ್ಪನೆ ಕೊಟ್ಟದ್ದು ವಿಷಾದಕರ ! ಇವನು ಬಸವಣ್ಣನವರ ಸಮಕಾಲೀನ ಕವಿಯಾಗಿದ್ದನೆಂದು ಅಧಿಕೃತವಾಗಿ ತಿಳಿದುಬರುತ್ತದೆ. "ಬಸವಣ್ಣನನ್ನು ಕಂಡು ಪುನೀತನಾಗಬೇಕೆಂದು ಆಂಧ್ರದಿಂದ ಕಲ್ಯಾಣಕ್ಕೆ ಬರುವಾಗ, ಮಧ್ಯದಲ್ಲಿಯೇ ಬಸವಣ್ಣ ಹೋದನೆಂಬ ಸುದ್ದಿ ಕೇಳಿ, ಬಸವಾ, ಬಸವಾ, ಎನ್ನುತ್ತ ಹೋಗಿ ಬಸವ ಪುರಾಣ ದ್ವಿಪದಿಯಲ್ಲಿ ರಚಿಸಿದ್ದಾಗಿಯೂ" ಹೇಳಿಕೊಂಡಿದ್ದಾನೆ. ಹೀಗಿರುವಾಗ ವಾಸ್ತವವಾಗಿ ಕಂಡ, ಕೇಳಿದ, ವಿಷಯ ವಾಸ್ತವ ದೃಷ್ಟಿಕೋನದಿಂದ ನೋಡದೆ, ಅತಿಮಾನುಷ ದೃಷ್ಟಿಯಿಂದ ನೋಡಿ ಬಸವ ಪುರಾಣ ರಚಿಸಿದ್ದು, ಸತ್ಯವನ್ನು ಮುಚ್ಚಿಟ್ಟು, ಸುಳ್ಳಿಗೆ ಹೊಳಪು ಕೊಟ್ಟಂತಾಗಿದೆ. ಈ ಕಲ್ಪನೆ ಹರಿಹರನಷ್ಟು ಬಾಲಿಶವಾಗಿರದೆ ಅವನಿಗಿಂತ ಸ್ವಲ್ಪ ಸುಧಾರಿಸಿದ ಕಲ್ಪನೆಯಾಗಿದೆ.

"ನಾರದನು ಒಮ್ಮೆ ಕೈಲಾಸಕ್ಕೆ ಬಂದು, ಭೂಲೋಕದಲ್ಲಿ ಶಿವಭಕ್ತಿಯ ನಿಚ್ಚಳ ಅರಿವು ನಶಿಸಿ ಹೋಗುತ್ತಿದೆಯೆಂದೂ ಅದಕ್ಕಾಗಿ ಶಿವನೇ ಭೂಮಿಯಲ್ಲಿ ಅವತರಿಸಿ ಅದನ್ನು ಪುನರುಜ್ಜೀವಿಸಿ ಮರ್ತ್ಯರನ್ನು ಪಾವನಗೊಳಿಸಬೇಕೆಂದೂ ಬೇಡಿಕೊಳ್ಳುವನು. ಅದಕ್ಕೆ ಶಿವನು 'ನಂದಿ ನಾಥಾಗ್ರೇಸರನಿಗೂ ನನಗೂ ಭೇದವಿಲ್ಲ. ನಾವು ಈತನನ್ನೇ ಭೂಮಿಗೆ ಕಳುಹುವೆವು. ಈ ಎರಡನೆಯ ಶಂಕರನಿಂದಲೇ ಲೋಕವೆಲ್ಲ ಪಾವನ ಹೊಂದುವುದು' ಎಂದು ಹೇಳಿ ನಂದಿಯನ್ನು ಭೂಲೋಕಕ್ಕೆ ಕಳುಹುವನು".

ಇದು ಭೀಮಕವಿಯು ಬರೆದ ಬಸವ ಪುರಾಣದಲ್ಲಿ ನಿರೂಪಿತವಾಗಿದೆ. ಇವನು ತೆಲುಗು ಪುರಾಣವನ್ನು ಆಧರಿಸಿ ಬರೆದಿರುವುದರಿಂದ ಹೆಚ್ಚು ಕಡಿಮೆ ಸೋಮನಾಥನ ಹೋಲಿಕೆಯಲ್ಲಿಯೇ ಸ್ವಲ್ಪ ಭಿನ್ನವಾಗಿ ಬರೆದಿದ್ದಾನೆ. ಹರಿಹರನಲ್ಲಿ 'ತಪ್ಪಿನ ಫಲದಿಂದ' ಅವತರಿಸುವುದಕ್ಕೂ ಭೀಮಕವಿಯಲ್ಲಿ 'ನಾರದನ ಬೇಡಿಕೆಯಂತೆ ಲೋಕವನ್ನು ಉದ್ಧರಿಸಲು ನಂದೀಶನೇ ಬಸವನಾಗಿ ಬರುವುದಕ್ಕೂ ಬಹಳ ವ್ಯತ್ಯಾಸವಿದೆ. ಅವನಿಗಿಂತಲೂ ಸ್ವಲ್ಪ ಸುಧಾರಿಸಿದ ಕಲ್ಪನೆಯನ್ನಿಟ್ಟುಕೊಂಡು ಕಾವ್ಯ ರಚನೆ ಗೈದಿದ್ದಾನೆ. ಈ ಕಲ್ಪನೆಯಿಂದಾಗಿ ಶಿವನ ವಾಹನ ಎತ್ತು ಬಸವನಾಗಿ ಬಂದನೆಂದು ಎತ್ತನ್ನು ಬಸವನೆಂದು ಜನ ಭಾವಿಸಿದರು. ಹೀಗಾಗಿ ಇಂದು ನಾವು 'ಬಸವ ಜಯಂತಿ' ಆಚರಣೆ ಮಾಡುತ್ತಿದ್ದರೇ, ಅದು ಬಸವಣ್ಣನವರ ಹುಟ್ಟು ಹಬ್ಬ ಎಂದು ಭಾವಿಸದೆಯೆ, ಎತ್ತುಗಳ ಪೂಜೆ ಮಾಡುವುದು. ಮಣ್ಣಿನಿಂದ

ಎತ್ತನ್ನು ಮಾಡಿ, ಅವುಗಳಿಗೆ ಬಣ್ಣ ಹಾಕಿ ಪೂಜಿಸುವ ಪದ್ಧತಿ ನಮ್ಮ ಹಳ್ಳಿಗಳಲ್ಲಿದೆ. ಕಾರಣ ಇಂಥ ಪುರಾಣದ ಬಾಲಿಶ ಕಲ್ಪನೆಗಳೇ ಕಾರಣವಾಗಿವೆ. ಎಲ್ಲಿಯವರೆಗೆ ಜನತೆ ಜಾಣ ಶಾಗುವುದಿಲ್ಲವೋ, ಎಲ್ಲಿಯವರೆಗೆ **ವಿಚಾರ**ವಾದ, ವೈಚಾರಿಕ ಪ್ರಜ್ಞೆ ನಮ್ಮ ಜನತೆಯಲ್ಲಿ ಬೆಳೆಯುವುದಿಲ್ಲವೊ ? ಅಲ್ಲಿಯ**ವರಗೆ** ಈ ಪುರಾಣದ ಕಲ್ಪನೆಗಳನ್ನೆ ಜನತೆ ಒಪ್ಪುವುದು ಸಹಜವಾಗಿದೆ.

"ವೃಷಭನು ಒಮ್ಮೆ ಕಾರಣಾಂತರದಿಂದ ಭೂಲೋಕಕ್ಕೆ ಬಂದಾಗ ತನ್ನ ಆತ್ಮಲಿಂಗ ವನ್ನು ಅನಿಮಿಷನಿಗೆ ಕೊಟ್ಟು ಬಿಡುವನು. ನಂತರ ಈತನು ಕೈಲಾಸಕ್ಕೆ ಮರಳಿದಾಗ ದ್ವಾರ ಪಾಲಕರಾಗಿದ್ದ ಸಿಂಹಕೇಶ ಹಾಗೂ ದ್ರವಿಡರೆಂಬವರು ಆತ್ಮಲಿಂಗ ವಿರಹಿತನಾದ ವೃಷಭ ನನ್ನು ಒಳಗೆ ಪ್ರವೇಶಿಸಲು ಬಿಡದೆ ತಡೆಯುವರು. ಈ ವ್ಯಾಜ್ಯವು ಶಿವನ ಸಮ್ಮುಖಕ್ಕೂ ಹೋಗುವುದು. ದ್ವಾರಪಾಲಕರ ಅಭಿಪ್ರಾಯವನ್ನು ಅಲ್ಲಗಳೆಯಲು ಸಾಧ್ಯವಿಲ್ಲದೆ ಶಿವನು, 'ನೀನು ಇಳೆಯಲ್ಲಿ ಅವತರಿಸಿ ನಿಂದೆಯನ್ನು ನೀಗಿ ಬಾ' ಎಂದು ವೃಷಭನಿಗೆ ಅಪ್ಪಣೆ ಮಾಡುವನು. ದ್ವಾರಪಾಲಕರಿಗೂ ಭೂಲೋಕದಲ್ಲಿ ಜನಿಸುವ ಅಪ್ಪಣೆಯಾಗುವುದು. ಹೀಗೆ ವೃಷಭನು ಬಸವೇಶ್ವರನಾಗಿಯೂ' ಶಿವನು ಪ್ರಭುವಾಗಿಯೂ, ಅಮರಗಣಂಗಳು ಶಿವಶರಣರಾಗಿಯೂ ದ್ವಾರಪಾಲಕರು ಬಿಜ್ಜಳ – ಕರ್ಣದೇವಾರಾಗಿಯೂ ಕಲ್ಯಾಣದಲ್ಲಿ ಜನಿಸಿದರು."

ಇದು ಸಿಂಗಿರಾಜನ ಕಲ್ಪನೆಯಾಗಿದೆ. ಇದು ಬಸವಣ್ಣನ ಅವತಾರವಾಗುವುದು ಶಿವನ ಅಪ್ಪಣೆಯಂತೆ, ನಿಂದೆಯನ್ನು ನೀಗಲು. ಅರ್ಥಾತ್ ಅವನು ಸ್ವಯಂ ಉದ್ಧಾರವಾಗಲು ಬರುತ್ತಾನೆ. ಜೊತೆಗೆ 'ಲೋಕ ಕಲ್ಯಾಣ'ವೆಂಬ ಮಾತೂ ಒರುತ್ತದೆ. ಇಲ್ಲಿ ವಾಸ್ತವಕ್ಕೆ ಹತ್ತಿರವಾದ ಸ್ವಲ್ಪ ಸುಳ್ಳಿನೊಂದಿಗೆ ಬಸವಣ್ಣನ ಜೀವನ ಪೌರಾಣಿಕಗೊಳಿಸಿದ್ದಾನೆ. ಇಲ್ಲಿ ಮಾನವ ಸಹಜತೆ ಮತ್ತು **ಕಾರಣಿಕ ಪುರುಷ**ನೆಂಬಂತೆ ದೈವೀ ದೃಷ್ಟಿಕೋನದಿಂದ ಚಿತ್ರಿಸಿ ರುವನು. ಇಷ್ಟಾಗಿಯೂ ಇವನು **ಸತ್ಯವನ್ನು** ಮರೆಮಾಚಿರುವನು.

ಹೀಗೆ ಒಬ್ಬೊಬ್ಬರು ಒಂದೊಂದು ರೀತಿಯ ಬಾಲಿಶ ಕಲ್ಪನೆಗಳಿಂದ ಬಸವನ ಅವತಾರ ಕುರಿತು ಹೇಳಿರುವುದರಿಂದ ಅವುಗಳನ್ನು ನಂಬುವ ಅವಶ್ಯಕತೆಯಿಲ್ಲ. ನಮಗೆ ಬಸವಣ್ಣ ನಾಗಿಯೋ ದೇವರು ವಿಧಿಸಿದ ಶಿಕ್ಷೆಗಾಗಿಯೋ ಹುಟ್ಟಿದನೆಂದು ಬರೆಯುವುದು–ಹೇಳುವುದ ಕ್ಕಿಂತ, ಸಹಜವಾಗಿ, ವಾಸ್ತವ ದೃಷ್ಟಿಕೋನದಿಂದ ಅವನೊಬ್ಬ ಮನುಷ್ಯನಾಗಿ ನಮ್ಮ ಹಾಗೆಯೇ ಹುಟ್ಟಿದ. ಆದರೆ ಅತ್ಯಂತ ಪ್ರತಿಭಾವಂತ ವ್ಯಕ್ತಿಯಾಗಿ, ಬುದ್ಧಿಶಾಲಿಯಾಗಿ ಸಾಧನೆ ಮಾಡಿದ. ಇಟ್ಟ ಹೆಜ್ಜೆ ಹಿಂದೆಗೆಯಲಿಲ್ಲ, ಹಿಡಿದ ಕೆಲಸ ಬಿಡಲಿಲ್ಲ. ಇಟ್ಟುಕೊಂಡ ಧ್ಯೇಯ ಬಿಡಲಿಲ್ಲ. ಸ್ತುತಿ ನಿಂದೆಗಳಿಗೆ ಹೆದರಲಿಲ್ಲ. ಪ್ರಾಣವನ್ನೇ ಪಣಕ್ಕಿಟ್ಟು ತನ ಅಂತರಂಗ ಬೋಧಿಸಿದ ಸತ್ಯವನ್ನೇ ತತ್ವವನ್ನಾಗಿ ಹೇಳಿದ. ಆ ತತ್ವಗಳನ್ನು ಆಚರಣೆಯಲ್ಲಿ ತರಲು ಉದ್ದಕ್ಕೂ ಶ್ರಮಿಸಿದ. ಆ ಶ್ರಮದ ಫಲದಿಂದಾಗಿ ಉನ್ನತ ಸ್ಥಿತಿಗೇರಿದ, ಕೆಲವರು

ದೇವರೆಂದರು, ಆಗದಿರುವವರು ದ್ರೋಹಿ ಎಂದರು. ಅದಾವುದಕ್ಕೂ ಗಮನ ಹರಿಸದೆ,

"ನಾಳೆ ಬಪ್ಪುದು ನಮಗಿಂದೇ ಬರಲಿ, ಇಂದು
ಬಪ್ಪುದು ಈಗಲೇ ಬರಲಿ, ಇದಕಾರು ಅಂಜುವರು
ಇದಕಾರು ಅಳುಕುವರು 'ಜಾತಸ್ಯ ಹಿ: ಧ್ರುವೆಂಮ್ರುತ್ಯು ।
ಎಂಬುದಾಗಿ, ಕೂಡಲ ಸಂಗನು ಬರೆದ
ಬರಹ ತಪ್ಪಿಸುವುದು ಹರಿಬ್ರಹ್ಮಾದಿಗಳಳವಲ್ಲ"

ಎಂದು ಹೋರಾಟ ನಡೆಸಿದ' ಕ್ರಾಂತಿ ಮಾಡಿದ ಧೀರಯೋಗಿ, ಕ್ರಾಂತಿಯು ಸಫಲವಾಗದೆ ವಿಫಲವಾದರೂ ಹೆದರದೆ, ವಿಫಲತೆಯಲ್ಲೇ ಸಾಫಲ್ಯತೆ ಕಂಡವ. ಇಂಥ ಚಾರಿತ್ರಿಕ ಮಹಾ ಪುರುಷ ಬಸವಣ್ಣನನ್ನು, ಪುರಾಣಗಳು ಹೇಗೇ ಚಿತ್ರಿಸಲಿ, ವಾಸ್ತವ ಸತ್ಯ ನಮಗೆ ತಿಳಿದಿರ ಬೇಕು.

"ವೈದಿಕ ಪುರಾಣಗಳ ಮಾದರಿಯಲ್ಲಿ ಬಸವಣ್ಣನ ಹೆಗ್ಗಳಿಕೆಯನ್ನು ಗಮನಿಸಿದ ಕವಿಗಳು ಅವತಾರಿ ಪುರುಷನನ್ನಾಗಿ ಮಾಡುವುದರಲ್ಲಿ ಪುರಾಣ ಗ್ರಂಥ ರಚಿಸುವಲ್ಲಿ ಕೆಲವು ಬಾಲಿಶ ಕಲ್ಪನೆಗಳನ್ನು ಸೃಷ್ಟಿಸುವಲ್ಲಿ ಅವರ ಉತ್ಕಟ ಭಕ್ತಿ–ಅಭಿಮಾನಗಳು ಕೆಲಸ ಮಾಡಿವೆ ಯೆಂದಷ್ಟೇ ನಂಬೋಣ".

–000–

ಬಸವ ಬಳ್ಳಿ

ನೆನೆನೆನೆದು ನೀರುಣಿಸು ಬಸವ ಬಿತ್ತಿಹ ಲತೆಗೆ ।
ವಿಶ್ವದಲ್ಲಿ ಪಸರಿಸಿ ಹಸುರಾಗಿ ಹಬ್ಬಲಿ ॥ಪ॥

ಜಾತಿ ಮತಗಳು ಇಲ್ಲ ನೀತಿ ಭ್ರಷ್ಟತೆ ಇಲ್ಲ ।
ಪಾತಕರ ಪಾಂಡಿತ್ಯ ಮೊದಲೇ ಇಲ್ಲ ॥
ಮಾತು ಮಾತಿಗೂ ಇರುವ ಶಾಂತಿ ಸಹನೆಯ ಲತೆಯ ।
ಕಾಂತಿ ಕುಸುಮಗಳರಳಿ ಬೆಳಗಲಿ ॥

ಗಾಡಾಂಧ ಕಾರವನು ಈಡಾಡಿ ಬಿಡುತಿರಲಿ ।
ಮೂಢ ಜನ ಮೌಢ್ಯವ ನಶಿಸಿ ಬಿಡಲಿ ॥
ಬಾಡದಂತೆ ಇರಲಿ ನಾಡೊಳು ಈ ಬಳ್ಳಿ ।
ರೂಢಿ ಒಳ ಹೊರಗೆಲ್ಲ ಹಬ್ಬಿ ಹರಿಯಲಿ ॥

ಈ ಕುಸುಮ ದಿಂ ಹೊರಟ ಸುಜ್ಞಾನ ಸೌರಭವು ।
ಜನ ಮನವ ತಣಿಸಿ ಸುಖವ ನೀಡಿ ॥
ಅನುದಿನ ಅನುಭವಿಸಿ, ಆನಂದ ಹೊರ ಸೂಸಿ ।
ಬಸವ ಗುರುವಿನಡಿಗೆ ತಲುಪಿಸಲಿ ॥

—ಜಿ. ಬಿ. ಸಿನ್ನೂರು ಗೌಡಗಾಂವ

ಬಸವ ಸಿರಿ

ಸಂಸ್ಕೃತದ ಎಳನೀರು
ಜನ ಸಾಮಾನ್ಯನಿಗೆ ಕನ್ನಡಿಯ ಗಂಟಾದಾಗ
ತಾಯ್ನುಡಿಯ ಸಿಹಿನೀರಿನೊರತೆ
ಬಸವ ಸಿರಿಯಾಗಿ ಹರಿದು
ಕೂಡಲ ಸಂಗಮ ಸೇರಿತು,
ಬಾಯಾರಿಕೆಯುಳ್ಳವರೆಲ್ಲಾ ಈ ಸಿಹಿನೀರು ಕುಡಿದರು
ವಚನ ಸಿರಿಯ ಬಸವ ಸಿರಿ
ಸಾಹಿತ್ಯ ಬದುಕಿಗೊಂದು ಹೊಸ ದೃಷ್ಟಿಯೊದಗಿಸಿದೆ.
ಕ್ರಾಂತಿ ಜ್ವಾಲೆ ಹೊತ್ತಿಸಿದೆ
ವರ್ಣಾಶ್ರಮ ಪದ್ಧತಿ, ಮೂಢ ನಂಬಿಕೆಗಳು
ಅಂತರ–ಬೆಂತರ ಮಂತ್ರ ಮಾಟಗಳು
ಈ ಜ್ವಾಲೆಯಲ್ಲಿ ಧಗಧಗನೆ ದಹಿಸಿದವು.
"ಕಳಬೇಡ ಕೊಲಬೇಡ"............
"ದಯವೇ ಧರ್ಮದ ಮೂಲ"............
ಮುಂತಾದ ನುಡಿ ಮುತ್ತುಗಳು
ಗಾಳಿಯಲ್ಲಿ, ಗೆಜ್ಜೆ ಕಟ್ಟಿ ರವಗುಟ್ಟಿದವು
ಮರ್ತ್ಯದಲ್ಲಿ ದೇವಲೋಕದ ಬಾಗಿಲು ತೆರೆಯಿತು
ಬಸವ ಸಿರಿ ಈ ನೆಲದ ಕಲ್ಯಾಣದಲ್ಲಿ
ಬೇರು ಬಿಟ್ಟು ಹೆಮ್ಮರವಾಗಿ
ಹೂ ಕಾಯಿ ಬಿಟ್ಟಿದೆ
ನೆಮ್ಮದಿ ಬಯಸುವವರೆಲ್ಲ
ಇದರ ತಣ್ಣೆಲಲ್ಲಿ ಆಶ್ರಯ ಪಡೆಯಬಹುದು.

—ಎಮ್. ಜಿ. ಗಂಗನಪಳ್ಳಿ

ಶಾಂತಿದೂತ ಬಸವಣ್ಣ

ಪರಮ ಐಕ್ಯಸ್ಥಲವ ಸೇರಿ ಭಕ್ತಸ್ಥಲದಿ ಸಾರಿ
ನಿರುತ ಬಸವಣ್ಣ ನಡೆದು ತೋರಿ ವಿಶ್ವಕಲ್ಯಾಣ ದಾರಿ ॥ಪ॥

ಬಸವಣ್ಣ ವಿಶ್ವಬಂಧು ಬಾಗೆವಾಡಿಯೊಳಂದು
ನಮಗಾಗಿ ನೀ ಜನ್ಮತಾಳಿ ಬಂದೆ.

ಜಗದಣ್ಣ ಅಮೃತಸಿಂಧು ಹೊಳೆಯಾಗಿ ಹರಿಯಿತಂದು
ತವ ಹೃದಯ ವಿಶ್ವ ತುಂಬಿ ಬಂದು

"ಭಕ್ತಿಭಂಡಾರಿ" ಯಾಗಿ ಧರಣಿಗೆ ಬೆಳಕಾಗಿ
ನಿಜ ಮುಕ್ತಿ ಸೋಪಾನ ಹಾಕಲಾಗಿ

ಮೂಲೋಕ ತಾನೆಲ್ಲ ತನ್ನ ತಾನರಿದು ನೋಡೆ
ಕಾಣುವದು ಬಸವ ತತ್ತ್ವ ಜ್ಯೋತಿಯಾಗಿ ॥೨॥

ಅನುಭವ ಮಂಟಪದಿ ವರಗುರುವು ನೀನಾಗಿ
ಹರಶರಣ ಸಂತರಿಗೆ ಶ್ರೇಷ್ಠನಾದ

ಕಾಯಕದ ಮಹಿಮೆಯನು ಅನುಭಾವದ ಹಿರಿಮೆಯನು
ತೋರಿವಿಶ್ವದಲಿ ಶಾಂತಿ ದೂತನಾದೆ ॥೩॥

ಆತ್ಮಸ್ವಾತಂತ್ರ್ಯವನು ಸಕಲರೂ ಪಡೆಯಲೆಂದು
ಬಸವ ನೀಗೈಯ್ದೆ ಕಲ್ಯಾಣ ಕ್ರಾಂತಿ

ಅನುಭಾವ ಪಿಯೂಷ ಸರ್ವರೂ ಸವಿಯಲೆಂದು
ಹೃದಯದಿಂ ಹರಿಬಿಟ್ಟೆ ಜ್ಞಾನ ಜ್ಯೋತಿ ॥೪॥

ಪರಮಾತ್ಮ ಶ್ರೀಯಂ ಪಡೆವ ಹಕ್ಕು ಸರ್ವರಿಗುಂಟು
ನಿತ್ಯ ಬಸವಕಲ್ಯಾಣ ರಾಜ್ಯದಲ್ಲಿ

ಗಂಡು ಹೆಣ್ಣೆಂಬ "ಮನುವಿನಾ" ಭೇದ ತೊಲಗಲಾಗಿ
ಸಮ ಸ್ವಾತಂತ್ರ್ಯ ಪ್ರಾಪ್ತಿ ಸ್ತ್ರೀ ಪುರುಷರಲ್ಲಿ ॥೫॥

ಕನ್ನಡ ಪುಣ್ಯವನು ತುಂಬಿ 'ವಚನ ವಾಙ್ಮಯ' ದಲ್ಲಿ
ಹರಿಯಿಸಿದೆ ಸುಜ್ಞಾನ ರಸಗಂಗೆಯಾಗ

ಬಡವ ಬಲ್ಲಿದ ಭೇದವಳಿಸಿ "ನವ್ಯಮನ್ವಂತರ"ವ ರಚಿಸಲ್
ಜನಹೃದಯವರಳಿ ಅಸ್ಪೃಶ್ಯತೆ ಕಳೆಯಲಾಗಿ

ದಯವಿಲ್ಲದ ಧರ್ಮವದೇವುದೆಂದು ನೀ ಹೇಳಿ
ಧರ್ಮರಹಸ್ಯವನರುಹಿದೆ ಬಸವಭಾನು

'ವಿಶ್ವಾತ್ಮ ಜ್ಞಾನಿಯಾಗೆ' ವಿಶ್ವಹೃದಯಿ ನೀ ಕೃಪಾಳು
ವಿಶ್ವಕ್ಕೆ ಕಲ್ಪವೃಕ್ಷ–ಕಾಮಧೇನು ॥೭॥
ಬಸವಣ್ಣ ಗುರುವಾಗಿ ಚನ್ನಬಸವಣ್ಣ ಲಿಂಗವಾಗಿ
ಅಲ್ಲಮ ಪ್ರಭುವು ಜಂಗಮವಾಗಿ
ಕಲ್ಯಾಣ ಪ್ರಣತೆಯಲಿ ಅನುಭವವ ಜ್ಯೋತಿಯಾಗಿ
ಬೆಳಗುವರು ತ್ರಿಲೋಕ ಶರಣರಾಗಿ ॥೮॥
ನುಲಿಯ ಚಂದಯ್ಯ ಮಹದೇವಿಯಕ್ಕ ಸಿದ್ಧರಾಮ
ಮಡಿವಾಳ ಮಾಚಿದೇವ ಶರಣರೆಲ್ಲ
ಬಸವಣ್ಣನಿಂದೆ ಬದುಕಿತ್ತೀ ಜಗವೆಲ್ಲವೆಂದು
ಶಿವನ ಡಂಗುರವ ಸಾರಿಹರು ನಿಂದು ॥೯॥
ಜಗದಾದಿ ದೇಶಿಕೇಂದ್ರನಾಗಿ ಪೂರ್ವಾಚಾರ್ಯನಾಗಿ
ಷಟ್‌ಸ್ಥಲ ಜ್ಞಾನಿಯಾಗಿ ಮಂತ್ರಮೂರ್ತಿಯಾದೆ
ಬಸವ ತತ್ವ ಪರಿಮಳವು ತ್ರೈಜಗದಿ ಪಸರಿಸಲಾಗಿ
ಜಸವೆಡೆದು ಬೆಳಗಿ ಪರಮಪ್ರಣವರೂಪಿಯಾದೆ ॥೧೦॥
ಮನುಕುಲಕೆ ಸುಲಭದಲಿ ನಿಜಮುಕ್ತಿ ದೊರೆಯಲೆಂದು
ಬಸವಣ್ಣನಂತೆ ಭೋದೆಗೈಯ್ದವರಾರು!
ವಸುಧಾವಲಯದಲಿ ವಿಶ್ವೇತಿಹಾಸದಲಿ ನೋಡೆ
ಬೇರಿಲ್ಲ ಇನ್ನಾರು! ಬಸವಬಾರೊ! ॥೧೧॥
ಶಿವಲಿಂಗಲೀಲೆಯಲಿ ರಮಿಸಿರ್ದ ಪ್ರಮಥರೆಲ್ಲ
ಲಿಂಗತತ್ವವನೆ ಸಾರಿದರು ಧರೆಗೆ
ಕಾಲಚಕ್ರದಲಿ ನಿಂದಿರ್ದ ವಿಶ್ವಕೋಟಿಯನೆಲ್ಲ
ಕರೆದೊಯ್ವರಿವರು ಅಮೃತತ್ವದ ಬಳಿಗೆ ॥೧೨॥

—ಮೃತ್ಯುಂಜಯ ಹಿರೇಮಠ

> ತೃಪ್ತವಾಗದ ಬಯಕೆಯನ್ನಿರಿಸಿ ಕೊಂಡು,
> ಹಗಲಿರಳು ನರಳುವ ಜೀವಿಯೇ ಪಾಪಿ!
> ತೃಪ್ತನತದಿ ಬದುಕುವ, ಇದ್ದುದರಲ್ಲಿಯೇ
> ಸರಿಪಡಿಸಿ ಕೊಂಡಿರುವ ಜೀವಿಯೇ ಪುಣ್ಯವಂತ!
>
> ಶಿ. ಪಾ. ಮ.

ಆಜೀವ ಸದಸ್ಯರುಗಳು

ಶರಣ/ಶರಣೆಯರುಗಳಾದ:–

1878 ವಿಶ್ವನಾಥ ಅಪ್ಪಾರಾವ ಪಾಟೀಲ ಬೀದರ
1879 ಎಂ. ಎಸ್. ಪಾಟೀಲ ವಕೀಲರು ಬಿಜಾಪೂರ
1880 ಎಮ್. ಗಚ್ಚಿನ ಕಟ್ಟಿ ಬಿಜಾಪೂರ
1881 ಮೆ॥ ಬಾಲಾಜಿ ಎಂಟರ ಪ್ರಾಯಿಸಸ್ ಬಿಜಾಪೂರ
1882 ಚನ್ನಮಲ್ಲಪ್ಪ ಮಸೂದಿ ಬೀದರ
1883 ಸುಭಾಷೆ ಶಿವರಾಜ ಕೊಡಗೆ ಬೀದರ
1884 ವೀರಶೆಟ್ಟಿ ಕುಶನೂರು ಬೀದರ
1885 ಬಸಪ್ಪ ಸಂಗಪ್ಪಾ ಬುಡನೋರ ಬೀದರ
1886 ಶಿವಕುಮಾರ ಚನ್ನಬಸಪ್ಪ ತೆರನಳ್ಳಿ ಬೀದರ
1887 ವಿಜಯ ಲಕ್ಷ್ಮೀ ನವಬಾದೆ ಬೀದರ
1888 ಶಂಕರಾವ ಟೀಚರ ಮೋದಿ ಬೀದರ
1889 ಮಾರುದ್ರಪ್ಪ ರಾಚಪ್ಪಾ ಕೋಡ್ಲೆ ಬೀದರ
1890 ಶರಣಬಸಪ್ಪ ಎನ್. ಗಣಜಲ ಖೇಡ ಬೀದರ
1891 ಎಸ್. ಎಚ್. ಕೆಶೆಟ್ಟಿ ಬೀದರ
1892 ಮಹಾದೇವಯ್ಯ ಇಂದುಮತಿ ಬೀದರ
1893 ಶಿವಶರಣಪ್ಪಾ ವೀರಪ್ಪಾ ಬೂರ್ಜಿ ಬಸವಕಲ್ಯಾಣ
1894 ಅಮೃತರಾವ ಮಾಣಿಕರಾವ ಬಿರಾದಾರ ಕೋಸಂ
1895 ಸುಭಾಷ ಸೌದೆ ಜೌರಾದಕರ ಬೀದರ
1896 ವೀರಶಟ್ಟಿ ಚೆಟ್ಟಿ ಹೆಡ್‌ಮಾಸ್ತರ್ ಬೀದರ
1897 ಮಲ್ಲಿಕಾರ್ಜುನ ತಂದೆ ಬಂಡೆಪ್ಪಾ ಹಿಂಡಿ ಬೀದರ
1898 ಶಶಿಕಲಾ ಮಲ್ಲಿಕಾರ್ಜುನ ಯಾದೆ ಬೀದರ
1899 ಡಾ॥ ಶಂಕರ ಬೋರಾಳ ಬೀದರ
1900 ಬಂಡೆಪ್ಪಾ ತಂದೆ ನಾಗಪ್ಪಾ ಹುಮನಾಬಾದ
1901 ವಿಶ್ವನಾಥ ದೇವಪ್ಪಾ ಬೀದರ
1902 ಎಂ. ಎಂ. ಹುಂಡೇಕಾರ ವಕೀಲರು ಬಿಜಾಪೂರ
1903 ಬಿ. ಎಚ್. ಬಗಲಿ ಬಿಜಾಪೂರ

> ಕೋಗಿಲೆ, ಕಾಗೆ ಮನೆಯಲ್ಲಿ ಬೆಳೆದರೇನು ?
> ಕೋಗಿಲೆ ಕೋಗಿಲೆಯಾಗಿಯೇ ಕೂಗುತ್ತದೆ ತೋಟನಲ್ಲಿ
> ಯೋಗಿ ಜೋಗಿಯ ಮನೆಯಲ್ಲಿ ಬೆಳೆದರೇನು
> ಯೋಗಿ ಯೋಗಿಯಾಗಿಯೇ ಕಾಣುತ್ತಾನೆ ಸಮಾಜದಲ್ಲಿ
>
> ಶಿ. ಪಾ. ಮ.

ಭಾರತದಲ್ಲಿ ಸ್ತ್ರೀಯಾಗಿ

ಹುಟ್ಟುವುದು ಪಾಪವೇ?

—ಶಿವರಾಜ ಪಾಟೀಲ ಮಹಾಂತಪೂರ

ಯಾವ ದೇಶ ಹೆಣ್ಣು ಮಾತೆಯೆಂದು ಪೂಜಿಸುತ್ತಿದೆಯೋ, ಶಕ್ತಿಯೆಂದು ಕರೆಯುತ್ತಿದೆಯೋ, ಅಂಥ ದೇಶದಲ್ಲಿ ಹೆಣ್ಣಾಗಿ ಹುಟ್ಟುವುದೆ ಪಾಪವೆಂದು ಭಾವಿಸಿದವರು ಎಷ್ಟು ಜನರಿಲ್ಲ.? ಹೆಣ್ಣು ಹುಟ್ಟಿತೆಂದರೆ ಒಂದು ಹುಣ್ಣು ಹುಟ್ಟಿತೆಂದು ತಂದೆ ತಾಯಿಗಳು ಅಂದು ಕೊಳ್ಳುತ್ತಾರೆ. ಹೆಣ್ಣು ಹುಟ್ಟಿದಾಗಲೆ ಸ್ವಲ್ಪ ಬೇಸರ, ಅಸಮಾಧಾನ, ಅತೃಪ್ತಿ, ಚಿಹ್ನೆಗಳು ಮುಖದಲ್ಲಿ ಕಾಣುತ್ತೇವೆ. ಯಾಕೆ ಈ ತರಹದ ಭಾವನೆ ? ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಏನು ದೋಷವಿದೆಯೊ ಅದನ್ನು ನೋಡಬೇಕಾದುದು; ಅದಕ್ಕೆ ಪರಿಹಾರ ಕಂಡು ಹಿಡಿಯಬೇಕಾದುದು ನಮ್ಮ ಕರ್ತವ್ಯವಾಗಿದೆ. ಕೆಲವೊಮ್ಮೆ ಆ ದೋಷವೇನು ? ಎಂದು ಗೊತ್ತಿದ್ದೂ ; ತಿಳಿದೂ, ತಪ್ಪು ಮಾಡುತ್ತೇವೆ. ಹೀಗೆ ಮಾಡುವುದು ಸಾಮಾನ್ಯ ಜನರಲ್ಲ ತಿಳಿದವರು, ಎಜುಕೇಟೆಡ್ ಎನ್ನಿಸಿ ಕೊಂಡವರು.

ಸಮಕಾಲೀನ ಸಮಾಜದಲ್ಲಿ ಹೆಣ್ಣಿನ ಸ್ಥಿತಿಗತಿಗಳು ಏನಿವೆ ? ಅವಳು ಎಷ್ಟರ ಮಟ್ಟಿಗೆ ಸ್ವತಂತ್ರವಾಗಿದ್ದಾಳೆ. ಅವಳಿಗೆ ಸಿಗುತ್ತಿರುವ ಸ್ಥಾನಮಾನಗಳೇನು? ಇವುಗಳನ್ನು ಕುರಿತು ಆಲೋಚನೆ ಹರಿಸಿದಾಗ, ಹಿಂದಿನ ಕಾಲಕ್ಕೂ ಈಗಿನ ಕಾಲಕ್ಕೂ ಆದ ಬದಲಾವಣೆ ಗೊತ್ತಾಗುತ್ತದೆ.

ಮೊದಲು ಹೆಣ್ಣು ಎಂದರೆ, ಅವಳು ನಾಲ್ಕು ಗೋಡೆಯ ಮಧ್ಯದಲ್ಲಿಯೇ ಇರಬೇಕು ಅಡಿಗೆ ಮಾಡುವುದೆ ಅವಳ ಕೆಲಸ. ಗಂಡನ ಸೇವೆಯೇ ಅವಳ ಆದ್ಯ ಕರ್ತವ್ಯ. ಓದಬಾರದು, ಓದಿದರೂ ಹೊರಗೆ ಕೆಲಸ ಮಾಡಬಾರದು. ಮಕ್ಕಳನ್ನು ಹೆರುವುದೆ ಅವಳ ಧ್ಯೇಯ, ಗಂಡನ ಪಾಲಿಗೆ ಮನೋರಂಜನೆಯ ವಸ್ತುವಾಗಿಯೋ ಇಲ್ಲವೇ ಭೋಗದ ಗೊಂಬೆಯಾಗಿಯೋ ಇರಬೇಕು. ಪತಿಯೇ ಪರದೈವವೆಂದು ಭಾವಿಸಿ ಕೊಂಡು ಮೂಲೆಯಲ್ಲಿ ಬಿದ್ದಿರಬೇಕು, ಇದು ಒಂದು ಕಾಲದ ಧೋರಣೆ. ಆದರೆ ಇದನ್ನೇ ನಗರ ಜೀವನದ ಮಹಿಳೆಗೆ ಇಂದು ಹೇಳಿದರೆ, ಹೇಳಿದವರನ್ನೇ ಹುಚ್ಚರೆಂದು ತಿಳಿದು ನಗುತ್ತ ಹೋಗುತ್ತಾಳೆ. ಕಾರಣ ಇಂದು ಪೂರ್ತಿ ಬದಲಾಗಿದ್ದಾಳೆ. ಎಲ್ಲದರಲ್ಲಿಯೂ ಗಂಡಸಿಗೆ ಸಮಾನವಾಗಿ ಕೆಲಸ ಮಾಡುತ್ತಿದ್ದಾಳೆ ಅಂದು ಶಾಪವಾಮುದ್ದೆಲ್ಲ ಇಂದು ಉಶಾಪವಾಗಿದೆ. ಬಂಧನದಿಂದ ಬಿಡುಗಡೆ ಹೊಂದಿದ್ದಾಳೆ, ಆದರೂ ಹಳ್ಳಿಗಳಿಗೆ ಹೋದಾಗ ದುಃಖವೆನಿಸುತ್ತದೆ. ಪಟ್ಟಣದ ಮಹಿಳೆಯನ್ನು ಗಮನದಲ್ಲಿಟ್ಟು ಹೆಣ್ಣು ಮುಂದುವರೆದಿದ್ದಾಳೆಂದು ಸಂಪೂರ್ಣ ತೀರ್ಮಾನಕ್ಕೆ ಬರುವುದು ತಪ್ಪಾಗು

ತ್ತದೆ. ನಮ್ಮ ದೇಶ ಹಳ್ಳಿಗಳಿಂದಾದುದು. ಉದ್ದಕ್ಕೂ ಹಳ್ಳಿಗಳನ್ನು ಕುರಿತು ಅಧ್ಯಯನ ಮಾಡಬೇಕಾದುದು ಚಿಂತಿಸಬೇಕಾದುದು ಗಣ್ಯರ ಕೆಲಸವಾಗಿದೆ. 'ಹಳ್ಳಿಗಳು ಪಟ್ಟಣ ಸೇರಬೇಕು. ಇಲ್ಲವಾದರೆ ಪಟ್ಟಣದ ಗಾಳಿ ಹಳ್ಳಿಗಳಿಗೆ ಬೀಸಬೇಕು' ಅಂದರೆ ಹಳ್ಳಿಯ ಹೆಣ್ಣು ಮಕ್ಕಳು ಸುಧಾರಿಸಲು ಸಾಧ್ಯವಿದೆ.

ನಗರದ ಹೆಣ್ಣು ಮುಂದುವರೆದವಳು, ಅವಳ ಪರಿಸರ ಸುಧಾರಿಸಿದ್ದಾಗಿದೆ. ನಾಗರಿಕತೆಯ ಮಧ್ಯದಲ್ಲಿ ಹೆಚ್ಚು ಸಮಾನತೆಯ ಸ್ಥಾನಮಾನಗಳು ಸಿಗುತ್ತಿವೆ. ತನಗೆ ಅನುರೂಪನಾದ, ಆದರ್ಶನಾದ ಪತಿಯನ್ನು ಒಲಿಸುತ್ತಾಳೆ. ಆರ್ಥಿಕ ಸಮಾನತೆ, ಸಂಪಪನ್ನತೆ ಇದೆ. ಹೀಗಾಗಿ ಅವಳು ದುಡಿಯತ್ತಾಳೆ. ಹೆಚ್ಚು ಖರ್ಚು ಮಾಡುತ್ತಾಳೆ ಹೀಗಾಗಿ ಅವಳಿಗೆ ಸ್ವತಂತ್ರತೆ ಹೆಚ್ಚಿಗೆ ಸಾಧ್ಯವಿದೆ, ಆದರೆ ಹಳ್ಳಿಯ ಹೆಣ್ಣಿನ ಜೀವನ ನೋಡಿದಾಗ ಈ ಎಲ್ಲ ಸೌಲಭ್ಯಗಳಿಂದ ಅವಳು ವಂಚಿತಳಾಗಿರುತ್ತಾಳೆ. ಮತ್ತು ಗಂಡನ ಮೇಲೆ ಹೆಚ್ಚು ಅವಲಂಬಿತವಾಗಿದ್ದಾಳೆ. ಹೀಗಾಗಿ ಅವಳ ಜೀವನ ವರವಾಗದೆ ಶಾಪವಾಗಿದೆ ಎಂದು ತಿಳಿದು ಕೊಂಡಿದ್ದಾಳೆ. ಮತ್ತು ಹೆಣ್ಣಾಗಿ ಹುಟುವುದೆ ಪಾಪವೆಂದು ಅವಳ ಉದ್ಗಾರ !

ಹೆಣ್ಣಾಗಿ ಹುಟ್ಟುವುದೇ ಪಾಪವೆಂದು ಕೊಳ್ಳಲು ಅನೇಕ ಕಾರಣಗಳಿವೆ. ವರದಕ್ಷಿಣೆ ಇಂದು ಯುವತಿಯರನ್ನು ಕಾಡುತ್ತಿರುವ ಪಿಶಾಚಿಯಾಗಿದೆ. ಬಡ ತಂದೆತಾಯಿಗಳಿದ್ದರೆ ಅವರು ಎಲ್ಲಿಂದ ಕೊಡಬೇಕು ? ಮಗಳನ್ನು ಸಾಕುವುದೆ ಅವರಿಗೆ ಕಷ್ಟದ ಕೆಲಸ. ವಿದ್ಯಾಭ್ಯಾಸ ಕೊಡಿಸುವಷ್ಟು ಸಾಧ್ಯವಿಲ್ಲದ ಸ್ಥಿತಿಯಿದ್ದರೆ ಏನು ಮಾಡುವುದು? ಅಂಥ ಮಕ್ಕಳು ಏನೋ ಕಷ್ಟ ಪಟ್ಟು ಓದುತ್ತಾರೆ. ಓದಿ ಕೊಂಡು ಒಂದು ನೌಕರಿ ಹಿಡಿದು ಹಣ ಸಂಪಾದನೆಗೆ ತೊಡಗುತ್ತಾರೆ, ಅಷ್ಟರಲ್ಲೆ ಮದುವೆ ವಯಸ್ಸು ಮೀರಿರುತ್ತದೆ. ಆಗ ಮದುವೆಯಾಗದೆ ಸಮಾಜದ ಚುಚ್ಚು ಮಾತಿನಿಂದ ನೊಂದು ನರಳುತ್ತಾರೆ. ಹೀಗಾಗಿ ಜೀವನವೇ ಪಾಪದ ಫಲವೆಂದು ಭಾವಿಸಿ ಕೊಳ್ಳುತ್ತಾರೆ.

ಶ್ರೀಮಂತರ ಮಕ್ಕಳಾಗಿದ್ದರೆ ಅವರಿಗೆ ಬೇರೆ ತರಹದ ತೊಂದರೆಗಳು. ವರದಕ್ಷಿಣೆ ರೂಪದಲ್ಲಿ ಬಯಸಿದ್ದು ಕೊಡಬೇಕು. ಕೊಡದಿದ್ದರೆ ಅವಳಿಗೆ ಚಿತ್ರ ಹಿಂಸೆ, ಹೀಗಾಗಿ ಎಷ್ಟೋ ಜನ ಹೆಂಗಸರು, ಪತಿಯ–ಅತ್ತೆಮಾವನ ಪೀಡೆಯಿಂದ ಆತ್ಮ ಹತ್ಯೆ ಮಾಡಿಕೊಳ್ಳುತ್ತಿದ್ದಾರೆ. (ಉರುಲು ಹಾಕಿಕೊಳ್ಳುವುದು, ಸೀಮೆ ಎಣ್ಣೆ ಸುರಿದುಕೊಳ್ಳುವುದು, ವಿಷ ಸೇವನೆ, ಕಲ್ಲು ಕಟ್ಟಿ ಕೊಂಡು ಹಾರುವುದು ಇಂಥ ಸುದ್ದಿಗಳನ್ನು ದಿನಾ ಬೆಳಗಾದರೆ ಪತ್ರಿಕೆಯಲ್ಲಿ ಓದುತ್ತೇವೆ) ಹೀಗೆ ಹೆಣ್ಣಿನ ಬದುಕು ಒಂದು ರೀತಿಯ ಪಾಪದ ಜೀವನವೆಂಬ ಭಾವನೆ. ವರದಕ್ಷಿಣೆಯಂಥ ಅನಿಷ್ಟ ಪದ್ಧತಿಯನ್ನು ಓಡಿಸಬೇಕೆಂದು ಸಮಾಜ ಸುಧಾರಕರ ಭಾಷಣಗಳು ವೇದಿಕೆಯ ಮೇಲೆ ಇವೆ. ಆದರೆ ಅವು ಪ್ರತ್ಯಕ್ಷ ಜೀವನದಲ್ಲಿ ಬಹುದೂರವಾಗಿವೆ. ಹೀಗಾಗಿ ಹೆಂಗಸರು ದುಃಖಿಗಳಾಗಿ ಉಳಿಯುತ್ತಿದ್ದಾರೆ.

ಕುಡುಕನಾದ ಗಂಡ ಇದ್ದರೆ, ಇಲ್ಲ ಅವನು ಜೂಜುಕೋರನಾಗಿದ್ದರೆ ಮನೆಯನ್ನು ನಡೆಸುವುದು ಬಹುಕಷ್ಟ ಆಗ ಅವಳು ಬೇರೆಯುವರ ಮನೆಯ ಕಸ ಮುಸುರಿ ಮಾಡಬೇಕು

ಅಲ್ಲದೆ ಅವನು ಕುಡಿತದಿಂದ ಕಾಯಿಲೆ ಬಂದು ಸತ್ತನೆಂದರೆ ತೀರಿತು. ಮಕ್ಕಳನ್ನು ಕಟ್ಟಿಕೊಂಡು ಬೀದಿಗೆ ಬರಬೇಕು ಆಗ ಅನೇಕ ರಣಹದ್ದುಗಳ ದೃಷ್ಟಿ ಬೀಳುತ್ತದೆ ಹೊಟ್ಟೆ ಹಸಿದಿರುತ್ತದೆ. ಪಾಪವೆ ಮೂರ್ತಿವೆತ್ತ ಅವಳ ಜೀವನವಾಗುತ್ತದೆ. ಹೀಗಾಗಿ ಹೆಣ್ಣಾಗಿ ಹುಟ್ಟುವುದು ಪಾಪವೆಂದು ಅನಿಸಿದ್ದರೂ ಅನ್ನಿಸಬಹುದು. ಎಲ್ಲಿಯವರೆಗೆ ಹೆಂಗಸರೂ ಗಂಡಿಸಿನಂತೆ ದುಡಿದು ಆರ್ಥಿಕ ಸಬಲತೆ ಪಡೆಯಲಾರರೋ ಅಲ್ಲಿಯವರೆಗೆ ಹೆಣ್ಣಿನದು ಪಾಪದ ಜೀವನವೆಂಬ ಮಾತು ಹುಸಿಯಾಗಲಾರದು. –ಎಂಬ ಮಾತನ್ನು ಅನಿವಾರ್ಯವಾಗಿ ಒಪ್ಪಲೇಬೇಕಾಗುತ್ತದೆ.

ಹೆಣ್ಣಿನ ಬಗ್ಗೆ, ಹಿಂದೂ ಧರ್ಮದಲ್ಲಿ ಶೂದ್ರಳು ಎಂದರೆ, ಮುಸ್ಲಿಂರಂತೂ ಪ್ರಾರ್ಥನೆಗೆ ಪ್ರವೇಶ ಕೊಡುವುದಿಲ್ಲ. ಜೈನ ಧರ್ಮದಲ್ಲಿ ಹೆಣ್ಣಿಗೆ ಮುಕ್ತಿಯೇ ಇಲ್ಲ. ಮನು ವಿನಂತಹವರು. "ಸ್ತ್ರೀ ಸ್ವಾತಂತ್ರ್ಯಕ್ಕೆ ಅನರ್ಹಳು" ಎಂದು ಹೀಗೆ ಎಲ್ಲ ರೀತಿಯಿಂದಲೂ ತಳ್ಳಿಹಾಕಿ ಮೂಲೆಗೊತ್ತುತ್ತ ಬಂದರು. ಆದರೆ ಬಸವಣ್ಣನವರು ಸ್ತ್ರೀಗೆ ಸ್ವಾತಂತ್ರ್ಯ ಕೊಟ್ಟರು ಅಷ್ಟೆ ಅಲ್ಲ ಸ್ವತಂತ್ರವಾಗಿ ಬದುಕುವುದನ್ನು ಕಲಿಸಿ ಕೊಟ್ಟರು. ಆ ಮಾರ್ಗದಿಂದ ನಡೆದರೆ ಯಾವ ಹೆಣ್ಣೂ ನಾನು ಪಾಪಿ, ನನ್ನ ಜೀವನ ಪಾಪದ ಫಲವೆಂದು ಕೊಳ್ಳಲಾರಳು. ಹೆಣ್ಣೇ ಇರಲಿ, ಗಂಡೇ ಇರಲಿ. ಸಂಪಾದನೆಯಿಲ್ಲದೆ, ದುಡಿಮೆಯಿಲ್ಲದೆ, ಪರಾವಲಂಬಿ ಜೀವನ ನಡೆಸುವನೊ(ಳೊ) ಅಲ್ಲಿಯವರೆಗೆ ಜೀವನವು ಪಾಪದ ಫಲವೆಂದೆ, ಅಂದುಕೊಳ್ಳ ಬೇಕಾಗುತ್ತದೆ.

1 **ಜೋತಿಷಿ :** ನಿನ್ನ ಭವಿಷ್ಯದಲ್ಲಿ ಸಾಕಷ್ಟು ಸಂಪತ್ತು ವಶವಾಗುವುದಿದೆ.
ವ್ಯಕ್ತಿ : ಹಾಗಾದರೆ ನಿನ್ನ ಭವಿಷ್ಯದಲ್ಲಿ ?
ಜೋತಿಷಿ : ನನ್ನ ಭವಿಷ್ಯದಲ್ಲಿ ನಿನ್ನಿಂದ ಒಂದೂ ಕಾಲು ರೂಪಾಯಿ ದಕ್ಕಲಿದೆ.

2 **ರೋಗಿ :** ಈ ಡಾಕ್ಟ್ರು ಯಮನಿಗಿಂತ ಘೋರ.
ಆತ : ಯಾಕೆ ?
ರೋಗಿ ; ಯಮನಾದರೆ ಬರಿ ಪ್ರಾಣ ತೆಗೆಯುತ್ತಾನೆ. ಇವನು ಹಣಾ ಪ್ರಾಣ ಎರಡೂ ತೆಗೆಯುತ್ತಿದ್ದಾನೆ.

ಶಿ. ಫಾ. ಮ.

ಶ್ರೀ ಶಿವಯೋಗಿ ಸಿದ್ಧರಾಮೇಶ್ವರರ ವಚನ ಜ್ಯೋತಿ

ಶ್ರೀ ಸಿದ್ಧೇಶರ ಸ್ವಾಮಿಗಳು, ಜ್ಞಾನಯೋಗಾಶ್ರಮ, ವಿಜಾಪುರ.

[ಕಳೆದ ಮೂರು ದಶಕಗಳಿಂದ ವಿಜಾಪುರದಲ್ಲಿಯೇ ಪ್ರವಚನ ಕಾಯಕ ಕೈಗೊಂಡ ಶಿವಾನಂದ ಮಠದ ವೇದಾಂತ ಕೇಸರಿ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳ ಮಾನಸ ಪುತ್ರರಾದ ಶ್ರೀ ಸಿದ್ಧೇಶ್ವರ ಸ್ವಾಮಿಗಳವರು ವಿಜಾಪುರ ಜ್ಞಾನಯೋಗಾಶ್ರಮದ ಜ್ಞಾನನಿಧಿ ಎನಿಸಿದ್ದಾರೆ. ಎಂ.ಎ. ಪದವೀಧರರಾದ ಇವರು ಸಂಸ್ಕೃತ, ಕನ್ನಡ ಮತ್ತು ಇಂಗ್ಲೀಷ್ ತ್ರಿಭಾಷೆಗಳಲ್ಲೂ ನಿರರ್ಗಳವಾಗಿ ಅಧ್ಯಾತ್ಮ ವಿಚಾರಗಳನ್ನು ಬರೆಯಬಲ್ಲರು, ಪ್ರವಚನ ಮಾಡಬಲ್ಲರು ಸರಳ ಸಾಧಕ ಜೀವನದ ಸಾಕಾರ ಮೂರ್ತಿಗಳಾದ ಇವರನ್ನು ಜನರು "ಬುದ್ಧೀಜಿ" ಎಂದೇ ಸಂಬೋಧಿಸುತ್ತಾರೆ. ಅನೇಕ ಗ್ರಂಥಗಳನ್ನು ಅಧ್ಯಾತ್ಮ ಸಾಹಿತ್ಯಕ್ಕೆ ನೀಡಿದ್ದಾರೆ. ಶ್ರೀ ಸಿದ್ಧರಾಮೇಶ್ವರ ವಚನಗಳ ಒಳನೋಟ ಕೃತಿಯಿಂದ ಆಯ್ದ ಕೆಲವು ವಚನಗಳನ್ನು ಇಲ್ಲಿ ಕೊಡಲಾಗಿದೆ.]

ಜಗತ್ತು ಶಿವರೂಪ ೧

ತಿಳಿಯದ ಜನರು ಅವು ಶಿವನಲ್ಲ ಜಡಜೀವಿಗಳು ಎಂಬುವರು..
ಅದೆಂತಯ್ಯಾ,' ಪಂಚ ತತ್ತ್ವಂ ಮುಖೋದ್ಭೂತಂ' ಎಂಬಾಗಮವಾಕ್ಯ ಸಿಧ್ಧಿ ?
ಪಂಚತತ್ತ್ವಂಗಳೆಲ್ಲ ಶಿವನ ಪಂಚಮುಖದಿಂದಲಾದವು.
ಆಪಂಚತತ್ತ್ವದಿಂದ ಸಕಲ ಚರಾಚರ ಬ್ರಹ್ಮಾಂಡವಾಯಿತ್ತಯ್ಯಾ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಲೀಲೆಯಿಂದ ಕಲ್ಲಯ್ಯಾ.

ವಿವರಣ:

ಪರಮಾತ್ಮ ಏಕ ಹಾಗೂ ಸತ್ಯ. ಈ ಜಗತ್ತೂ ಕಾಲದೇಶಗಳೂ ತೋರಿಬರುವ ಮುಂಚೆ ಅನಂತವಾಗಿ ನೆಲೆಸಿದ್ದ ತತ್ತ್ವ. ಅವನು ಸಾಗರ, ಚರಾಚರ ಜಗತ್ತು ತೆರೆ. ತೆರೆಗಳೆಲ್ಲ ಸಾಗರಕ್ಕೆ ಅಭಿನ್ನ. ಹಾಗೇ, ಜಗತ್ತು ಪರಮಾತ್ಮನಿಗೆ ಅಭಿನ್ನ. ಅವನು ಅವ್ಯಕ್ತ; ಇದು ವ್ಯಕ್ತ ಅಂದರೆ ಅವನದೇ ವ್ಯಕ್ತ ರೂಪ. ಆದ್ದರಿಂದಲೇ ಜ್ಞಾನಿಗಳು 'ಸರ್ವ ಶಿವಮಯಂ' ಎಂದು ನೋಡುತ್ತಾರೆ. ಅಜ್ಞಾನಿಗಳು ಮಾತ್ರ ಇದೆಲ್ಲ ಶಿವನಲ್ಲ, ಜಡವಾಗಿದೆ, ಎಂದು ಭಾವಿಸುತ್ತಾರೆ. ಸಿದ್ಧರಾಮಣ್ಣನು ಈ ಸಂಗತಿಯನ್ನು ಈ ವಚನದಲ್ಲಿ ರೇಖಿಸಿದ್ದಾನೆ.

ತಿಳಿಯದ ಜನರು........ಎಂಬುವರು:—ಸತ್ಯದ ನಿಲವನರಿಯದವರು ತಿಳಿಯದ ಜನರು. ಬಸವಣ್ಣನವರು ಇವರನ್ನು ಬಹು ಸುಂದರವಾಗಿ ವರ್ಣಿಸಿದ್ದಾರೆ—

"ಆನೇಯನೇರಿ ಕೊಂಡು ಹೋದಿರೆ ನೀವು. ಕುದುರೆಯನೇರಿಕೊಂಡು ಹೋದಿರೆ ನೀವು. ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೆ ಅಣ್ಣಾ !ಸತ್ಯದ ನಿಲವನರಿಯದೆ ಹೋದಿರಲ್ಲಾ ! ಸದ್ಗುಣವೆಂಬ ಫಲವ ಬಿತ್ತಿ ಬೆಳೆಯದೇ ಹೋದಿರಲ್ಲ. ಅಹಂಕಾರವೆಂಬ ಅಸದ ಮದಗಜವೇರಿ ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ. ನಮ್ಮ ಕೂಡಲ ಸಂಗಮದೇವರನರಿಯದೆ ನರಕಕ್ಕೆ ಭಾಜನವಾದಿರಲ್ಲಾ."

ಅಜ್ಞರನ್ನು ಮಹಾಭಾರತ ಕೂಡ ಹೀಗೆ ಬಣ್ಣಿಸಿದೆ— "ಯಸ್ಯ ನಾಸ್ತಿ ವಿವೇಕಸ್ತು ಕೇವಲಂ ಯೋ ಬಹುಶ್ರುತಃ! ನ ಸ ಜಾನಾತಿಶಾಸ್ತ್ರಾರ್ಥಾನ್ ದರ್ವೀ ಪಾತರಸಾನಿವ ॥" (ಭಾ.೨—೧೯೪೫)).

ಯಾವನಿಗೆ ನಿತ್ಯಾನಿತ್ಯ ವಸ್ತು ವಿವೇಕವಿಲ್ಲವೊ, ಯಾವನು ಬರೀ ಶಾಬ್ದ ಪಂಡಿತನೊ ಅವನು ಅಜ್ಞ. ಹುಟ್ಟು ಪಾಕದ ರುಚಿಯನರಿಯದಂತೆ ಅವನು ಶಾಸ್ತ್ರಾರ್ಥವನ್ನು ಅರಿಯ. ಅಂಥ ಅಜ್ಞರು 'ಜಡಜೀವಿ' ಗಳು ಎಂದಿದ್ದಾನೆ ಸಿದ್ಧರಾಮ. ಅವರು ಜಡಪ್ರೇಮಿಗಳು; ಜಡವೇ ಸತ್ಯ, ಜಡಭಿನ್ನವಾದ ಅಜಡ ಆತ್ಮವಿಲ್ಲವೇ ಇಲ್ಲ, ಎಂದು ಭಾವಿಸಿದ್ದಾರೆ. ಅವರ ಅಭಿಪ್ರಾಯದಲ್ಲಿ 'ಅವು ಶಿವನಲ್ಲ' ! ಅವು ಎಂದರೆ ವಿವಿಧತೆಯಿಂದ ಕೂಡಿದ ಜಗತ್ತು, ಭೂತಸಂಘಾತವಾದ ಅಸಂಖ್ಯ ದೇಹಗಳು,ಹಾಗೂ ಆ ದೇಹಾಭಿನಮಾವುಳ್ಳ ಜೀವಿಗಳು. ಅವು ಸತ್ಯವಸ್ತುವಾದ ಶಿವನಲ್ಲ, ಶಿವರೂಪಗಳಲ್ಲ, ಶಿವ ನಿರ್ಮಿತವೂ ಅಲ್ಲ; ಅವು ಭೌತರೂಪ. ಜಡಜೀವಿ'ಗಳೆಂದು ಸಿದ್ಧರಾಮ ಹೆಸರಿಸಿದುದು ಅರ್ಥವತ್ತಾಗಿದೆ.

ಅದೆಂತಯ್ಯಾ, ...ಎಂಬಾಗಮವಾಕ್ಯ ಸಿದ್ಧಿ?: —ಜಗತ್ತು ಹಾಗೂ ಜೀವಿಗಳು ಜಡವಾಗಿವೆ ಎಂಬ ಮಾತನ್ನು ಸಿದ್ಧರಾಮನು ಇಲ್ಲಿ ಆಗಮವಾಕ್ಯ ಪ್ರಮಾಣವನ್ನಿತ್ತು ನಿರಾಸಗೊಳಿಸಿದ್ದಾನೆ. ಆಗಮಗಳು ಜ್ಞಾನ- ಖಣಿಗಳು; ಸತ್ಯವನ್ನರಿತವರ ನುಡಿ ಮುತ್ತುಗಳು. ಅಜ್ಞಾನಿಗಳು ಸಾವಿರ ಮಾತು ಬಲ್ಲವರ ಒಂದು ಮಾತಿನೆದುರು ನಿರಾಸ್ತ, ನಿರರ್ಥಕ! ಏಕೆ ? ಅಜ್ಞಾನಿಗಳು ಮತಿ -ದೃಷ್ಟಿಹೀನರು; ಕುರುಡರು. ಅವರಿಗೆ ಬೆಳಕಿಲ್ಲ ಕತ್ತಲೆಯಾಗಿಯೇ ಕಾಣುತ್ತದೆ. ಜ್ಞಾನಿಗಳು ಮತಿ-ಲೋಚನವಂತರು. ಅವರಿಗೆ ಬೆಳಕಿನ ಮನೋಹರ ದರ್ಶನ !ಆದ್ದರಿಂದ ಅವರು ಕಂಡುದು, ಹೇಳಿದುದು. ನೂರಕ್ಕೆ ನೂರು ಸರಿ. ಅವರು ಹೇಳುತ್ತಾರೆ—

"ಪಂಚತತ್ತ್ವಂ ಮುಖೋದ್ಭೂತಂ":— ಪಂಚತತ್ತ್ವ ಪುಂಜವು ಶಿವನ ಪಂಚಮುಖದಿಂದ ಉದ್ಭೂತವಾಗಿದೆ. ಸತ್ ಚಿತ್ ಆನಂದ ನಿತ್ಯ ಪೂರ್ಣ ಈ ಪಂಚಸ್ವರೂಪದ ಲಕ್ಷಣಗಳೇ ಪಂಚ ಮುಖಗಳು. ಪ್ರಾಗಾದಿ ಅಭಾವಗಳಿಲ್ಲದ ಇರುವಿಕೆಯು

ಸತ್. ವಿಶ್ವದ ಭಾವ ಅಭಾವಗಳನ್ನು ಪ್ರಕಾಶಿಸುವ ನಿಶ್ಚಲ ಜ್ಞಾನ ಬೆಳಕು ಚಿತ್. ಸುಖ-ದುಃಖ ಎಂಬ ದ್ವಂದ್ವಗಳಿಲ್ಲದ ದಿವ್ಯ ಹಾಗೂ ಘನ ಶಾಂತಿಯು ಆನಂದ. ಕಾಲದಿಂದ ಬಾಧೆಗೊಳ್ಳದೆ ಕಾಲಾತೀತವಾಗಿರುವಿಕೆಯು ನಿತ್ಯ. ದೇಶ ಕಾಲ ವಸ್ತು ಪರಿಚ್ಛೇದಶೂನ್ಯವಾಗಿರುವಿಕೆಯು ಪೂರ್ಣ. ಈ ಪಂಚಲಕ್ಷಣವುಳ್ಳ ಸತ್ಯವಸ್ತುವಿಗೆ ಶಿವ ಎಂಬ ವಿಮಲ ನಾಮ. ಅವನಿಗೆ ಅವು ಸುಮುಖಗಳು. ಆ ಮುಖಗಳಿಂದ ಪಂಚಭೂತಗಳುದಯ. ಅಂದರೆ, ಸತ್ ಮುಖದಿಂದ ಪೃಥ್ವಿಭೂತೋದಯ. ಚಿತ್ ಮುಖದಿಂದ ಜಲಭೂತೋದಯ. ಆನಂದ ಮುಖದಿಂದ ಅಗ್ನಿಭೂತೋದಯ. ನಿತ್ಯ ಮುಖದಿಂದ ವಾಯುಭೂತೋದಯ. ಪೂರ್ಣ ಮುಖದಿಂದ ಆಕಾಶಭೂತೋದಯ. ಸತ್ತು ಅವ್ಯಕ್ತ; ಪೃಥ್ವಿಯು ಅದರ ವ್ಯಕ್ತ, ರೂಪ ಚಿತ್ತು ಅವ್ಯಕ್ತ, ಜಲವು ಅದರ ವ್ಯಕ್ತ ರೂಪ. ಆನಂದವು ಅವ್ಯಕ್ತ. ಅಗ್ನಿಯು ಅದರ ವ್ಯಕ್ತರೂಪ ನಿತ್ಯವು ಅವ್ಯಕ್ತ. ವಾಯುವು ಅದರ ವ್ಯಕ್ತರೂಪ. ಪೂರ್ಣವು ಅವ್ಯಕ್ತ; ಆಕಾಶವು ಅದರ ವ್ಯಕ್ತ ರೂಪ. ಪೃಥ್ವಿಯಲ್ಲಿ ಸದ್ರೂಪ ದೇವನು ಸನ್ನಿಹಿತ. ಜಲದಲ್ಲಿ ಚಿತ್-ರೂಪ ದೇವನು ಸನ್ನಿಹಿತ. ಅಗ್ನಿಯಲ್ಲಿ ಆನಂದರೂಪ ದೇವನು ಸನ್ನಿಹಿತ. ವಾಯುವಿನಲ್ಲಿ ನಿತ್ಯರೂಪ ದೇವನು ಸನ್ನಿಹಿತ. ಆಕಾಶದಲ್ಲಿ ಪೂರ್ಣರೂಪ ದೇವನು ಸನ್ನಿಹಿತ. ಆ ಐದು ಸನ್ನಿಹಿತ ದೇವರೂಪಗಳಿಗೆ ಕ್ರಮವಾಗಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗವೆಂದು ಪಾರಿಭಾಷಿಕ ನಾಮ.

ಈರೀತಿಯಾಗಿ, ಶಿವನ ಪಂಚಮುಖೋದ್ಭೂತವಾದುದರಿಂದ ಪಂಚಭೂತಗಳೂ ಶಿವನೇ; ಆ ಭೂತಸ್ಥ ಪಂಚಲಿಂಗಗಳೂ ಶಿವನೇ.

ಆ ಪಂಚತತ್ತ್ವದಿಂದ ....ಬ್ರಹ್ಮಾಂಡವ ಯಿತ್ತಯ್ಯಾ:—ಆ ಪಂಚಭೂತಗಳಿಂದಲೇ ಅಸಂಖ್ಯ ಬ್ರಹ್ಮಾಂಡಗಳೂ, ಚರಾಚರ ವಸ್ತುಗಳೂ, ದೇಹ ಹಾಗೂ ಜೀವಿಗಳೂ ತೋರಿ ಬಂದವು. ಆ ಭೂತಗಳೇ ಶಿವರೂಪವೆನ್ನುವದು ಸಂಸಿದ್ಧವಾದ ಬಳಿಕ ಅವುಗಳಿಂದ ಬ್ರಹ್ಮಾಂಡಗಳು, ದೇಹಗಳು, ದೇಹಾಭಿಮಾನಿ ಜೀವಿಗಳೂ ಶಿವನಿಂದ ಭಿನ್ನವಾಗಿರಲು ಹೇಗೆ ತಾನೆ ಸಾಧ್ಯ ?

"ಘನ ಗಂಭೀರ ಮಹಾವಾರುಧಿಯಲ್ಲಿ ನೊರೆ ತೆರೆ ಬುದ್ಬುದ ಫೇನ ತರಂಗಗಳು ತೋರಿತ್ತಲ್ಲಾ ಎಂದಡೆ ಅವು ಬೇರಾಗಬಲ್ಲವೆ? ಪರಶಿವನೆಂಬ ಅಂಬುಧಿಯಲ್ಲಿ ಸಕಲ ಬ್ರಹ್ಮಾಂಡಗಳಾದವಲ್ಲದೆ ಬೇರಾಗಬಲ್ಲವೆ ? ಇದ ಬೇರೆಂಬ ಅರೆಮರುಳರ ನಾನೇನೆಂಬೆ? ವಿಶ್ವವ ತಿಳಿದು ನೋಡಲು ಚಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗವು ತಾನೆ."

ಇದು ಚಂದಿಮರಸರ ಮಾತು. ಸಿದ್ಧರಾಮನ ಮಾತಿಗೆ ಪುಷ್ಟಿಯನ್ನೀಯುತ್ತಿದೆ.

ಕಪಿಲಸಿದ್ಧ ಮಲ್ಲಿಕಾರ್ಜುನನ ಲೀಲೆಯಿಂದ, ಕಲ್ಲಯ್ಯಾ:-ಏನೆಂದೂ ವರ್ಣಿಸಲು ಬಾರದ ಶಿವನು ಅದೇಕೆ ಪಂಚಭೂತಗಳ ಹಾಗೂ ಪಂಚಭೂತಾತ್ಮಕ ಮಹಾವಿಶ್ವದ ರೂಪು

ತಾಳಿದ ? ಇದು ಹಾವಿನಾಳ ಕಲ್ಲಯ್ಯನೆಂಬ ಶರಣ ತನ್ನ ಗುರು ಸ್ವರೂಪನಾದ ಸಿದ್ಧರಾಮನಿಗೆ ಕೇಳಿದ ತಾತ್ತ್ವಿಕ ಪ್ರಶ್ನೆ. ಅದಕ್ಕೆ ಸಿದ್ಧರಾಮನಿತ್ತ ಉತ್ತರ ಈ ಕೊನೆಯ ಸಾಲಿನಲ್ಲಿದೆ. "ಕಲ್ಲಯ್ಯಾ, ಶಿವನು ವಿಶ್ವರೂಪ ತಳೆವಲ್ಲಿ ಏನೋ ಒಂದು ವಿಶಿಷ್ಟವಾದ ಉದ್ದೇಶವಿದೆ ಎಂದು ಭಾವಿಸಬೇಡ. ಶಿವನು ಪೂರ್ಣಕಾಮ ; ಅವನಲ್ಲಿ ಕೊರತೆಗಳಿಲ್ಲ; ಪೂರ್ಣಘನ; ಆನಂದಸಾಗರ. ವಿಶ್ವದ ತೋರಿಕೆ ಅವನ ಆನಂದ ಕ್ರೀಡೆ; ಲೀಲಾ ವಿಲಾಸ, ಅಷ್ಟೇ. "

"ಕಲ್ಲಯ್ಯಾ, ನೀನು ತಿಳಿವಿನ ಸಾಧಕ. ನಾನು ಹೇಳಿದ ಸತ್ಯ-ದರ್ಶಕ ಮಾತುಗಳನ್ನು ಮನಸ್ಸಿನಲ್ಲಿ ಸ್ಥಿರಗೊಳಿಸಿಕೊ. ಈ ಕಾಣುವ ದೇಹಗಳಲ್ಲಿ, ಈ ತೋರ ವಿಶ್ವದಲ್ಲಿ ಈ ಮಹಾಭೂತಪಂಚಕದಲ್ಲಿ ಶಿವನ ಅಸ್ತಿತ್ವವನ್ನು ಅರಿವಿನ ಕಣ್ಣಿನಿಂದ ಕಾಣು. ಹಾಗೆ ಮಾಡಿದೆಯಾದರೆ, ವಿಷಯಗಳು ನಿನ್ನನ್ನು ಮೋಹಗೊಳಿಸವು. ಸಕಲ ಜೀವರನ್ನು ಆವರಿಸಿದ ಮಾಯೆ ನಿನ್ನನ್ನು ಸ್ಪರ್ಶಿಸದು ಕೂಡ.

ಸಂಯೋಗದಿಂದ ಸೃಷ್ಟಿ ಹಾಗೂ ನಾಶ

೨

ಸಂಯೋಗವೆಂಬುದು ಪರಮೇಶ್ವರನ ಲೀಲೆಯದು.
ಅಲ್ಲ ಅಲ್ಲವೆಂದಡೆ, ಆ ಸಂಯೋಗದಿಂದವೇ ಜಗದುತ್ಪನ್ನ.
ಉತ್ಪತ್ತಿ ನಾಶಕ್ಕೆಯೂ ಸಂಯೋಗವೇ ಬೇಕು.
ಆಸಂಯೋಗ ಸರಿಯೆ ಪ್ರಾರಬ್ಧವಳಿಯಿತ್ತೆಂಬರು ನೋಡಾ.
ಕಪಿಲಸಿದ್ಧ ಮಲ್ಲಿಕಾರ್ಜುನ.

ವಿವರಣ :

ಜಗತ್ತು ಸಂಯೋಗದಿಂದ ಉದಿಸುತ್ತದೆ; ಸಂಯೋಗದಿಂದ ಅದು ನಾಶವಾಗುತ್ತದೆ. ಉತ್ಪತ್ತಿ ಮತ್ತೂ ನಾಶಕ್ಕೆ ಕಾರಣವಾದ ಆ ಸಂಯೋಗವು ಪರಮೇಶ್ವರನ ಲೀಲೆಯಾಗಿದೆ. ಈ ಸಂಗತಿಯನ್ನು ಸಿದ್ಧರಾಮೇಶ್ವರನು ಪ್ರಸ್ತುತ ವಚನದಲ್ಲಿ ನಿರೂಪಿಸಿದ್ದಾನೆ.

ಸಂಯೋಗವೆಂಬುದು ಪರಮೇಶ್ವರನ ಲೀಲೆಯದು;—ಈಶ್ವರ ಎಂದರೆ ಪ್ರಭು. ಪರಮ+ ಈಶ್ವರ ಎಂದರೆ ಪ್ರಭುಗಳ ಪ್ರಭು. ಮಾಂಧಾತ, ರಾಮ, ಧರ್ಮ, ಮೊದಲಾದವರು ಈ ಮರ್ತ್ಯಲೋಕವನ್ನಾಳಿದ ಪ್ರಭುಗಳು; ಇಂದ್ರ ಬೃಹಸ್ಪತಿ ವಿಷ್ಣ್ವಾದಿ ದೇವತೆಗಳು ಊರ್ಧ್ವಲೋಕಗಳಲ್ಲಿ ಪ್ರಭುಗಳು. ಕಾಲ ಕಾಲಕ್ಕೆ ಆಳಿ ಹೋದ ಪ್ರಭುಗಳು ಅಸಂಖ್ಯ. ಅವರೆಲ್ಲರ ಅಧಿಕಾರದ ವ್ಯಾಪ್ತಿ ಹಾಗೂ ಕಾಲಾವಧಿ

ಅತ್ಯಲ್ಪ. ಅವರು ಅಶಾಶ್ವತರು. ಅವರೆಲ್ಲರ ಮೇಲೆ ಚಿರಂತನಾಧಿಪತ್ಯ ನಡೆಸುವವ ಪರಮೇಶ್ವರ ಅವನು ಸರ್ವಶಕ್ತ, ಸರ್ವಕರ್ತ, ಸರ್ವನಿಯಂತಾ, ನಿರಂಕುಶ ವಿಶ್ವ-ಪ್ರಭು. ಬರೀ ಜೀವರಷ್ಟೇ ಅಲ್ಲ, ಜಡ ತತ್ತ್ವಗಳೂ ಅವನ ನಿಯತಿಗೆ ಒಳಪಟ್ಟುಸಾಗಿವೆ.

"ಭೀಷಾಸ್ಮಾದ್ವಾತಃ ಪವತೇ ಭೀಷೋದೇತಿ ಸೂರ್ಯಃ ।
ಭೀಷಾಸ್ಮಾದಗ್ನಿಶ್ಚೇಂದ್ರಶ್ಚ ಮೃತ್ಯುರ್ಧಾವತಿ ಪಂಚಮ ಇತಿ" ॥

(ತೈ. ೨-೮)

ಆ ಈಶನಿಗೆ ಭಯಪಟ್ಟು ಗಾಳಿ ಬೀಸುತ್ತದೆ. ಸೂರ್ಯ ಉದಿಸುತ್ತಾನೆ, ಅಗ್ನಿ ಸುಡುತ್ತದೆ. ಇಂದ್ರ ಮಳೆಗರೆಯುತ್ತಾನೆ, ಹಾಗೂ ಐದನೆಯವನಾದ ಮೃತ್ಯುದೇವನು ಮರಣ ತರುತ್ತಾನೆ. ಈ ತೈತ್ತಿರಿಯೋಪನಿಷತ್ತು ಈಶನ ಅಸೀಮ ಪ್ರಭುತ್ವವನ್ನು ಸಾರುತ್ತಿದೆ.

ಈ ಪರಮೇಶನು ನಿರವಯವ. ಅವನಿಗೆ ಕಣ್ಣಿಲ್ಲ, ನೋಡುತ್ತಾನೆ; ಕಿವಿಯಿಲ್ಲ, ಕೇಳುತ್ತಾನೆ ; ಕೈಯಿಲ್ಲ, ಮಾಡುತ್ತಾನೆ : ಸಂಕಲ್ಪ ಸಾಧನವಾದ ಮನಸ್ಸಿಲ್ಲಿ, ವಿರಚಿಸುತ್ತಾನೆ. ಇದು ಅವನ ಲೀಲೆ, ಅವನ ಅಚಿಂತ್ಯ ಶಕ್ತಿ. ಈ ಲೀಲೆ ವ್ಯಕ್ತವಾಗದಿದ್ದರೆ ಅವನು ಸ್ವಯಂಭೂ. ಈ ಲೀಲಾ-ಶಕ್ತಿ ವ್ಯಕ್ತವಾದರೆ ಅವನು ಉಮಾಪತಿ, ವಿಶ್ವ ರಚಯಿತ್ತಾ ವಿಶ್ವ-ಪ್ರಭು. ಅವನೊಳಗಿರುವ ಈ ಲೀಲೆಯು 'ಸಂಯೋಗ' ರೂಪವಾಗಿದೆಯೆಂದು ಸಿದ್ದರಾಮೇಶ್ವರನು ಹೇಳಿದ್ದಾನೆ. ಏಕೆ ? ಏಕೆಂದರೆ,

ಆ ಸಂಯೋಗದಿಂದವೇ ಜಗದುತ್ಪನ್ನ........ ಸಂಯೋಗವೇ ಬೇಕು: —ಯಾವ ವಸು ಉತ್ಪನ್ನವಾಗಬೇಕಾದರೂ, ವಿನಾಶವಾಗಬೇಕಾದರೂ ಸಂಯೋಗವೇ ಬೇಕು. ಉದಾಹರಣೆಗಾಗಿ, ಪ್ರಾಣವಾಯುವಿನಲ್ಲಿ ನಿರಿಲ್ಲ ; ಜಲಜನಕವಾಯುವಿನಲ್ಲೂ ನೀರಿಲ್ಲ. ಆದರೆ ಎರಡರ ಸಂಯೋಗವಾದೊಡನೆಯೇ ಪರಿಶುಭ್ರವಾದ ನೀರು ಉತ್ಪನ್ನವಾಗುತ್ತದೆ. ಅದೇ ನೀರಿಗೆ ಭಾರೀ ಉಷ್ಣತೆಯು ಸಂಯೋಗ ಉಂಟುಮಾಡಿದರೆ ನೀರು ವಿನಾಶವಾಗುತ್ತದೆ. ಆ ಎರಡು ವಾಯುಗಳಲ್ಲಿ ಪರ್ಯವಸಾನಗೊಳ್ಳುತ್ತದೆ. ಇನ್ನೊಂದು ಸಾಮಾಜಿಕ ಉದಾಹರಣೆಯನ್ನು ತೆಗೆದುಕೊಳ್ಳಿ. ಎಂಟು ನೂರು ವರ್ಷಗಳ ಹಿಂದೆ ಲಕ್ಷಾಂತರ ಪ್ರಜೆಗಳ ಬೀಡು ಕಲ್ಯಾಣ ಪಟ್ಟಣ. ಮಹಾನುಭಾವ ಬಸವಣ್ಣ ಆ ನಗರಕ್ಕೆ ಬಂದ. ಅವನ 'ಸಂಯೋಗ' ಉಂಟಾದ ಮೇಲೆ ಆ ನಗರ ಶರಣರ ಸ್ವರ್ಗವಾಯ್ತು. ಸಾವಿರ ಸಾವಿರ ಜಂಗಮರು ಅಲ್ಲಿ ಸುಳಿದರು. ಅನುಭವ ಗೋಷ್ಠಿಗಳು ನಡೆದವು. ತಾತ್ತ್ವಿಕ ಚಿಂತನ-ಮಂಥನದ ಮಧ್ಯದಿಂದ ಜ್ಞಾನ ಹಣತೆ ಅಲ್ಲಿ ಹತ್ತಿ ಉರಿಯಿತು. ಅದರ ಪ್ರಕಾಶ ದೇಶದ ಮೂಲೇ ಮೂಲೆಗೂ ತಲುಪಿತು. ಮುಂದೆ ಬಸವಣ್ಣನ ಸಂಯೋಗ ತಪ್ಪಿತು ; ದ್ವೇಷಿಗಳ, ಸ್ವಾರ್ಥಿಗಳ, ವಿಷಯಾರಾಮರ ಸಂಯೋಗ ಉಂಟಾಯಿತು. ಆಗ ಅವಿಮುಕ್ತ ಕ್ಷೇತ್ರವೆನಿಸಿದ್ದ ಕಲ್ಯಾಣ ನಾಶವಾಗಿ ಕಟುಕರ ಕೇರಿ ಎನಿಸಿತು. ವಿಶ್ವಾಮಿತ್ರನಿಗೆ ಮೇನಕೆಯ ಸಂಯೋಗವಾದಾಗ ಮಹಾ ತಪಶ್ಶಕ್ತಿ ನಶಿಸಿತು; ವಾಲ್ಮೀಕಿಗೆ ನಾರದನ ಸಂಯೋಗವಾದಾಗ ವಿಶ್ವ ವಿಖ್ಯಾತ ಋಷಿತ್ವ ಸಿದ್ಧಿಸಿತು.

ಇಂತು ಸಂಯೋಗವು ಸರ್ವ ಕ್ರಿಯಾಕಾರಕ: ಮಹತೀ ಶಕ್ತಿ !

ಈಶನು ಈ ಶಕ್ತಿಯ ಒಡೆಯ ; ಈ ಸಂಯೋಗ ಶಕ್ತಿಯ ಮೂಲಕವೇ ಆತ ದೇಹ ನಿರ್ಮಿಸುತ್ತಾನೆ; ಅದರಲ್ಲಿ ಇಂದ್ರಿಯ, ಪ್ರಾಣ, ಮನಸ್ಸುಗಳನ್ನು ಅಳವಡಿಸುತ್ತಾನೆ : ಕೊನೆಗೆ ಅದಕ್ಕೆ ತನ್ನ ಚೈತನ್ಯ ಪ್ರಕಾಶವನ್ನು ಸ್ಪರ್ಶಿಸುತ್ತಾನೆ. ತತ್‌ಕ್ಷಣ ಒಂದು ಜೀವ ಉದಿಸುತ್ತದೆ. ಕಾಲಾಂತರದಲ್ಲಿ ಅದೇ ಈಶನು ಆ ದೆಹಕ್ಕೆ 'ಕಾಲ'ದ ಸಂಯೋಗ ಮಾಡುತ್ತಾನೆ. ಆಗ ಜೀವ-ತಾಣವಾದ ಆ ದೇಹ ಅಳಿಯುತ್ತದೆ. ಜೀವನ ದೈಹಿಕ ಬದುಕು ತಾತ್ಪೂರ್ತಿಕವಾಗಿ ಕೊನೆಗೊಳ್ಳುತ್ತದೆ. ಇದೇ ರೀತಿ ವಿಶ್ವದ ಸೃಷ್ಟಿ ಹಾಗೂ ವಿನಾಶ. ಎಲ್ಲದಕೂ ದೇವರ ಸಂಯೋಗ-ಲೀಲೆಯೇ ಕಾರಣ. ಶಿವನ ಆನಂದ-ವಿನೋದವೀ ವಿಶ್ವ ವಿಸ್ತಾರ! ಸ್ವತಂತ್ರ ಸಿದ್ದಲಿಂಗೇಶ್ವರರು ಚಿತ್ರಿಸಿದ ವಿನೋದ-ವಿಲಾಸ ಹೀಗಿದೆ :—

> "ಮಹಾಕರ್ತನು ತನ್ನ ಶಕ್ತಿಯ ವಿನೋದಕ್ಕೆ ಜಗವ ನಿರ್ಮಿಸಿದ. ಅನಂತ ಲೋಕಂಗಳನ್ನು, ಚಂದ್ರ ಸೂರ್ಯ ನಕ್ಷತ್ರ ಸಿಡಿಲು ಮಿಂಚುಗಳನ್ನು, ಕಾಲ ಕರ್ಮ ಪ್ರಳಯಂಗಳನ್ನು, ಹೆಣ್ಣು ಗಂಡು ಜಾತಿ ವಿಜಾತಿಗಳಾದ ನರ ಸುರ ತಿರ್ಯಗ್ಜಾತಿ ಸ್ಥಲ ಭೋಗ ಆಯುಷ್ಯ ನಿದ್ರೆ ಮೊದಲಾದ ಸಮಸ್ತ ಪ್ರಪಂಚಗಳನ್ನು, ಎಂಬತ್ನಾಲ್ಕು ಲಕ್ಷ ಜೀವರಾಶಿಗಳನ್ನು ಹುಟ್ಟಿಸಿದ ತನ್ನ ವಿನೋದಕ್ಕೆ. ಯಂತ್ರವಾಹಕನು ಮಾಡಿದ ಕಟ್ಟಣೆಯನಾರಿಗೂ ತಿಳಿಯಬಾರದು ನೋಡಾ........ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.''

ಆ ಸಂಯೋಗ ಸರಿಯೆ ಪ್ರಾರಬ್ಧವಳಿಯಿತ್ತೆಂಬರು ನೋಡಾ :— ಸಂಯೋಗ ಇರುವ ವರೆಗೆ ಹುಟ್ಟು ಸಾವು; ಒಂದು ದೇಹದ ತ್ಯಾಗಿ, ಇನ್ನೊಂದು ದೇಹದ ಯೋಗ, ನಾವು ಸಂಯೋಗ-ಶಕ್ತಿ-ಕ್ಷೇತ್ರದಲ್ಲಿ ಓಲಾಡುತ್ತಿರುವವರೆಗೆ ಜನ್ಮ-ಮರಣದ ಸಂಕೋಲೆ ತಪ್ಪದು; ಸುಖ-ದುಃಖಗಳ ತೆರೆ ಅಡಗದು. ಸಾಧಕನು ವಿಮುಕ್ತನಾಗಲು ಹೃದಯತಃ ಬಯಸುತ್ತಿದ್ದರೆ ಸಂಯೋಗ ಕ್ಷೇತ್ರವನ್ನು ಮೀರಬೇಕು; ಸಂಯೋಗರೂಪ ಲೀಲಾಶಕ್ತಿಯ ಹಿಂದೆ ನಿಶ್ಚಲ-ನಿಸ್ಸೀಮನಾಗಿರುವ ಈಶನತ್ತ ಹೆಜ್ಜೆಹಾಕಬೇಕು. ದೇಹ ಮನ ಬುದ್ಧಿ ವಲಯಂಗಳನ್ನು ಹಿಂದೆ ನೂಕಿ ಅನಂತ ಚಿದಾಕಾಶಕ್ಕೇರಬೇಕು. ಅಲ್ಲಿ ಈಶ-ದರ್ಶನ. ಅಲ್ಲಿಗೆ 'ಸಂಯೋಗ-ಶಕ್ತಿ' ಸರಿಯುತ್ತದೆ; ಅಂದರೆ ಉಪಶಾಂತಗೊಳ್ಳುತ್ತದೆ. ಆಗ ಆ ಸಂಯೋಗೋದ್ಭೂತವಾಗಿದ್ದ ಸಕಲ ಪ್ರಾರಬ್ಧಗಳು ಅಳಿಯುತ್ತವೆ. ಸಾಧಕ ಮುಕ್ತಿಯ ರೂಪನೇ ಆದ ದೇವನಲ್ಲಿ ಒಂದಾಗುತ್ತಾನೆ, ಇದು ಸಿದ್ಧರಾಮೇಶ್ವರನು ಸೂಚಿಸಿದ ಸಂಯೋಗ-ತ್ಯಾಗವೆಂಬ ಯೋಗ! ಈ ಯೋಗವನ್ನು ಸಾಧಿಸಿದವರಿಗೆ ಭವ-ಬಂಧವಿಲ್ಲ ಎಂಬುದು ಖಚಿತ.

ಪರವಸ್ತುವಿನಲ್ಲಿ ಮೂಲೋಕದ ಜನನ

೩

ಕನಕ ಒಂದರಲ್ಲಿ ಕಡಗ-ಕಂಟಿಯಾದಂತೆ,
ಶಕುನವೊಂದರಲ್ಲಿ ಶಕುನ ಬೇರಾದಂತೆ,
ಘನಕೆ ಘನವಾದ ಪರವಸ್ತುವಿನಲ್ಲಿ ಜನನವಾಯಿತು
ಮೂಲೋಕದ ಮಹಾಲಿಂಗ ಕಪಿಲಸಿದ್ಧಮಲ್ಲಿಕಾರ್ಜುನಾ.

ವಿವರಣ:—

ಕನಕ ಒಂದು : ಅದರಲ್ಲಿ ಕಡಗ (ಕೈಬಳೆ), ಕಂಟಿ (ಕೊರಳ ಹಾರ) ಗಳಾಗುತ್ತವೆ. ಶಕುನ ಶುಭಾಶುಭ ಸೂಚನ ಚಿಹ್ನೆ) ಒಂದು; ಅದರಲ್ಲಿ ಹಲವು ಶಕುನಾರ್ಥಗಳಾಗುತ್ತವೆ. (ಅದರಂತೆ ಪರಮಾತ್ಮನು ಒಬ್ಬ. ಅವನಲ್ಲಿ ಮೂರು ಲೋಕಗಳು ಕಾಣಬರುತ್ತವೆ. ಸಿದ್ಧರಾಮನು ದೇವನಿಗೂ ಜಗತ್ತಿಗೂ ಇರುವ ಅವಿನಾಭಾವ ಸಂಬಂಧವನ್ನಿಲ್ಲಿ ಬಣ್ಣಿಸಿದ್ದಾನೆ.

ಕನಕ ಒಂದರಲ್ಲಿ ಕಡಗ ಕಂಟಿಗಳಾಗುತ್ತವೆ:—ಕಡಗ ಎಂದರೆ ಕೈಯಲ್ಲಿ ಹಾಕಿಕೊಳ್ಳುವ ಬಳೆಯಾಕಾರದ ಆಭರಣ. ಕಂಟಿ ಎಂದರೆ ಕಂಠಮಾಲೆ, ಕಂಠಾಭರಣ. ಕಡಗ ಬೇರೆ, ಕಂಠಿ ಬೇರೆ, ಅವೆರಡರ ರೂಪ, ಕ್ರಿಯೇ ಹಾಗೂ ನಾಮಗಳು ಭಿನ್ನಭಿನ್ನ. ಆದರೇನು ? ಅವೆರಡರ ಉಪಾದಾನ ಮಾತ್ರ ಕನಕ; ಅದು ಒಂದೇ. ಅದು ಸತ್ಯ ; ಈ ಕಡಗ ಕಂಠಿಗಳು ಕೇವಲ ತೋರಿಕೆ, ನಾಮ ಮಾತ್ರ. ಇರುವದೆಲ್ಲ ಹೇಮ.

ಶಕುನವೊಂದರಲ್ಲಿ ಶಕುನ ಬೇರಾಗುತ್ತವೆ—ಶಕುನ ಶಬ್ದದ ಅರ್ಥ ಶುಭಾಶುಭ ಸೂಚಕ ಚಿಹ್ನೆ. ಹಂಗಪಕ್ಷಿ ಹಾಯ್ದುವದು, ಬೆಕ್ಕು ಅಡ್ಡಗಟ್ಟುವದು, ಬರಿಗೊಡ ಎದುರಾಗುವುದು, ಆಕಾಶದಲ್ಲಿ ಧೂಮಕೇತು ತೋರವದು ಇವು ಶಕುನಗಳು. ಒಂದು ಶಕುನ ಎಲ್ಲರಿಗೂ ಒಂದೇ ಅರ್ಥ ಕೊಡದು. ಉದಾ: ವಿರುದ್ಧ ದಿಕ್ಕಿನಿಂದ ಬರುತ್ತಿರುವ ಇಬ್ಬರು ವ್ಯಕ್ತಿಗಳ ನಡುವೆ ಹಂಗಪಕ್ಷಿಯೊಂದು ಹಾರಿ ಹೋಯಿತೆಂದು ಭಾವಿಸಿ. ಅದು ಒಬ್ಬನ ಬಲಕ್ಕೆ ಹಾರಿದೆ; ಇನ್ನೊಬ್ಬನ ಎಡಕ್ಕೆ ಹಾರಿದೆ. ಅಂದರೆ ಒಬ್ಬನಿಗೆ ಶುಭ ಸೂಚಕ. ಇನ್ನೊಬ್ಬನಿಗೆ ಅಶುಭ ಸೂಚಕ. ಇಂತು ಶಕುನ ಒಂದು ; ಅದರಲ್ಲಿ ಕಾಣಬಂದ ಶಕುನಾರ್ಥಗಳು ಎರಡು !

ಶಕುನಕ್ಕೆ ಇನ್ನೊಂದು ಅರ್ಥ ಪಕ್ಷಿ. ಪಕ್ಷಿಯ ಸಾಂಕೇತಿಕಾರ್ಥ 'ಪ್ರಾಣ' ಆ ಪ್ರಾಣಶಕ್ತಿಯು ವಿಶ್ವದಲ್ಲಿ ಒಂದೇ. ಆದರೆ ಅದೇ ಅಸಂಖ್ಯ ವಿಧದ ದೇಹಗಳಲ್ಲಿ ಪ್ರವೇಶಿಸಿ ವಿವಿಧ ಪ್ರಾಣಿಗಳಾಗಿ ತೋರಿದೆ. ಏಕಾಣು ಜೀವಿಯಾದ ಅಮೀಬಾ, ಜಲಚರ ಮೀನು, ವನ ನಿವಾಸಿ ಮಂಗ, ನಗರದಲ್ಲಿರುವ ಮನುಷ್ಯ, ಆಕಾಶ ಗಮನಿ ಪಕ್ಷಿ, ಸ್ಥಿರಸ್ಥಾನಸ್ಥ ವೃಕ್ಷ ಭಿನ್ನಭಿನ್ನವಾಗಿವೆ. ಆದರೆ ಅವುಗಳಲ್ಲಿ ಇರುವ ಪ್ರಾಣವು ಮಾತ್ರ ಒಂದೇ.

"The same stream of life that runs through my veins night and day runs through the world and dances in rythmic measures"

ನನ್ನ ಧಮನಿಗಳಲ್ಲಿ ಹರಿವ ಪ್ರಾಣ-ಶಕ್ತಿಯೇ ವಿಶ್ವದಾದ್ಯಂತ ಹರಿಯುತ್ತಿದೆ, ಲಯಬದ್ಧವಾಗಿ ಸ್ಪಂದಿಸುತ್ತಿದೆ. ಹೀಗೆ ಕವಿ ರವೀಂದ್ರರು ವರ್ಣಿಸಿದರು. ಏಕೈಕವಾದ ಪ್ರಾಣ-ಶಕ್ತಿಯಲ್ಲಿ ಕೋಟ್ಯಂತರ 'ಪ್ರಾಣಿ'ಗಳ ರಚನೆ ! ಶಕುನ ಒಂದರಲ್ಲಿ ಶಕುನ ಹಲವು.

(ಹಾಗೆ) ಘನಕೆ ಘನವಾದ ಪರವಸ್ತುವಿನಲ್ಲಿ ಜನನವಾಯಿತ್ತು ಮೂಲೋಕದ :- ಘನ ಎಂದರೆ ನಿಬಿಡ, ಗಟ್ಟಿ, ಪೂರ್ಣ ಇತ್ಯಾದಿ. ನಮ್ಮ ಸುತ್ತ ಹರವಿದ ವಿಶ್ವ ಬಹು ವಿಶಾಲ. ಕಣ್ಣಿನಿಂದ, ದೂರದರ್ಶಕ ಯಂತ್ರಗಳಿಂದ ನೋಡು, ವಿಶ್ವದ ಸೀಮೆ ಕಾಣದು. ಮಾನವೀಯ ಕಲ್ಪನೆ ಕುಂಠಿತವಾಗಬೇಕು ಅಷ್ಟು ಅದರ ವಿಸ್ತಾರ. ಆದ್ದರಿಂದ ವಿಶ್ವವು ಪೂರ್ಣ ಘನ ಎನಿಸುತ್ತದೆ. ಆದರೆ ಎಷ್ಟೇ ಪೂರ್ಣವಾದರೂ ಇದು ಪರಿಮಿತ. ಏಕೆಂದರೆ ಜಾತ ಹಾಗೂ ಮೂರ್ತ ಭೂತಗಳಿಂದ ಆದುದೆಲ್ಲ ಪರಿಮಿತ. ಜಾತವಾದುದು ಕಾಲದಿಂದ ಪರಿಮಿತ; ಮೂರ್ತವಾದುದು ದೇಶದಿಂದ ಪರಿಮಿತ. ಪರಮಾತ್ಮನು ಮಾತ್ರ ಅಜಾತ, ಅಮೂರ್ತ. ಆದುದರಿಂದ ಅಪರಿಮಿತ. ವಿಶ್ವವು ಘನವಾದರೆ, ಅವನು ಘನಕ್ಕೆ ಘನ. ಪೂರ್ಣಕ್ಕೆ ಪೂರ್ಣ. ಇಂದ್ರಿಯ ವೇದ್ಯವಾದ ವಿಶ್ವವು ಅಪರ. ಇಂದ್ರಿಯ ಶಕ್ತಿ ಕ್ಷೇತ್ರದಾಚೆ ಅನಂತವಾಗಿ ನೆಲೆಸಿದುದರಿಂದ ಪರಮಾತ್ಮನು ಪರವಸ್ತು, ಅವನು ಕರ್ಣಗ್ರಾಹ್ಯ ಶಬ್ದವಿಶ್ವದಲ್ಲಿ ನಿಶ್ಶಬ್ದವಾಗಿ, ಸ್ಪರ್ಶೇಂದ್ರಿಯ ಗ್ರಾಹ್ಯವಾದ ಸ್ಪರ್ಶವಿಶ್ವದಲ್ಲಿ ಅಸ್ಪರ್ಶನಾಗಿ, ನೇತ್ರ ಗ್ರಾಹ್ಯವಾದ ರೂಪ-ವಿಶ್ವದಲ್ಲಿ ಅರೂಪವಾಗಿ, ರಸನಗ್ರಾಹ್ಯವಾದ ರೂಪ-ವಿಶ್ವದಲ್ಲಿ ಅರಸನಾಗಿ, ಘ್ರಾಣಗ್ರಾಹ್ಯವಾದ ಗಂಧವಿಶ್ವದಲ್ಲಿ ಅಗಂಧನಾಗಿ, ಮನೋಗ್ರಾಹ್ಯವಾದ ಭಾವ ವಿಶ್ವದಲ್ಲಿ ನಿರ್ಭಾವನಾಗಿ ನೆಲೆಸಿದ್ದಾನೆ. ಎಂತಲೇ ಅವನು ಪರತತ್ತ್ವ ! ಪರವಸ್ತು !

ಹೊನ್ನಿನಲ್ಲಿ ಕಡಗ, ಕಂಟಿಗಳಾದಂತೆ, ಶಕುನದಲ್ಲಿ ಶಕುನಾರ್ಥಗಳಾದಂತೆ ಆ ಪರವಸ್ತುವಿನಲ್ಲಿ ತಾಮಸಿಕ-ರಾಜಸಿಕ-ತಾತ್ವಿಕ ಎಂಬ ಮೂರು ಲೋಕಗಳು ಉದಿಸಿವೆ. ಕಡಗ, ಕಂಟಿಗಳು ಕನಕದ ರೂಪುಗಳೇ. ಹಾಗೆ ಲೋಕಗಳೆಲ್ಲ ದೇವರೂಪವೇ ! ಸಮಸ್ತ ವಿಶ್ವ ಅವನ ಅಭಿವ್ಯಕ್ತ !

" ಅಗ್ನಿರ್ಯಥೈಕೋ ಭುವನಂ ಪ್ರವಿಷ್ಟೋ
ರೂಪಂ ರೂಪಂ ಪ್ರತಿರೂಪೋ ಬಭೂವ ।
ಏಕಸ್ತಥಾ ಸರ್ವಭೂತಾಂತರಾತ್ಮಾ
ಊಪಂ ರೂಪಂ ಪ್ರತಿರೂಪೇ ಬಹಿಶ್ಚ ॥

ಅಗ್ನಿಯು ಒಂದು ; ಸರ್ವ ಬ್ರಹ್ಮಾಂಡವನ್ನು ಪ್ರವೇಶಿಸಿ, ನಾನಾ ರೂಪುಗಳಲ್ಲಿ ಸೇರಿ ಅವುಗಳ ಪ್ರತಿರೂಪ ತಾಳಿತು. ಅಂದರೆ ಭೂಮಿಯಲ್ಲಿ ಹೊಂದಿ ಭೌಮಾಗ್ನಿ ಎಂದು, ಜಲದೊಡನೆ

ಹೊಂದಿ ವಡವಾಗ್ನಿ ಎಂದು, ವಿದ್ಯುತ್ತಿನೊಡಗೂಡಿ ವಿದ್ಯುದಾಗ್ನಿ ಎಂದು, ಶರೀರದಲ್ಲಿ ಕೂಡಿ ಜಠರಾಗ್ನಿ ಎಂದು ವಿಭಿನ್ನ ನಾಮ-ರೂಪಗಳನ್ನು ಅಗ್ನಿಯು ಧರಿಸಿತು. ಅದರಂತೆ, ಸಮಸ್ತ ಪ್ರಾಣಿಗಳಅಂತರಾತ್ಮನಾದ ಬ್ರಹ್ಮನು ತಾನೊಬ್ಬನೆ ಇದ್ದೂ ಅನೇಕ ರೂಪಗಳ ಧರಿಸಿದ. ಹಾಗೂ ಅವುಗಳ ಹೊರಗೂ ಉಳಿದ. ಈ ಕಠೋಪನಿಷತ್ತಿನ ಮಾತು ಸಿದ್ಧರಾಮನ ವಚನಕ್ಕೆ ಸಾಕ್ಷಿ ನುಡಿಯುತ್ತಿದೆ. ಸಕಳೇಶ ಮಾದರಸರೆಂಬ ಶ್ರೇಷ್ಠ ಶರಣರ ಮುಖದಿಂದಲೂ ಇಂಥದೇ ಒಂದು ಅನುಭವದ ನುಡಿ ಹೊರಹೊಮ್ಮಿದೆ :

" ಮೃತ್ತಿಕೆ ಒಂದರಲ್ಲಿ ಆದ ಭಾಂಡದಂತೆ,
ಚಿನ್ನವೊಂದರಲ್ಲಾದ ಬಂಗಾರ (ಆಭರಣ) ದಂತೆ,
ಉದಕ ಒಂದರಲ್ಲಾದ ವಾರಿಕಲ್ಲಂತೆ,
ಬ್ರಹ್ಮದಿಂದಶಾದ ಜಗವು ಭಿನ್ನವೆಲ್ಲಿಯದು ಸಕಳೇಶ್ವರಯ್ಯ ? "

ಮೃತ್ತಿಕೆ ಹಾಗೂ ಮಡಿಕೆ, ಆಂತರಿಕವಾಗಿ ಅಭಿನ್ನ. ಉದಕ, ವಾರಿಕಲ್ಲು ಆಂತರಿಕವಾಗಿ ಅದ್ವಯ, ಅದೇ ರೀತಿ, ಮೇಲೆ ಮೇಲೆ ಜಗತ್ತು. ದೇಹ, ಜೀವರು ಬೇರೆ ಬೇರೆಯಾಗಿ ಕಂಡರೂ ಒಳಗೆಲ್ಲ ಅವು ಏಕರೂಪ ; ಅಖಂಡ ಶಿವಸ್ವರೂಪ. ಹೊರಗಿನ ಭಿನ್ನತೆಯ ನಂಬಿ ನಡೆಸಿದ ಬದುಕು ಸಾಂಸಾರಿಕ, ಒಳಗಿನ ದಿವ್ಯ ಸತ್ಯವನ್ನು ಅರಿತು ನಡೆಸಿದ ಬದುಕು ಪಾರಮಾರ್ಥಿಕ. ಸಾಂಸಾರಿಕ ಬಾಳು ದುಃಖಪೂರ್ಣ. ಪಾರಾಮಾರ್ಥಿಕ. ಬಾಳು ಆನಂದ ಮಯ.

ಜಗತ್ತು ಇಂದ್ರಜಾಲ

ಳ

ಗಣಿತ ಒಂದಕ್ಕೆ ಪೂಜೆ ಒಂದೆರಡು ಮೂರಾದಲ್ಲಿ
ದಶ ಶತ ಸಹಸ್ರವೆನಿಸಿತ್ತಯ್ಯಾ.
ಪರಾತ್ಪರವಸ್ತು ಉಪಾಧಿವಶದಿಂದ
ಈಶ ಜೀವ ಪ್ರಕೃತಿ ಮೊದಲಾದ ಇಂದ್ರಜಾಲವಾಯಿತ್ತು.
ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

ವಿವರಣ :—

ಪರಮಾತ್ಮನೊಬ್ಬನೆ ಸತ್ಯ, ಉಪಾಧಿವಶದಿಂದ ತೋರಿದ ಜಗತ್ತು ಮಾತ್ರ ಮಿಥ್ಯೆ, ಇಂದ್ರಜಾಲ. ಈ ಸಂಗತಿಯನ್ನು ಸಿದ್ಧರಾಮನು ಸಂಖ್ಯಾ ದೃಷ್ಟಾಂತದಿಂದ ಸ್ಫುಟಗೊಳಿಸಿದ್ದಾನೆ.

ಗಣಿತ ಒಂದಕ್ಕೆ........ಸಹಸ್ರವೆನಿಸಿತ್ತಯ್ಯಾ :—ಒಂದು ; ಈ ಸಂಖ್ಯೆಯ ಬೆಲೆ ಒಂದೇ ಯಾವಾಗಲೂ ಯಾವ ಪರಿಸ್ಥಿತಿಯಲ್ಲಿಯೂ ಒಂದೇ. ಶೂನ್ಯದ ಬೆಲೆ ಸದಾ ಶೂನ್ಯವೆ:

ಆದರೆ ದಶಕ ಸ್ಥಾನದಲ್ಲಿ ಒಂದನ್ನಿರಿಸಿ, ಬಿಡಿ ಸ್ಥಾನದಲ್ಲಿ ಶೂನ್ಯವನ್ನಿರಿಸಿದರೆ ಹತ್ತರ ಭಾಸವಾಗುತ್ತದೆ. ಶತಕಸ್ಥಾನದಲ್ಲಿ ಒಂದನ್ನಿರಿಸಿ ದಶಕ ಹಾಗು ಬಿಡಿ ಸ್ಥಾನಗಳಲ್ಲೆರಡು ಶೂನ್ಯವಿರಿಸಿದರೆ ನೂರರ ಭಾಸವಾಗುತ್ತದೆ. ಸಹಸ್ರದ ಸ್ಥಾನದಲ್ಲಿ ಶತಕ-ದಶಕ ಹಾಗೂ ಬಿಡಿ ಸ್ಥಾನಗಳಲ್ಲಿ ಮೂರು ಶೂನ್ಯಗಳನ್ನಿರಿಸಿದರೆ ಸಾವಿರದ ಭಾಸವಾಗುತ್ತದೆ. ಒಂದು ಎನ್ನುವದು ಯಾವ ಸ್ಥಾನದಲ್ಲಿದ್ದರೂ ಸರಿ. ಅದು ಒಂದು. ಶೂನ್ಯವು ಯಾವ ಸ್ಥಾನದಲ್ಲಿದ್ದರೂ ಶೂನ್ಯ. ಆದರೆ ಅವೆರಡನ್ನು ವಿಶಿಷ್ಟ ರೀತಿಯಲ್ಲಿ ಹೊಂದಿಸಿದರೆ ಹತ್ತು ನೂರು ಸಾವಿರದ ಕಲ್ಪನೆ ಮೂಡಿಕೊಳ್ಳುತ್ತದೆ, ಒಂದು — ಇದುಸತ್ಯ. ಶೂನ್ಯ — ಇದು ಸತ್ಯದ ಅಭಾವ, ಅಂದರೆ ಅಸತ್ಯ. ಅವೆರಡರ ಸಾಂಗತ್ಯದಲ್ಲಿ ತೋರಿಬಂದ ದಶ ಶತಾದಿ ಸಂಖ್ಯೆಗಳೆಲ್ಲ ಬರಿ ಮಾಟ, ಮಿಥ್ಯ, ಕಾಣಲು ಇವೆ; ಮೂಲದತ್ತ ನೋಡಿದಾಗ ಇಲ್ಲ. ಇದಕ್ಕೆಯೇ ಇಂದ್ರಜಾಲ ಎಂದಿದ್ದಾನೆ ಸಿದ್ಧರಾಮ.

ಪರಾತ್ಪರ ವಸ್ತು ಉಪಾಧಿವಶದಿಂದ....... ನೋಡಾ — ಪರ ಶಬ್ದಕ್ಕೆ ಶ್ರೇಷ್ಠ ಎಂಬ ಅರ್ಥ. ಯಾವುದು ಹೆಚ್ಚು ವಿಸ್ತಾರವೋ, ಹೆಚ್ಚುಕಾಲ ಬಾಳುವಂಥದೊ ಅದು ಕಡಿಮೆ ವಿಸ್ತಾರವುಳ್ಳ ಹಾಗೂ ಕಡಿಮೆ ಕಾಲ ಬಾಳುವ ವಸ್ತುವಿನ ದೃಷ್ಟಿಯಲ್ಲಿ ಪರವೆನಿಸುತ್ತದೆ. ಕಾರ್ಯವಾದ ಮಡಿಕೆಯ ದೃಷ್ಟಿಯಿಂದ ಅದರ ಕಾರಣವಾದ ಮಣ್ಣು ವ್ಯಾಪಕ. ಅದರಿಂದ ಅದು ಪರ. ಅದರಂತೆ, ನಮ್ಮ ಬಾಹ್ಯೇಂದ್ರಿಯಕ್ಕೆ ಮತ್ತೂ ಅಂತರಿಂದ್ರಿಯಕ್ಕೆ ಗೋಚರಿಸುವ ಸಮಗ್ರ ವಿಶ್ವವು ಕಾರ್ಯ ; ಪ್ರತ್ಯಿಕೆಯಿಂದ ಮಹತ್ತ್ವದವರೆಗಿನ ತತ್ತ್ವಪುಂಜವಾದ ವಿಶ್ವದ ಮೂಲ ಕಾರಣವು ಪ್ರಕೃತಿ. ಅದರ ವಿಸ್ತಾರ ಅಳತೆಗೆ ಸಿಗದು; ಅದರ ಕಾಲಮಾನ ಗಣನೆಗೆ ನಿಲುಕದು. ಕಾಲ ದೇಶ ದ್ರವಗಳ ಮೂಲವದು. ಅದು ವಿಶ್ವದ ಅಂತಿಮ ವಸ್ತು. ಪರತತ್ತ್ವ. ಪರಮ ಶಕ್ತಿ. ಅಂಥ ಪರಮ ಶಕ್ತಿಗೂ ಪರಮಾಶ್ರಯ ಸ್ಥಲ ದೇವನು ಅವನ ಅಸ್ತಿತ್ವದಂಬರದಲ್ಲಿ ಸುಳಿವ ಅನಿಲವೇ ಶಕ್ತಿ. ಶಕ್ತಿಯು ಸಾಲಂಬಿನಿ. ದೇವನು ನೀರಾಲಂಬಿ. ಶಕ್ತಿಯು ಸೀಮಾನ್ವಿತೆ; ದೇವನು ನಿಸ್ಸೀಮ. ಅದ್ದರಿಂದವನಿಗೆ 'ಪರತ್ಪರ. ಎಂದು ಸಾರ್ಥಾಭಿಧಾನ. ಅವನು ಕೇವಲಾಸ್ತಿತ್ವರೂಪನಾದುದರಿಂದ 'ವಸ್ತು' ಎನಿಸಿದ್ದಾನೆ'

ಇನ್ನು ಉಪಾಧಿ ಶಬ್ದ. ಅದರರ್ಥ ಸಮೀಪವರ್ತಿ. ಒಂದು ವಸ್ತುವಿನೊಳಗೆ ಪ್ರವೇಶಿಸದೆ, ಅದರ ಸಮಿಪವರ್ತಿಯಾಗಿದ್ದು ಆ ವಸ್ತುವಿಗೆ ಭಿನ್ನ ನಾಮರೂಪಗಳನ್ನೀಯುವಂಥದು ಅದು, ಉಪಾದಿ. ಉದಾ : ಧನ. ವ್ಯಕ್ತಿಯನ್ನು ಪ್ರವೇಶಿಸದು. ಅವನ ಹೊರಗಿದ್ದೇ ಅವನಿಗೆ 'ಧನಿಕ' ಎಂಬ ನಾಮ ಈಯುತ್ತದೆ. ಶೂನ್ಯವು ಉಪಾಧಿ. ಒಂದರ ಎದುರು, ಅದು ಸುಳಿದರೆ ಒಂದರಲ್ಲಿ ಹತ್ತರ ಆಭಾಸ ಉಂಟು ಮಾಡುತ್ತದೆ. ಎರಡು ಸ್ಥಾನಗಳಲ್ಲಿ ಸುಳಿದರೆ ನೂರರ ಆಭಾಸ ಉಂಟುಮಾಡುತ್ತದೆ. ಮೂರು ಸ್ಥಾನಗಳಲ್ಲಿ; ಸುಳಿದರೆ ಸಾವಿರದ ಆಭಾಸ ಉಂಟುಮಾಡುತ್ತದೆ. ಅದೇ ರೀತಿ, ಪರಾತ್ಪರ ವಸ್ತುವು ಅದು ಸರ್ವದಾ ಸತ್ಯ, ಅಪರಿಣಾಮಿ. ಒಂದು ಸಂಖ್ಯೆಯಂತೆ. ಮಾಯಾಶಕ್ತಿಯು ಶೂನ್ಯದಂತೆ. ಆ ಮಾಯೆಯು ಶುದ್ಧರೂಪದಲ್ಲಿ ಪರಮಾತ್ಮನ ಸಾನಿಧ್ಯ ಹೊಂದಿದರೆ ಈಶ ಎಂಬ ಭಾವದ ತೋರಿಕೆ ; ಅಶುದ್ಧ ರೂಪದಲ್ಲಿ ಆತನ ಸಾನಿಧ್ಯ ಹೊಂದಿದರೆ ಪ್ರಕೃತಿಯ ತೋರಿಕೆ ;

ಮಿಶ್ರರೂಪದಲ್ಲಿ ಆತನ ಸಾಮಿಪ್ಯ ಹೊಂದಿದರೆ ಜೀವನ ತೋರಿಕೆ. ಈ ಈಶ, ಈ ಪ್ರಕೃತಿ ಮತ್ತು ಅದರ ವಿಸ್ತಾರವಾದ ಜಗತ್ತು ಹಾಗೂ ಜೀವರುಗಳು ನೈಜವಲ್ಲ. ಚರಮ ಸತ್ಯಗಳಲ್ಲ. ಅವು ಮಾಯಿಕ. ಮಿಥ್ಯೆ, ಮಾಟಗಳು.

ಮಾಂತ್ರಿಕನು ತನ್ನ ಜಾದು ವಿದ್ಯೆಯ ಸಹಾಯದಿಂದ ನೂರಾರು ದೃಶ್ಯಗಳನ್ನು ತೋರಿಸುತ್ತಾನೆ. ಅವೆಲ್ಲ ಸತ್ಯವೆಂದೇ ಭ್ರಮೆ ಉಂಟಾಗುತ್ತದೆ. ಆದರೆ ಅವು ನೋಡಲು ಮಾತ್ರ, ವಾಸ್ತವಿಕವಾಗಿ ಅವು ಅಲ್ಲಿಲ್ಲ. ಅದೇ ರೀತಿಯಾಗಿ ಅಖಂಡ ಪರಮಾತ್ಮನೆಂಬ ವೇದಿಕೆಯ ಮೇಲೆ, ಮಾಯಾ ಶಕ್ತಿಯ ಮೂಲಕ ಅಗಣಿತ ದೇಹಗಳು, ಬ್ರಹ್ಮಾಂಡಗಳೂ, ಜೀವರುಗಳೂ, ಸ್ವರ್ಗೀಯ ದೇವತೆಗಳೂ ಈಶನೂ ಕಾಣುತ್ತಾರೆ. ವಾಸ್ತವಿಕವಾಗಿ ಅವನು ಅಲ್ಲಿಲ್ಲ. ಕೇವಲ ಇಂದ್ರಜಾಲವದು.

ಇಂದ್ರಜಾಲವು ನೋಡಲು ಸುಂದರ. ಅದನ್ನು ನಂಬಿ ಬದುಕಲಾಗುವುದಿಲ್ಲ, ಈ ವಿಶ್ವವು ನೋಡಲಷ್ಟೇ ಚನ್ನ. ಇದರ ಮೋಹಜಾಲದಲ್ಲಿ ಬೀಳಬಾರದು. ಸ್ವಾಧಾರ ದೇವನನ್ನು ನಂಬಿ ಬಾಳಬೇಕು, ಅಂಥ ಬಾಳಿನಲ್ಲಿ ಕೃತಕೃತ್ಯತೆ ಇದೆ ; ನೆಮ್ಮದಿ ಇದೆ.

ಜ್ಞಾನಿಗಳೆಲ್ಲ ಸತ್ಯದರ್ಶನವುಳ್ಳವರು, ಅವರು ನಮ್ಮಂತೆ ಭೌತ ವಿಷಯಗಳಲ್ಲಿ ಮರುಳಾಗಲಿಲ್ಲ. ದೇಹ ಇಂದ್ರಿಯ ಮನಸ್ಸಾದಿಗಳಿಗೆ ಸಾಕ್ಷಿಯಾಗಿ ನಿಂತು ನೋಡಿದರು. ಒಂದು ದಿನ ಸುಕರಾತ ಹಾಗೂ ಆತನ ಗೆಳೆಯ ಒಂದು ಗಿಡದ ಕೆಳಗೆ ಮಲಗಿದ್ದರು. ಗಿಡದ ಮೇಲೊಂದು ಮಂಗ, ಅದನ್ನು ನೋಡುತ್ತ ನಿದ್ರೆಹೋದ ಗೆಳೆಯನು ಕನಸು ಕಂಡ. ಕನಸ್ಸಿನಲ್ಲಿ ಸುಕರಾತ ಮಂಗನಾಗಿದ್ದ. ಗೆಳೆಯ ಎದ್ದ. ಸುಕರಾತ ನನ್ನೆಬ್ಬಿಸಿ ನಗುತ್ತ ಕೇಳಿದ-'ಸುಕರಾತ, ನೀನು ಮಂಗನೋ ಮನುಷ್ಯನೋ ?' ಸುಕರಾತನು ಪ್ರಸಂಗವನ್ನು ಅವಧಾನಿಸಿ ನುಡಿದ -'ನೀನು ಕನಸು ಕಾಣುವಾಗ ನಿನಗೆ ನಾನು ಮಂಗ. ನೀನು ಎಚ್ಚರಾದಾಗ ನಿನಗೆ ನಾನು ಮನುಷ್ಯ. ನನ್ನಷ್ಟಕ್ಕೆ ನಾನು ಮಂಗನೂ ಅಲ್ಲ, ಮನುಷ್ಯನೂ ಅಲ್ಲ. ಅವೆರಡು ಕಲ್ಪನೆಗಳು, ನಿನ್ನ ಭ್ರಮೆ. ನಾನು ಆ ಭ್ರಮೆಯ ಅಧಿಷ್ಠಾನ, ಮಂಗ-ಮನುಷ್ಯರಲ್ಲಿರುವ ಶಾಶ್ವತ 'ಇರುವಿಕೆ', ಬಾಧೆಗೊಳ್ಳದ ಬದಲಾಗದ ಅಸ್ತಿತ್ವ. ನಿರುಪಾಧಿಕ ವಸ್ತು'. ಸುಕರಾತನ ಮಾತು ವೈಶ್ವಿಕ ಸತ್ಯ. ಸಿದ್ಧರಾಮನ ನುಡಿ, ಸುಕರಾತನ ಮಾತು ಸಮ ಸಮ. ಉಪಾಧಿ ವಶರಾಗಿರುವವರೆಗೆ ಜೀವ ದೇಹ ಜಗತ್ತುಗಳ ಭಾವ ಕೆಡದು. ಹತ್ತು ನೂರು ಸಾವಿರದ ಕಲ್ಪನೆ ಅಳಿಯದು. ಅಂದರೆ ಇದ್ರಜಾಲಕ್ಕೆ ನಾವು ಸಂಪೂರ್ಣ ಮರುಳರು. ಇದು ಇಂದ್ರಜಾಲವೆಂದು ಅರಿತ ಒಡನೆಯೇ ಮರುಳುತನ ಮಾಯ.

(ಮುಂದುವರಿಯುವುದು.)

ಪ್ರಕಾಶಕರಾದ ಶ್ರೀ ಮಲ್ಲಿಕಾರ್ಜುನ ಅಧ್ಯಾತ್ಮ ಕೇಂದ್ರ, ವಿಜಯನಗರ, ಬೆಂಗಳೂರು-೪೦ ಇವರಿಗೆ ಉಪಕೃತರಾಗಿದ್ದೇವೆ. -ಸಂಪಾದಕರು ಕಲ್ಯಾಣ ಕಿರಣ

ಅಕ್ಕ ಕಂಡ ಅಣ್ಣ

—ಡಾ॥ ಮಲ್ಲಿಕಾರ್ಜುನ ಲಕ್ಷ್ಮಿ

ಹೆಣ್ಣುಮಕ್ಕಳಿಗೆ ಅತ್ಯಂತ ಗೌರವಸಂದ ಕಾಲ ಹನ್ನೆರಡನೆಯ ಶತಮಾನ. ಅದೂ ಕರ್ನಾಟಕದ ಶಿವಶರಣರಿಂದ. ಹೆಣ್ಣು ಹೆಣ್ಣಲ್ಲ, ಮಾಯೆಯೂ ಅಲ್ಲ, ರಾಕ್ಷಸಿಯಂತೂ ಅಲ್ಲವೇ ಅಲ್ಲ, ಅವಳು ಸಾಕ್ಷಾತ್ ಮಹಾದೇವಿ ಎಂದು ಶಿವಶರಣರು ಬಗೆದರು. ಬಗೆದುದಷ್ಟೆ ಅಲ್ಲ, ಅದನ್ನು ಕೃತಿ ರೂಪದಲ್ಲಿ ತಂದು ಸ್ತ್ರೀಪುರುಷರಿಬ್ಬರೂ ಸಮಾಜದ ಏಳ್ಗೆಗೆ ಸಮಾನ ವ್ಯಕ್ತಿಗಳೆಂದು ಪರಿಗಣಿಸಿದರು. ಸ್ತ್ರೀಯರಿಗೂ ಅಧ್ಯಾತ್ಮ ಸಾಧನೆಗೆ, ವಿಚಾರ ಸ್ವಾತಂತ್ರ್ಯಕ್ಕೆ ಅವಕಾಶ ಮಾಡಿಕೊಟ್ಟರು. ಇದರ ಪ್ರತಿಫಲವಾಗಿ ಕನ್ನಡ ನಾಡಿನಲ್ಲಿ ಅಸಂಖ್ಯಾತ ಶಿವಶರಣೆಯರು ಬೆಳಕಿಗೆ ಬಂದರು. ಇಂಥವರಲ್ಲಿ ಉಡುತಡಿಯ ಮಹಾದೇವಿಯಕ್ಕ ಅಗ್ರಗಣ್ಯಳಾಗಿದ್ದಾಳೆ.

ಮಹಾದೇವಿಯಕ್ಕ ಬಸವಣ್ಣನವರ ಕಾಲದಲ್ಲಿಯೆ ಬದುಕಿದ್ದವಳು. ಇವಳು ಶಿವಮೊಗ್ಗಾ ಜಿಲ್ಲೆಯ ಉಡುತಡಿಯಲ್ಲಿ ಹುಟ್ಟಿದಳು. ಬಸವಣ್ಣ ವಿಜಾಪೂರ ಜಿಲ್ಲೆಯ ಬಾಗೇವಾಡಿಯಲ್ಲಿ ಜನಿಸಿದರು. ಈತ ಮುಂಜಿವೆಯ ಬಂಧನದಲ್ಲಿ ಸಿಲುಕದೆ ಸಂಪ್ರದಾಯವನ್ನು ವಿರೋಧಿಸಿ, ತನ್ನ ಎಂಟನೇ ವಯಸ್ಸಿನಲ್ಲಿಯೆ ಮನೆಮಾರು ತೊರೆದು ಕ್ರಾಂತಿಯನ್ನೆಬ್ಬಿಸಿದ. ಮಹಾದೇವಿಯಕ್ಕ ನವತಾರುಣ್ಯವಸ್ಥೆಯಲ್ಲಿ, ಲಗ್ನವಾಗಲು ಬಂದ ಕೌಶಿಕ ರಾಜನನ್ನೇ ಧಿಕ್ಕರಿಸಿ ಮನೆ ಮಾರು ತೊರೆದು ಅದ್ಭುತ ಕ್ರಾಂತಿ ಎಸಗಿದಳು. ಇಬ್ಬರಿಗೂ ಅಂಗದ ಮೇಲೆ ಲಿಂಗ; ಷಟಸ್ಥಲ ಮಾರ್ಗವಾಗಿ ನಡೆಯಲು ಕಲಿತ ವೀರಶೈವ ಧರ್ಮ ಪುರುಷರು. ಕ್ರಿಯೆ ಜ್ಞಾನಗಳ ಸುಂದರ ಸಮನ್ವಯದಿಂದ ಇವರಿಬ್ಬರಲ್ಲೂ ಧರ್ಮತೇಜ ಉಕ್ಕುತ್ತಿತ್ತು. ಆ ಮಹಾ ಬೆಳಕಿನಲ್ಲಿ ಶರಣ ಸತಿ, ಲಿಂಗ ಪತಿ ಭಾವ ಮೆರೆದರು.

ಬಸವಣ್ಣ ಬಲದೇವ ಮಂತ್ರಿಯ ಅಳಿಯನಾಗಿದ್ದ, ಬಿಜ್ಜಳ ಭೂಪತಿಯ ಮಂತ್ರಿಯಾಗಿದ್ದ. ಲೌಕಿಕ ರೀತಿಯಿಂದ ಈತನಿಗೆ ನೀಲಾಂಬಿಕೆ ಮತ್ತು ಗಂಗಾಬಿಕೆಯೆಂದಿಬ್ಬರು ಹೆಂಡರು. ಆದರೆ ಅಧ್ಯಾತ್ಮಿಕ ರೀತಿಯಿಂದ ಈತನೇ ಸತಿ, ಕೂಡಲಸಂಗಮದೇವನೇ ಇವರಿಗೆ ಪತಿ. ಅವನದೇ ಆದ ಒಂದು ವಚನದಲ್ಲಿ ಇದನ್ನು ಕಾಣಬಹುದಾಗಿದೆ.

'ಜಗವೆಲ್ಲನರಿಯಲು ಎನಗೊಬ್ಬ ಗಂಡನುಂಟು, ಆನುಮುತ್ತೈದೆ,
ಆನು ನಿಷ್ಠೆ, ಕೂಡಲ ಸಂಗಯ್ಯನೆಂತೊಬ್ಬ ಗಂಡನೆನಗುಂಟು.

ಮಹಾದೇವಿಯಕ್ಕ ಲೌಕಿಕ ಗಂಡನನ್ನು ಮೀರಿ ಪಾರಮಾರ್ಥಿಕ ಪತಿ ಚೆನ್ನಮಲ್ಲಿಕಾರ್ಜುನನನ್ನೇ ವರಿಸಿದಳು. 'ಈ ಸಾವಕೆಡುವ ಗಂಡನೊಯ್ದು ಒಲೆಯೊಳಗಿಕ್ಕು....ನನಗೆ ನನ್ನ ಚೆನ್ನಮಲ್ಲಿಕಾರ್ಜುನನೇ ಚೆಲುವ ಪತಿ, ಎಂದು ಸಾರಿದಳು.

ಬಸವಣ್ಣನವರ ವ್ಯಕ್ತಿತ್ವ ಬಹುಮುಖವಾದುದು. ಅವರು ರಾಜಕಾರಣಿಯಿದ್ದಂತೆ ಧರ್ಮ ಭಂಡಾರಿಯೂ ಆಗಿದ್ದರು. ಸಮಾಜದ ಹಿತಚಿಂತಕರಾಗಿ, ದೀನ ದಲಿತರ ಪ್ರಥಮೋದ್ಧಾರಕರಾಗಿ ಅದ್ಭುತ ಕಾರ್ಯ ಕೈ ಕೊಂಡರು. ಮುತ್ತಿನ ಹಾರದಂತಹ ಸರಳವೂ ಅರ್ಥಗರ್ಭಿತವೂ ಆದ ಆಡುಭಾಷೆಯಲ್ಲಿ ಉನ್ನತ ವಿಚಾರಗಳನ್ನು ಹರಿಬಿಟ್ಟ ಪ್ರತಿಭಾವಂತ ಸಾಹಿತಿ. ಇವರ ವಚನಗಳು ಅಧರಕ್ಕೆ ಕಹಿಯಾದರೂ ಉದರಕ್ಕೆ ಸಿಹಿ. ಬೇವಸವಿದಂತೆ ಸವಿದರೆ ಬಾಳಯಾತ್ರೆಗೆ ದಿವ್ಯ ಔಷಧ.

ದಯೆಬೇಕು ಸಕಲ ಪ್ರಾಣಿಗಳಲ್ಲಿ, ದೇವನೊಬ್ಬ ನಾಮ ಹಲವು, ಕಾಯಕವೇ ಕೈಲಾಸ, ಅನಾದೇಹವೆ ದೇಗುಲ, ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ, ಆಚಾರವೆ ಸ್ವರ್ಗ, ಅನಾಚಾರವೆ ನರಕ. ಸದುವಿನಯವೆ ಸದಾಶಿವನ ಒಲುಮೆ, ಶಿವಪಥನರಿವಡೆ ಗುರುಪಥ ಮೊದಲು –ಮೊದಲಾದ ಮಾನವೀಯ ಮೌಲ್ಯಗಳನ್ನು ಸಾರುವ ಅಮೃತ ನುಡಿಗಳಲ್ಲಿ ಬಸವಣ್ಣನವರ ಸಂದೇಶ ಅಡಕವಾಗಿದೆ. ಇವರ ತತ್ವ ಶಕ್ತಿ ವಿಶಿಷ್ಟಾದ್ವೈತ, ಇವರ ಸಾಹಿತ್ಯ ಅನುಭಾವ ಸಾಹಿತ್ಯ, ಇವರ ಜೀವನದ ಹಾಸುಹೊಕ್ಕುಗಳೆಂದರೆ ಕಾಯಕ ಮತ್ತು ದಾಸೋಹ. ಇದರಿಂದಾಗಿ ಬಸವಣ್ಣ ಲೋಕವಂದ್ಯನಾದನು.

ಮಹಾದೇವಿಯಕ್ಕ ಉಡುತಡಿ ಬಿಟ್ಟು ಕಲ್ಯಾಣಕ್ಕೆ ಹೋಗದೆ ನೇರವಾಗಿ ಶ್ರೀಶೈಲಕ್ಕೆ ಹೋದಳೆಂದು ಹರಿಹರ ಕವಿ ಚಿತ್ರಿಸಿದ್ದಾನೆ. ಅಣ್ಣ, ಪ್ರಭು, ಚೆನ್ನಬಸವಣ್ಣ, ಮಡಿವಾಳಯ್ಯ ಮೊದಲಾದ ಶರಣ ಶಿಖಾಮಣಿಗಳನ್ನು ಕಾಣದ ಅಕ್ಕ 'ಮಹಾದೇವಿಯಕ್ಕ' ಆಗಲು ಅದ್ಹೇಗೆ ಸಾಧ್ಯ ? ಇಂಥ ಕತೆ ಅಪೂರ್ಣ ಎಂಬುದನ್ನು ಅರಿಯಬೇಕು. ವಿಮರ್ಶಕರು ಹೇಳುವಂತೆ, ಈ ಕಥೆ ಒಂದು ಹೆಣ್ಣಿನ ಕಥೆಯಾಗಿದೆ ಅಷ್ಟೆ. ಕಲ್ಯಾಣ ಪ್ರವೇಶಿಸದ, ಅನುಭವ ಮಂಟಪ ಹೊಗದ ಅಕ್ಕನ ಜೀವನ ಚರಿತ್ರೆ ಸಪ್ಪೆ. ಆದ್ದರಿಂದ ಆಕೆ ಅಲ್ಲಿ ಹೋಗಿರಲೇಬೇಕು. ಆಸೆ–ಆಮಿಷವನಳಿದು, ನಾನೆಂಬುದ ಹರಿದು ಕಲ್ಯಾಣದಲ್ಲಿ ಒಳಹೊಕ್ಕ ಅಕ್ಕನ ಅನುಭವ ಅದೂ ನಿಜಕ್ಕೂ ಶಿವಾನುಭವ. ಅನುಭವ ಮಂಟಪದಲ್ಲಿ ಪ್ರಭು ಒಡ್ಡಿದ ಪ್ರಶ್ನೆಗಳಿಗೆ ಮಾರ್ಮಿಕವಾಗಿ ಉತ್ತರ ನೀಡಿದಳು. ಇವಳ ಭಕ್ತಿ, ಜ್ಞಾನ, ವೈರಾಗ್ಯದ ಕೆಚ್ಚನ್ನು ಕಂಡುಕೊಂಡ ಶರಣರು ಮನ ದುಂಬಿಕೊಂಡಾಡಿದ್ದಾರೆ. ಅಕ್ಕನ ವಚನಗಳನ್ನು ಕೇಳಿ ಮೊದಲು ಸ್ನಾನದ ಬೆಲೆ ಕಟ್ಟಿದ್ದಾರೆ. ಅಜಕೋಟಿ ವರುಷದವರೆಲ್ಲರೂ ಹಿರಿಯರಲ್ಲ, ಆ ಹಿರಿಯತನ ಮಹಾದೇವಿಯದು ಎಂದು ಸಾರಿದ್ದಾರೆ.

ಬಸವಣ್ಣನ ಭಕ್ತಿ, ಚೆನ್ನಬಸವಣ್ಣನ ಜ್ಞಾನ ಪ್ರಭುದೇವರ ವೈರಾಗ್ಯಗಳನ್ನು ಅಳವಡಿಸಿಕೊಂಡ ಅಕ್ಕ ಅಹಮಿಕೆಯಿಂದ ಬೀಗಲಿಲ್ಲ ವಿನಯದಿಂದ ಶಿರಬಾಗುತ್ತಾಳೆ. ಈ ಮೂರನ್ನೂ ಹಿಂತಿರುಗಿಸಿದರೆ ನನ್ನಲ್ಲಿ ಯಾವ ಘನತೆ ? ಕೊಂಡಾಡಬೇಡಿರೆಂದು ಕಿರಿಯಳಾಗಿ ಮತ್ತೆ ಹಿರಿಯತನ ಮೆರೆದಿದ್ದಾಳೆ. ಪ್ರಭುವಿನಿಂದ ನಿಜದ ನೆಲೆ ತಿಳಿದುಕೊಂಡು 'ನಿಮ್ಮ ಮಂಡೆಗೆ ಹೂವ ತಾಹೆನಲ್ಲದೆ ಹುಲ್ಲತಾರೆ' ಎಂದು ಶರಣರನ್ನು ಸ್ಮರಿಸುತ್ತ ಶ್ರೀಶೈಲದತ್ತ ತೆರಳುತ್ತಾಳೆ.

ಸ್ತುತಿನಿಂದೆಗಳಿಗೆ ಹಿಗ್ಗದೆ-ಕುಗ್ಗದೆ ಸಮಾಧಾನಿಯಾಗಿರಬೇಕು ಎನ್ನುವುದು ಮಹಾದೇವಿಯಕ್ಕನ ಸಂದೇಶವಾಗಿರುತ್ತದೆ.

ಕಲ್ಯಾಣದಲ್ಲಿ ಶರಣರ ಸಂಗದಲ್ಲಿದ್ದಾಗ ಮಹಾದೇವಿಯಕ್ಕನಿಗೆ ಗುರು ಆಗಿ, ತಂದೆಯಾಗಿ ರಕ್ಷಣೆ ನೀಡಿ ಬೆಳೆಸಿದವನು ಅಣ್ಣ ಬಸವಣ್ಣನು ಅಣ್ಣನ ಕೃಪೆಯಿಂದಲೆ ಆಚಾರ, ಅರಿವು ಆಯತ, ಸ್ವಾಯತ, ಸನ್ನಿಹಿತ ಹೀಗೆ ಏನೆಲ್ಲವನ್ನೂ ಸಂಪಾದಿಸಿಕೊಂಡ ಮಹಾದೇವಿಯಕ್ಕ ತನ್ನ ವಚನಗಳಲ್ಲಿ ಆ ಅಣ್ಣನನ್ನು ಕುರಿತು ಹಾಡಿಯೇ ಹಾಡಿದ್ದಾಳೆ **ಅಕ್ಕ ಕಂಡ ಅಣ್ಣನ** ಚಿತ್ರ ಅಲ್ಲಿ ನಿಚ್ಚಳವಾಗಿ ಮೂಡಿ ಬಂದಿದೆ :

i) ಬಸವಣ್ಣ ನಿರಾಭಾರಿ ವೀರಶೈವ ಸನ್ಮಾರ್ಗ ಹಿಡಿದು ಆಚರಿಸಿದವನು. '....ಇಂತೀ ಬತ್ತೀಸ ಕಲೆಗಳು ನೆಲೆಯ ಸದ್ಗುರು ಮುಖದಿಂದರಿದ ಬಸವ ಮೊದಲಾದ ಸಮಸ್ತ ಗಣಂಗಳೆಲ್ಲ. ನಿರಾಭಾರಿ ವೀರಶೈವ ಸನ್ಮಾರ್ಗ ವಿಡಿದಾಚರಿಸಿದರು. ನೋಡಾ'.

(– ಮ. ದೇ. ವ. 198)

ii) ಬಸವಣ್ಣ ನಿಜಕ್ಕೂ ಲೋಕ ಕಲ್ಯಾಣಕ್ಕೆಂದೆ ವೀರಶೈವ ಮಾರ್ಗ ತಿಳಿಸಿ ಹೇಳುವುದಕ್ಕೆ ಮರ್ತ್ಯಕ್ಕೆ ಅವತರಿಸಿ ಬಂದವನು.
'.... ಈ ಪರಿಯಲ್ಲಿ ಬಯಲಾಗಿ ಹೋಗಬಾರದೆಂದು ನಮ್ಮ ಬಸವಣ್ಣನು ಜಗದ್ಧಿತಾರ್ಥವಾಗಿ ಮರ್ತ್ಯಕ್ಕೆ ಅವತರಿಸಿ ವೀರಶೈವ ಮಾರ್ಗವನರಸುವುದಕ್ಕೆ ಬಾವನ್ನ ವಿಪರವನೊಳಕೊಂಡು ಚರಿಸಿದನು.'

(–ಮ. ದೇ. ವ. 205)

iii) ಬಸವಣ್ಣ ಆದಿ ಅನಾದಿಗಳಿಂದತ್ತ, ಮೂದೇವರ ಮೂಲಸ್ಥಾನ, ನಾದಬಿಂದು ಕಳಾತೀತ, ಆದಿನಿರಂಜನ, ನಾದಸ್ವರೂಪ.

'ಆದಿ ಅನಾದಿಗಳಿಂದತ್ತಲಯ್ಯ ಬಸವಣ್ಣನು
ಮೂದೇವರ ಮೂಲಸ್ಥಾನವಯ್ಯ ಬಸವಣ್ಣನು
ನಾದಬಿಂದು ಕಳಾತೀತ ಆದಿ ನಿರಂಜನಯ್ಯ ಬಸವಣ್ಣನು.
ಆ ನಾದಸ್ವರೂಪೇ ಬಸವಣ್ಣನಾದ ಕಾರಣ
ಆ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು
ಕಾಣಾ ಚೆನ್ನಮಲ್ಲಿಕಾರ್ಜುನಯ್ಯಾ'

(– ಮ. ದೇ. ವ. 206)

iv) ಬಸವಣ್ಣನು ತನು, ಮನ, ಧನವಿಡಿದು ದಾಸೋಹ ಮಾಡಿ ಗುರುಲಿಂಗ ಜಂಗಮ ಪ್ರಸಾದಿಯಾಗಿ ಕೊನೆಗೆ ಸ್ವಯಂ ಪ್ರಸಾದಿಯಾಗಿದ್ದಾನೆ.

'ತನುವಿಡಿದು ದಾಸೋಹವ ಮಾಡಿ ಗುರುಪ್ರಸಾದಿಯಾದ ಬಸವಣ್ಣ

ಮನವಿಡಿದು ದಾಸೋಹವ ಮಾಡಿ ಲಿಂಗ ಪ್ರಸಾದಿಯಾದ ಬಸವಣ್ಣ
ಧನವಿಡಿದು ದಾಸೋಹವ ಮಾಡಿ ಜಂಗಮ ಪ್ರಸಾದಿಯಾದ ಬಸವಣ್ಣ
ಇಂತೀ ತ್ರಿವಿಧವಿಡಿದು ದಾಸೋಹವ ಮಾಡಿ ಸದ್ಗುರು ಚೆನ್ನಮಲ್ಲಿಕಾರ್ಜುನಾ
ನಿಮ್ಮ ಶರಣ ಬಸವಣ್ಣ ಸ್ವಯಂ ಪ್ರಸಾದಿಯಾದನಯ್ಯಾ'

(– ಮ. ದೇ. ವ. 207)

v ದೇವಲೋಕ, ಮರ್ತ್ಯಲೋಕ, ನಾಗಲೋಕ ಮೊದಲಾದಲ್ಲೆಲ್ಲ ಬಸವಣ್ಣನೇ ದೇವರು. ನಿಮಗೆ, ಎನಗೆ, ಶರಣರಿಗೆ ಹೀಗೆ ಎಲ್ಲರಿಗೂ ಬಸವಣ್ಣನೆ ದೇವರು.

'ದೇವಲೋಕದವರಿಗೂ ಬಸವಣ್ಣನೆ ದೇವರು
ಮರ್ತ್ಯಲೋಕದವರಿಗೂ ಬಸವಣ್ಣನೆ ದೇವರು
ನಾಗಲೋಕದವರಿಗೂ ಬಸವಣ್ಣನೆ ದೇವರು
ಮೇರುಗಿರಿ ಮಂದರಗಿರಿ ಮೊದಲಾದವೆಲ್ಲಕ್ಕೂ
ಬಸವಣ್ಣನೇ ದೇವರು, ಚೆನ್ನಮಲ್ಲಿಕಾರ್ಜುನಯ್ಯಾ
ನಿಮಗೂ ಎನಗೂ ನಿಮ್ಮ ಶರಣರಿಗೂ ಬಸವಣ್ಣನೇ ದೇವರು.'

(– ಮ. ದೇ. ವ. 208)

vi ಬಸವಣ್ಣನ ಪಾದವ ಕಂಡು ಬದುಕಿದೆ.

'.... ಸಂಗನಬಸವಣ್ಣನ ಶ್ರೀಪಾದವ ಕಂಡು ಬದುಕಿದೆ'

(ಮ. ದೇ. ವ. 209)

vii) ಬಸವಣ್ಣನಿದ್ದ ಕ್ಷೇತ್ರವೇ ಅವಿಮುಕ್ತ ಕ್ಷೇತ್ರ.

'....ನಿಮ್ಮ ಶರಣ ಬಸವಣ್ಣನಿದ್ದ ಕ್ಷೇತ್ರ ಅವಿಮುಕ್ತ ಕ್ಷೇತ್ರವಾಗಿ ಆನು ಸಂಗನ ಬಸವಣ್ಣನ ಶ್ರೀಪಾದಕ್ಕೆ ನಮೋನಮೋ ಎನುತಿರ್ದೆನು'

(– ಮ. ದೇ. ವ. 211)

viii) ಬಸವಣ್ಣನವರ ಲಿಂಗದಾಚಾರವನ್ನು ಕಂಡೇ ಅಕ್ಕನಿಗೆ ಲಿಂಗಸಂಗವಾದದ್ದು. ಸುಜ್ಞಾನದಿಂದ ಜಂಗಮ ಸಂಬಂಧ, ಸದ್ಭಕ್ತಿಯಿಂದ ನಿಜವು ಸಾಧ್ಯ, ಆತನೇ ಗುರು.

'ಬಸವಣ್ಣಾ ನಿಮ್ಮ ಲಿಂಗದಾಚಾರವ ಕಂಡ
ಎನಗೆ ಲಿಂಗಸಂಗವಾಯಿತ್ತಯ್ಯಾ,
ಬಸವಣ್ಣ ನಿಮ್ಮ ಮನದ ಸುಜ್ಞಾನವ ಕಂಡು
ಎನಗೆ ಜಂಗಮ ಸಂಬಂಧವಾಯಿತ್ತಯ್ಯಾ,
ಬಸವಣ್ಣ ನಿಮ್ಮ ಸದ್ಭಕ್ತಿಯ ತಿಳಿದು
ಎನಗೆ ನಿಜವು ಸಾಧ್ಯವಾಯಿತ್ತಯ್ಯಾ ,
ಚನ್ನ ಮಲ್ಲಿಕಾರ್ಜುನಯ್ಯನ ಹೆಸರಿಟ್ಟ ಗುರು

ನೀವಾದ ಕಾರಣ ನಿಮ್ಮ ಶ್ರೀಪಾದಕ್ಕೆ ನಮೋ ನಮೋ
ಎನುತಿರ್ದೆನು ಕಾಣಾ ಸಂಗನಬಸವಣ್ಣಾ.'

(– ಮ. ದೇ. ವ. 219)

ix) ಬಸವಣ್ಣ ಅಕ್ಕನಿಗೆ ಆಚಾರ ಮಾರ್ಗವನ್ನು ತೋರಿದನು. ಆಚಾರವೇ ಲಿಂಗವೆಂದು ಅರುಹಿವನು. ಪ್ರಾಣದಲ್ಲಿ ಅರಿವ ತೋರಿ ಅದುವೆ ಜಂಗಮ ಎಂದು ಸಾರಿದನು. ಅಂಥ ಹೆತ್ತತಂದೆ ಬಸವಣ್ಣನಿಗೆ ಎನ್ನ ಭಕ್ತಿ ನಿಮ್ಮ ಧರ್ಮ ಎಂದಿದ್ದಾಳೆ.

'ಎನ್ನ ಅಂಗದಲ್ಲಿ ಅಚಾರವ ತೋರಿದನಯ್ಯಾ ಬಸವಣ್ಣನು
ಆ ಆಚಾರವನೆ ಲಿಂಗವೆಂದರುಹಿದನಯ್ಯಾ ಬಸವಣ್ಣನು
ಎನ್ನ ಪ್ರಾಣದಲ್ಲಿ ಅರಿವ ತೋರಿದನಯ್ಯಾ ಬಸವಣ್ಣನು
ಆ ಅರಿವ ಜಂಗಮವೆಂದರುಹಿದನಯ್ಯಾ ಬಸವಣ್ಣನು
ಚನ್ನಮಲ್ಲಿಕಾರ್ಜುನಯ್ಯಾ, ಎನ್ನ ಹೆತ್ತ ತಂದೆ
ಸಂಗನಬಸವಣ್ಣನು ಎನಗೀ ಕ್ರಮವನರುಹಿದನಯ್ಯಾ ಪ್ರಭುವೆ,

(– ಮ. ದೇ. ವ. 218)

x) ಬಸವಣ್ಣನ ದಯದಿಂದಲೇ ಅಕ್ಕ ಕಾಮಾರಿಯನ್ನು ಗೆದ್ದುದ್ದು, ಹೆಸರಿನಲ್ಲಿ ಹೆಣ್ಣಾದರೂ ಭಾವದಲ್ಲಿ ಗಂಡಾದದ್ದು.

'ಕಾಮಾರಿಯ ಗೆಲಿದೆನು ಬಸವಾ ನಿಮ್ಮ ದಯದಿಂದ
ಸೋಮಧರನ ಹಿಡಿತಪ್ಪೆನು ಬಸವಾ ನಿಮ್ಮ ಕೃಪೆಯಿಂದ
ನಾಮದಲಿ ಹೆಂಗೂಸೆಂಬ ಹೆಸರಾದಡೇನು ?
ಭಾವಿಸಲು ಗಂಡುರೂಪು ಬಸವಾ ನಿಮ್ಮ ದಯದಿಂದ.
ಅತಿಕಾಮಿ ಚನ್ನಮಲ್ಲಿಕಾರ್ಜುನಂಗೆ ತೊಡರಿಕ್ಕಿ
ಎರಡುವರಿಯದೆ ಕೂಡಿದೆನು ಬಸವಾ ನಿಮ್ಮ ಕೃಪೆಯಿಂದ'

(– ಮ. ದೇ. ವ. 299)

xi) ಬಸವಣ್ಣ ಮೆಚ್ಚಿದ್ದರಿಂದ ಚನ್ನಮಲ್ಲಿಕಾರ್ಜುನನ ಜೊತೆ ಲಗ್ನವಾದದ್ದು. ಕಾರಣ ಆಕೆ ಬಸವಣ್ಣನ ಮನೆಯ ಮಗಳು.

'....ಬಸವಣ್ಣನ ಮನೆಯ ಮಗಳಾದ ಕಾರಣ ಭಕ್ತಿ ಪ್ರಸಾದವ ಕೊಟ್ಟನು'

(– ಮ. ದೇ. ವ. 224)

xii 'ಸಂಗನಬಸವಣ್ಣನ ಪಾದವ ಕಂಡೆನಾಗಿ ಎನ್ನ ಅಂಗನಾಸ್ತಿಯಾಯಿತು' ಎಂದು ಅಕ್ಕ ಸಂತೋಷಪಟ್ಟುಕೊಂಡಿದ್ದಾಳೆ.

(– ಮ. ದೇ. ವ. 220)

xiii) ಬಸವಣ್ಣನ ಪ್ರಸಾದ ಕೊಂಡು ಅಕ್ಕ ಭಕ್ತಿ ಸಂಪನ್ನೆಯಾಗಿದ್ದಾಳೆ.

'....ಬಸವಣ್ಣನ ಪ್ರಸಾದವ ಕೊಂಡು ಭಕ್ತಿ ಸಂಪನ್ನನಾದೆನಯ್ಯಾ.

(– ಮ. ದೇ. ವ. 199)

xiv) 'ಸಂಗನ ಬಸವಣ್ಣನ ಮಾತು ಕೇಳದೆ ಕೆಟ್ಟೆನಯ್ಯಾ' ಎಂದೂ ಹೇಳಿದ್ದಾಳೆ.

(– ಮ. ದೇ. ವ. 216)

xv) 'ಶ್ರೀ ಶರಣಬಸವಣ್ಣನ ಶ್ರೀಪಾದವ ಕಂಡಲ್ಲದೆ ಬಯಕೆ ಬಯಲಾಗದು ಎಂದೂ (ಮ. ದೇ. ವ. 212) ಅವನನ್ನು ಕಾಣುವ ತವಕವಾಯಿತ್ತೆಂದೂ ಹೇಳಿದ್ದಾಳೆ.

(ಮ. ದೇ. ವ. 213)

ಇಂಥ ಹಲವಾರು ನುಡಿ ಮುತ್ತುಗಳಲ್ಲಿ ಬಸವಣ್ಣನ ಅಗಾಧ ಮಹಿಮೆಯನ್ನು ಅಕ್ಕ ಹೃದಯತುಂಬಿ ಬಿಚ್ಚಿದ್ದಾಳೆ. ಜಗಜ್ಯೋತಿ ಬಸವಣ್ಣನನ್ನು ಅಂತೆಯೆ

'ಎತ್ತೆತ್ತ ನೋಡಿದೊಡತ್ತತ್ತ ಬಸವನೆಂಬ ಬಳ್ಳಿ
ಒತ್ತಿ ಹಿಂಡಿದರೆ ಭಕ್ತಿ ಎಂಬ ರಸವು,
ಎತ್ತಿ ಹಿಡಿದರೆ ಲಿಂಗವೆಂಬ ಗೊಂಚಲು
ಆಯತವು ಬಸವಣ್ಣನಿಂದ ಸ್ವಾಯತವು ಬಸವಣ್ಣನಿಂದ
ಗುರು ಬಸವಣ್ಣನಿಂದ ಲಿಂಗ ಬಸವಣ್ಣನಿಂದ ಜಂಗಮವೂ
ಬಸವಣ್ಣನಿಂದ' ಎಂದು ಹಾಡಿದುದು ಯಥಾಯೋಗ್ಯವಾದುದಾಗಿದೆ.

ಅಕ್ಕ ನಿಜಕ್ಕೂ ಅಣ್ಣನ ಅಂತರಂಗವನ್ನು ಒಳಹೊಕ್ಕು ಕಂಡಿದ್ದಾಳೆ. ಕಂಡದ್ದನ್ನು ಧ್ವನಿಪೂರ್ಣವಾಗಿ ಹೊರಹಾಕಿದ್ದಾಳೆ. ●

["ಶರಣರ ಜೀವನ ದರ್ಶನ" ಗ್ರಂಥದಿಂದ ಆಯ್ದ ಲೇಖನ. ಲೇಖಕರು ಮತ್ತು ಪ್ರಕಾಶಕರಿಗೆ ಧನ್ಯವಾದಗಳು. – ಸಂಪಾದಕರು]

ಇ

ರೈತ: ಸ್ವಾಮಿ ಸಾಹೇಬರನ್ನು ಕಾಣಬೇಕು.
ಸೇವಕ: ಸಾಹೇಬರು ಲಂಚ್‌ಗೆ ಹೋಗಿದ್ದಾರೆ (ಮಾರನೇಯ ದಿನ ಅದೇ ಸಮಯಕ್ಕೆ ಬಂದು)
ರೈತ: ಸಾಹೇಬರು ಇದಾರೆಯೆ ?
ಸೇವಕ: ಲಂಚ್‌ಗೆ ಹೋಗಿದ್ದಾರೆ.
ರೈತ: ಏನಯ್ಯ? ಸಾಹೇಬರು ದಿನಾ ಲಂಚ್‌ನಲ್ಲೇ ಇರುತ್ತಾರೆಯೇ

(ಶಿ. ಪಾ. ಮು.)

ವಿಜಾಪುರ ನಗರದಲ್ಲಿ

"ವಿಶ್ವಧರ್ಮ ಪ್ರವಚನ"

ವರದಿ : ಶ್ರೀ ರಾಮಲಿಂಗ ಸ್ವಾಮಿಗಳು
ಜ್ಞಾನಯೋಗಾಶ್ರಮ, ಬಿಜಾಪುರ

ಕರ್ನಾಟಕದ ಸಿರಿಮುಡಿಯಾದ ಕಲ್ಯಾಣ ನಾಡಿನ ಬೀದರಿನಿಂದ ಮಂಗಳೂರಿನ ಕಡಲ ರಾಣಿ ಮಂಗಳಾದೇವಿಯ ಪಾದಗಳವರೆಗೆ, ಶಿವನ ಮೊಗ್ಗೆಗಳು ಅರಳಿದ ಶಿವಮೊಗ್ಗೆಯಿಂದ ಕಿತ್ತೂರು ರಾಣಿ ಚೆನ್ನಮ್ಮಳ ಗಂಡುಮೆಟ್ಟಿನ ನಾಡಾದ ಬೆಳಗಾಂವಿಯವರೆಗೆ, ಅಲ್ಲದೆ ಕಡಲಾಚೆಯ ಇಂಗ್ಲಂಡ-ಅಮೆರಿಕ-ಗಳಲ್ಲಿಯೂ "ವಿಶ್ವಧರ್ಮ ಪ್ರವಚನ''ದ ಜಯಭೇರಿಯನ್ನು ಮೊಳಗಿಸಿದ ಪೂಜ್ಯ ಜಗದ್ಗುರು ಮಾತೆ ಮಹಾದೇವಿಯವರು ಇದೀಗ ವಿಶ್ವಗುರು ಬಸವಣ್ಣನವರ ಜನ್ಮಭೂಮಿಯಾದ ವಿಜಾಪೂರ ನಗರಕ್ಕೆ ಆಗಮಿಸಿದ್ದಾರೆ.

ಸೋಮವಾರ ದಿನಾಂಕ ೮-೪-೧೯೮೫ ರಂದು ನಗರದ ಶ್ರೀ ಸಿದ್ಧೇಶ್ವರ ಮಾಧ್ಯಮಿಕ ಶಾಲೆಯ ಆವರಣದಲ್ಲಿ "ವಿಶ್ವಧರ್ಮ ಪ್ರವಚನವು'' ಪ್ರಾರಂಭವಾಯಿತು. ಪ್ರವಚನದ ಪ್ರಾರಂಭೋತ್ಸವದ ಉದ್ಘಾಟನೆಯನ್ನು ಜ್ಞಾನಯೋಗಾಶ್ರಮದ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ನೆರವೇರಿಸಿದರು. ಅವರು ತಮ್ಮ ಭಾಷಣದಲ್ಲಿ - ''ಇದು ವಿಶ್ವಧರ್ಮ ಪ್ರವಚನ. ಕೆಲವರಿಗೆ ಬೇಕು, ಕೆಲವರಿಗೆ ಬೇಡಾದ ಪ್ರವಚನವಲ್ಲ. ಎಲ್ಲರಿಗೂ ಬೇಕಾದ ಪ್ರವಚನ. ಇದನ್ನು ಮನಸುಗೊಟ್ಟು ಕೇಳಬೇಕು. ಕೇಳುತ್ತ ಮೈಮರೆಯಬೇಕು. ತಾಯಿ ಮಗುವಿಗೆ ಮೊಲೆ ಕುಡಿಸುತ್ತ ಜೋಗುಳ ಹಾಡುತ್ತಿರಲು ಅದು ಮಲಗುತ್ತದೆ. ಅದರ ಜೊತೆಯಲ್ಲಿ ತಾಯಿಯೂ ಮಲಗುತ್ತಾಳೆ. ಹಾಗೆ ಶ್ರೋತೃಗಳ ತನ್ಮಯತೆಯನ್ನು ಕಂಡು ಉಪದೇಶಕರೂ ಮೈಮರೆಯಬೇಕು. ಎಂಥವರನ್ನೂ ಮೈಮರೆಸುವಂಥದು ವಿಶ್ವಧರ್ಮ ಪ್ರವಚನ.''

ದಲಿತ, ಶೋಷಿತ ಸಮಾಜದಿಂದ ಬಂದವರಾದರೂ ನಡೆ-ನುಡಿಗಳೆರಡರಲ್ಲಿಯೂ ಶರಣರಾದ, ಕಲ್ಯಾಣ ನಾಡಿನ ಶರಣ ಸಮ್ಮೇಳನದ ಅಧ್ಯಕ್ಷರಾದ ಶರಣ, ಕುಮಾರ ಕಕ್ಕಯ್ಯನವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ - "ವಿಶ್ವಗುರು ಬಸವಣ್ಣನವರು ಕೊಟ್ಟ ಲಿಂಗವಂತ ಧರ್ಮದಲ್ಲಿ ವಿಶ್ವಮಾನ್ಯ ನಿತ್ಯಸತ್ಯ ತತ್ವಗಳಿದ್ದರೂ ಅವು ಜನಸಾಮಾನ್ಯರಿಗೆ ಮುಟ್ಟದೆ ಇರುವುದರಿಂದ ಮೂಢ ಸಂಪ್ರದಾಯಗಳನ್ನೇ ಜನರು ಅನುಸರಿಸುತ್ತಿದ್ದಾರೆ. ಆದರೆ ಈ ತತ್ತ್ವಗಳನ್ನು ವಿಶ್ವಧರ್ಮ ಪ್ರವಚನದ ಮೂಲಕ ನಾಡಿನಾದ್ಯಂತ ಸಂಚರಿಸಿ ಪ್ರತಿಯೊಬ್ಬರ ಮನೆ ಮನೆಗೂ, ಮನ ಮನಕ್ಕೂ ಮುಟ್ಟಿಸುವ ಪ್ರಯತ್ನವನ್ನು ಪೂಜ್ಯ ಜಗದ್ಗುರು

ಮಾತಾಜಿಯವರು ಮಾಡಿದ್ದಾರೆ ಮತ್ತು ಮಾಡುತ್ತಿದ್ದಾರೆ ಎಂದು ಹೇಳಿದರು. ಪ್ರಥಮ ದಿವಸವೇ ಕಿಕ್ಕಿರಿದು ನೆರೆದ ಪ್ರಚಂಡ ಜನಸ್ತೋಮವನ್ನುದ್ದೇಶಿಸಿ ಪೂಜ್ಯ ಜಗದ್ಗುರು ಮಾತಾಜಿಯವರು ವಿಶ್ವಧರ್ಮ ಪ್ರವಚನದ ರೂಪು-ರೇಷೆಗಳನ್ನು ಪ್ರಸ್ತಾಪಿಸಿದರು. ವಿಜಾಪೂರದ ಇತಿಹಾಸದಲ್ಲಿಯೇ ಕಂಡರಿಯದ ಸಮಾರಂಭ. ಕೇಳರಿಯದ ಪ್ರವಚನ ಎಲ್ಲರ ಹೃದಯಗಳನ್ನು ತಿಳಿಸುವ ರಸದೌತಣ ! ದಿನ ದಿನಕ್ಕೆ ಹೆಚ್ಚು ಜನ ಸೇರುತ್ತಿದ್ದಾರೆ.

ಅಖಿಲ ಭಾರತ ವೀರಶೈವ ಮಹಾಸಭೆ ಶಾಖೆ ವಿಜಾಪೂರ ಹಾಗೂ ಶ್ರೀ ಸಿದ್ಧೇಶ್ವರ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಬಸವಜಯಂತಿಯ ಕಾರ್ಯಕ್ರಮಗಳು ಏಪ್ರಿಲ್ ೨೦ ರಿಂದ ೨೩ ರವರೆಗೆ ವಿಶ್ವಧರ್ಮ ಪ್ರವಚನದ ವೇದಿಕೆಯ ಮೇಲೆಯೆ ಪೂಜ್ಯ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಜರುಗಿದವು. ಪ್ರಥಮ ದಿವಸದಂದು ಶ್ರೀ ಎಂ. ಎಂ. ಹುಂಡೇಕಾರ ವಕೀಲರು ಸ್ವಾಗತ ಪರಿಚಯ ಮಾಡಿಕೊಟ್ಟರು. ಜ್ಞಾನಯೋಗಾಶ್ರಮದ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ಜ್ಯೋತಿಯನ್ನು ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸುತ್ತ-

"ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನ್ನೆರೆದು ಆಚಾರವೆಂಬ ಬತ್ತಿಗೆ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು ತೊಳಗಿ ಬೆಳಗುತ್ತಿದ್ದಿತಯ್ಯಾ ಶಿವನ ಪ್ರಕಾಶ. ಬಸವಣ್ಣನವರೇ ಪರಂಜ್ಯೋತಿಯಾಗಿ ಅವರ ಆ ಬೆಳಕಿನಲ್ಲಿ ಅಸಂಖ್ಯಾತ ಶರಣರು ಬೆಳಗುತ್ತಿರುವಾಗ ಈ ಆರುವ ದೀಪದಿಂದ ಏನು ಪ್ರಯೋಜನವಾದೀತು ? ಹಾಗಲ್ಲ ! ಈ ಬಸವ ಜ್ಯೋತಿಯು ಪ್ರತಿಯೊಬ್ಬರ ಹೃದಯಗಳನ್ನು ಬೆಳಗಬೇಕು. ಸ್ವಲ್ಪ ಆಸೆ-ಆಮಿಷಗಳ ಗಾಳಿ ಬೀಸಿದರೆ ಈ ದೀಪ ಆರುತ್ತದೆ. ಸಕಲ ಭೋಗ-ವೈಭವಗಳ ಮಧ್ಯದಲ್ಲಿದ್ದರೂ ಬಸವಣ್ಣನವರ ಮನಸ್ಸನ್ನು ಕೂಡಲಸಂಗಮದೇವ ತುಂಬಿಕೊಂಡಿದ್ದ. ಆದ್ದರಿಂದ ಅಷ್ಟೇ ಸಹಜವಾಗಿ ಅದೆಲ್ಲವನ್ನು ಬಿಟ್ಟು ಹೊರಟುಹೋದರು. ಏನಾದರೂ ಕೊಟ್ಟು ಬಸವಣ್ಣನವರನ್ನು ತೃಪ್ತಿಪಡಿಸುತ್ತೇವೆಂಬುದು ಹುಚ್ಚುತನ. ಈ ವರ್ಷದ ಬಸವ ಜಯಂತಿಗೆ ಬಸವಣ್ಣನವರೆ ಆಯ್ಕೆ ಮಾಡಿ ಕಳಿಸಿದ ಪೂಜ್ಯ ಮಾತಾಜಿಯವರೇ ಬಂದಿದ್ದಾರೆ. ಇದೊಂದು ನಮ್ಮೆಲ್ಲರ ಪುಣ್ಯವಿಶೇಷವೆಂದೇ ಹೇಳಬಹುದು."

ಮರುದಿವಸದ ಉಪನ್ಯಾಸದಲ್ಲಿ ಹಿರಿಯ ಸಾಹಿತಿಗಳಾದ ಶ್ರೀ ಶಂ. ಗು. ಬಿರಾದಾರ ಅವರು - "ಇಲ್ಲಿಯವರೆಗಿನ ಅವತಾರಿಕರೆಲ್ಲ ದುಷ್ಟರ ನಿಗ್ರಹ, ಶಿಷ್ಟರ ಪರಿಪಾಲನೆಗಾಗಿ ಅವತರಿಸಿದರೆ ಬಸವಣ್ಣನವರು ದುಷ್ಟರ ಪರಿವರ್ತನೆ, ಶಿಷ್ಟರ ಪರಿಪಾಲನೆಗಾಗಿ ಅವತರಿಸಿದವರು'' ಎಂದು ಹೇಳಿದರು. ಕಾರ್ಯಕ್ರಮದ ನಿರ್ದೇಶಕರಾದ ಶ್ರೀ 'ಶಿಶು' ಸಂಗಮೇಶ ಅವರು - " ವಿಶ್ವಗುರು ಬಸವಣ್ಣನವರ ವಿಶ್ವಮಾನ್ಯ ತತ್ತ್ವಗಳನ್ನು ಜಗತ್ತಿಗೆ ಪರಿಚಯ ಮಾಡಿಕೊಡುವದಕ್ಕಾಗಿ, ಜನಸಾಮಾನ್ಯರಿಗೂ ಅರ್ಥವಾಗುವ ಪೂಜ್ಯ ಮಾತಾಜಿಯವರು ಬರೆದ ಸಾಹಿತ್ಯವು ರಾಷ್ಟ್ರಭಾಷೆಯಾದ ಹಿಂದಿಗೂ, ವಿಶ್ವಭಾಷೆಯಾದ ಇಂಗ್ಲೀಷಕ್ಕೂ ತರ್ಜುಮೆಯಾಗಬೇಕೆಂದು ಹಾರೈಸಿದರು.

ಬಸವ ಜಯಂತಿಯ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಇಲಕಲ್ಲದ ಚಿತ್ತರಗಿ ಸಂಸ್ಥಾನ ಮಠದ ಪೀಠಾಧಿಕಾರಿಗಳಾದ ಪೂಜ್ಯ ಶ್ರೀ ಮ. ನಿ. ಪ್ರ. ಮಹಾಂತ ಸ್ವಾಮಿಗಳು – "ನಾವು ಹಲವು ಸಲ ಬಸವ ಜಯಂತಿಯ ಕಾರ್ಯಕ್ರಮಕ್ಕೆ ಬಂದಿದ್ದೆವು. ಆದರೆ ಇಷ್ಟೊಂದು ಪ್ರಚಂಡ ಜನಸಮುದಾಯವನ್ನು ಕಂಡಿರಲಿಲ್ಲ. ಜಗದ್ಗುರು ಮಾತೆ ಮಹಾದೇವಿಯವರು ತಮ್ಮ ವಿದ್ವತ್ತು ಪ್ರತಿಭೆಗಳಿಂದ ಇಷ್ಟೆಲ್ಲ ಜನರನ್ನು ಸೆರೆ ಹಿಡಿದಿದ್ದಾರೆ. ಮೂಢ ಸಂಪ್ರದಾಯವನ್ನೇ ನೆರೆ ನಂಬಿದ ಸಮಾಜದ ಪ್ರತಿಭಟನೆಯನ್ನು ಲೆಕ್ಕಿಸದೆ ನಿತ್ಯಸತ್ಯ ತತ್ತ್ವಗಳನ್ನು ಪ್ರತಿಪಾದಿಸಿ ಬಸವಣ್ಣನವರನ್ನು ಪರಿಚಯ ಮಾಡಿಕೊಟ್ಟವರು ಮಾತೆ ಮಹಾದೇವಿಯವರು. ಅವರು ಬರಿ ವ್ಯಕ್ತಿಯಲ್ಲ, ಮಹಾಶಕ್ತಿ. ಅವರ ಪ್ರವಚನವನ್ನು ಕೇಳಿ, ಅವರ ಸಾಹಿತ್ಯವನ್ನು ಓದಿ, ಬಸವಣ್ಣನವರ ಕೃಪೆಗೆ ಪಾತ್ರರಾಗಬೇಕೆಂದು ಆಶೀರ್ವದಿಸಿದರು.

ಅಣ್ಣನವರಿಗೆ ನಮನ

ಕಲ್ಯಾಣದಲ್ಲಿ ನೀಡುವವರಿದ್ದರು ಬೇಡುವವರಿರಲಿಲ್ಲ
ಮಹಿಳೆಯರೂ ಪುರುಷರೊಡನೆ ಸರಿಸಮಾನರು
ಮೇಲು ಕೀಳೆಂಬುದಿಲ್ಲ, ದುಡಿಮೆಯೇ ದೇವರು
ಇವಕ್ಕೆಲ್ಲಾ ಕಾರಣಕರ್ತರು ಬಸವಣ್ಣನವರು
ಅಂತಹ ಸಮಾಜೋದ್ಧಾರಕ ಅಣ್ಣನವರಿಗೆ ನಮನ.

ವೇದಾಂತಗಳನ್ನೆಲ್ಲಾ ಸರಳವಾಗಿ ಜನತೆಗೆ ಮುಟ್ಟಿಸಿದವರು
ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡವೆಂದವರು
ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲವೆಂದವರು
ನುಡಿದಂತೆ ನಡೆದು ತೋರಿದ ದೈವಾಂಶ ಪುರುಷರು
ಜಗಕೆ ದಾರಿ ತೋರಿಸಿದ ಜಗದಣ್ಣನವರಿಗೆ ನಮನ.

ದೇಹದ ಕಣ ಕಣವೂ ದೀನ ದಲಿತರಿಗೆಂದವರು
ಜೀವನದ ಕ್ಷಣ ಕ್ಷಣವೂ ಪರೋಪಕಾರಕ್ಕಿಟ್ಟವರು
ಅಣ್ಣನವರ ನುಡಿಗಳೆಲ್ಲಾ ಮಂತ್ರ ಘೋಷಗಳನ್ನೂ ಮೀರಿದ್ದು
ಅವರು ಬರೆದಿದ್ದೆಲ್ಲಾ ಸಾಹಿತ್ಯದಲ್ಲಿ ಅಜರಾಮರವಾದದ್ದು
ಬಸವಣ್ಣನವರ ದಾರಿಯಲ್ಲಿ ನಡೆಯುವವರಿಗೆಲ್ಲಾ ನಮನ.

ಅಣ್ಣನವರ ನುಡಿ ವಿಶ್ವದಾದ್ಯಂತ ಪ್ರಚಾರವಾಗಲಿ
ಅಣ್ಣನವರ ಜೀವನದ ಪರಿ ವಿಶ್ವವಿಖ್ಯಾತವಾಗಲಿ
ಎಲ್ಲ ಪ್ರಚಾರ ಮಾಧ್ಯಮಗಳೂ ಈ ಕ್ರಾಂತಿಯಲ್ಲಿ ಪಾಲ್ಗೊಳ್ಳಲಿ
ಎಲ್ಲ ವರ್ಗದ ಜನರೂ ಬಸವಣ್ಣನವರ ತತ್ವಗಳನು ಪಾಲಿಸಲಿ
ಅಣ್ಣನವರ ಆದರ್ಶಗಳನ್ನು ಪ್ರಚಾರ ಮಾಡುವವರಿಗೆಲ್ಲಾ ನಮನ.

—ಡಾ|| ಸಿ. ಅಶ್ವತ್

ಬಾ ಬಸವಾ

ಮತ್ತೊಮ್ಮೆ ಮರಳಿ ಬಾ ಬಸವಾ
ನಿನ್ನ ಬರುವನ್ನೇ ಕಾದು ನಿಂತಿಹೆವು ।

ಬಸವಾ ನೀ ಕಾಲಿಟ್ಟುದ್ದೇ ಕಲ್ಯಾಣವಾಯಿತು.
ನೀನಿದ್ದುದೇ ಅವಿಮುಕ್ತ ಕ್ಷೇತ್ರವಾಯಿತು.
ನೀ ನಡೆದುದೇ ಪರಮ ಪಾವನವೆನಿಸಿತು.
ನೀ ನುಡಿದುದೇ ವಚನ ವೇದವಾಯಿತು. ॥ ೧ ॥

ನೀ ನೋಡಿದ್ದು ಶಿವಮಯವೆನಿಸಿತು.
ನೀ ಕೇಳಿದ್ದು ಶಿವನಾಮವಾಯಿತು.
ನೀ ಮಾತನಾಡಿದ್ದೇ ಮಂತ್ರವಾಯಿತು.
ನೀ ಹಿಡಿದದ್ದೇ ಪರುಷವಾಯಿತು. ॥ ೨ ॥

ಜಾತಿಮತ ಪಂಥಗಳ ಭಾವ ತೊಲಗಿತು.
ನೀತಿ ತತ್ವ ನಿನ್ನ ರಾಜ್ಯದಿ ನೆಲೆಗೊಂಡಿತು.
ಕೂತು ತಿನ್ನದೆ ದುಡಿಯಲು ಕಲಿಸಿತು.
ಕಾಯಕದಿ ಕಲ್ಯಾಣ ಕೈಲಾಸ ಮಾಡಿತು. ॥ ೩ ॥

ನೀನಿದ್ದಲ್ಲೇ ಅನುಭವ ಮಂಟಪ ರಚಿತವಾಯಿತು.
ನಿನ್ನಿಂದಲೇ ಶರಣ ಸಮೂಹ ಸೇರಿತು.
ಶಿವ ತತ್ವಜ್ಯೋತಿ ಹೊತ್ತಿಕೊಂಡಿತು.
ಅಸಂಖ್ಯಾತ ಶರಣರೆದುರಿಗೆ ತೇಜದಿ ಬೆಳಗಿತು. ॥ ೪ ॥

ನೀನೆದ್ದು ಕುಳಿತ ರಾತ್ರಿಯೇ ಶಿವರಾತ್ರಿಯಾಯಿತು.
ನೀ ನಿದ್ರೆ ಹೋದರೆ ಮಹಾ ತಪವಾಯಿತು.
ನಿನ್ನ ಸ್ಪರ್ಶ ಮಾತ್ರದಲ್ಲಿ ಅಸ್ಪೃಶ್ಯತೆ ನಿವಾರಣೆಗೊಂಡಿತು.
ಜನಮನದಲ್ಲಿ ಬಸವನಾಮ ನೆಲೆಗೊಂಡಿತು. ॥ ೫ ॥

– ಶಿವರಾಜ ಪಾಟೀಲ ಮಹಾಂತಪೂರ

'ಕಲ್ಯಾಣ ಕಿರಣ' ಮಾಸ ಪತ್ರಿಕೆಯು ಪ್ರಭುದೇವ ಮುದ್ರಣಾಲಯ ಬಸವಗಂಗೋತ್ರಿಯಲ್ಲಿ ಮುದ್ರಣಗೊಂಡು, ವಿಶ್ವಕಲ್ಯಾಣ ಮಿಷನ್ ಸಂಸ್ಥೆಯಲ್ಲಿ ಪ್ರಕಾಶಿಸಲ್ಪಟ್ಟಿತು.

ಕಲ್ಯಾಣ ಕಿರಣ
ಮಾಸ ಪತ್ರಿಕೆ

ಸಂಸ್ಕೃತಿ, ಸಾಹಿತ್ಯ, ನೀತಿ, ಆಧ್ಯಾತ್ಮ ಮೌಲ್ಯಗಳ ಪ್ರಸಾರಕ್ಕೆ ಮೀಸಲಾದ ಪತ್ರಿಕೆ

ಗೌರವ ಸಂಪಾದಕರು :

ಪೂಜ್ಯ ಶ್ರೀ
ಜಗದ್ಗುರು ಮಾತೆ ಮಹಾದೇವಿ

ಸಂಪಾದಕರು :

ಶಿವರಾಜ ಪಾಟೀಲ

ಪ್ರಕಾಶಕರು :

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಪರವಾಗಿ
ಪ್ರಕಾಶನ ಪಡಿಸುವವರು :

ಶಿವರಾಜ ಪಾಟೀಲ

ಕೇಂದ್ರ ಕಾರ್ಯಾಲಯ :

ಕಲ್ಯಾಣ ಕಿರಣ ಮಾಸಪತ್ರಿಕೆ
ಬಸವ ಗಂಗೋತ್ರಿ,
ಕುಂಬಳಗೋಡು - ೫೬೦೦೭೪
ಬೆಂಗಳೂರು-ಮೈಸೂರು ಹೆದ್ದಾರಿ ೨೧ ಕಿ.ಮೀ.
ಬೆಂಗಳೂರು ದಕ್ಷಿಣ ತಾಲ್ಲೂಕು,
ಬೆಂಗಳೂರು ಜಿಲ್ಲೆ

ದೂರವಾಣಿ : ೩೪

ಮುದ್ರಕರು :

ಸೋದರಿ ಲೋಹಿತಾದೇವಿ
ಪ್ರಭುದೇವ ಮುದ್ರಣಾಲಯ,
ಕುಂಬಳಗೋಡು.

ಚಂದಾ ವಿವರ :

ಬಿಡಿ ಸಂಚಿಕೆ	:	ರೂ.	೨-೦೦
ವಾರ್ಷಿಕ ಚಂದಾ	:	ರೂ.	೨೦-೦೦
ಆಜೀವ ಸದಸ್ಯತ್ವ	:	ರೂ.	೨೦೦-೦೦
ಪೋಷಕರು	:	ರೂ.	೫೦೦-೦೦
ಮಹಾಪೋಷಕರು	:	ರೂ.	೧೦೦೧-೦೦

ಪತ್ರಿಕೆಯು ಪ್ರತಿ ತಿಂಗಳ ದಿನಾಂಕ ಮೂರರಂದು ಪ್ರಕಟವಾಗುವುದು. ಲೇಖಕರು ಲೇಖನಗಳನ್ನು ೧೦ ನೇ ದಿನಾಂಕದೊಳಗೆ ಕಳಿಸಬೇಕು.

ಪತ್ರಿಕೆಯ ಉದ್ದೇಶವಾದ ಧಾರ್ಮಿಕ ಸಾಂಸ್ಕೃತಿಕ ಎಲ್ಲಾ ಬಗೆಯ ತಾತ್ವಿಕ ವಿಚಾರಗಳ ಲೇಖನ, ಕಥೆ, ಕವನಗಳಿಗೆ ಸ್ವಾಗತವಿದೆ.


ಲೇಖನಗಳನ್ನು ಕಾಗದದ ಒಂದು ಮಗ್ಗುಲಿಗೆ ಸ್ಫುಟವಾಗಿ ಬರೆದಿರಬೇಕು. ಲೇಖಕರು ತಮ್ಮ ಹೆಸರು, ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ ರೂಪಾಂತರ ಅಥವಾ ಸಾಧಾರಣ ಲೇಖನಗಳಾದರೆ ಅದನ್ನು ಸ್ಪಷ್ಟವಾಗಿ ತಿಳಿಸಿ, ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರನ್ನು ಕಾಣಿಸಬೇಕು.

ಅಸ್ವೀಕೃತ ಲೇಖನ ಬೇಕಾಗಿದ್ದಲ್ಲಿ ಮರಳಿಸಲು ಬೇಕಾದ ಅಂಚೆ ವೆಚ್ಚಕ್ಕೆ ಅವಶ್ಯಕವಿರುವ ಸ್ಟಾಂಪುಗಳನ್ನೂ ಕಳಿಸಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

ಚಂದಾ ಹಣ ಕೊಡದೆ ಇದ್ದವರು ಪತ್ರಿಕೆ ತಲುಪಿದ ತಕ್ಷಣ ಕಳಿಸಬೇಕು.

ಹೊಸ ಚಂದಾದಾರರು ೨೦-೦೦ ರೂ (ಇಪ್ಪತ್ತು ರೂಪಾಯಿ) ಎಂ.ಓ. ಮಾಡಬೇಕು. (ವಿ. ಪಿ. ಇಲ್ಲ) ಚಂದಾದಾರರು ತಮ್ಮ ಪತ್ರ ವ್ಯವಹಾರಗಳಲ್ಲಿ ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು. ವಿಳಾಸ ಬದಲಾವಣೆಗಳನ್ನು ತಿಳಿಸಬೇಕು. ಚಂದಾದಾರರಾದ ತಿಂಗಳಿಂದ ಮರುವರ್ಷದ ಆ ತಿಂಗಳವರೆಗೆ ಪತ್ರಿಕೆಗಳನ್ನು ಕಳಿಸಲಾಗುವುದು.

Reg. No. KRNB 312
Licenced to post without pre-payment No. BGW-92



ವಿಶ್ವಧರ್ಮ ಪ್ರವಚನ ಪ್ರಾರಂಭೋತ್ಸವ ಕಾರ್ಯಕ್ರಮ ಸೋಮವಾರ
ದಿ|| 8-4-1985 (ಬಿಜಾಪುರ)

KALYANA KIRANA OFFICE
"Basava Gangothri", Kumbalgod – 560 074
Bangalore–Mysore Highway (21 k m.)
Bangalore South Taluk, Bangalore District.